6. ರಾಜ್ಯಪಾಲರ ಭಾಷಣದ ಮೇಲೆ ಮುಂದುವರೆದ ಚರ್ಚೆ:

ಶ್ರೀ ಎಸ್.ಟಿ. ಸೋಮಶೇಖರ್ (ಯಶವಂತಪುರ):– ಸನ್ಮಾನ್ಯ ಅಧ್ಯಕ್ಷರೆ, ನನಗೆ ಮಾತನಾಡಲಿಕ್ಕೆ ಅವಕಾಶ ಕೊಟ್ಟಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತೇನೆ. 2014–15 ರಲ್ಲಿ ಸಹಕಾರ ಕ್ಷೇತ್ರದಲ್ಲಿ ಮಹಿಳೆಯರಿಗೆ ವಿಶೇಷವಾಗಿ ಭಾಗವಹಿಸುವುದಕ್ಕೆ ಸರ್ಕಾರ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದೆ. ಅದರ ಜೊತೆಯಲ್ಲಿ SC/ST ಯವರಿಗೆ ಸರ್ಕಾರದವರೆ

ನೇರವಾಗಿ ಹಣಕಾಸು ಕೊಡುವ share fees ಏನಿದೆ ಅದನ್ನು ಕೊಡುವಂಥದ್ದು. ಅವರ ಹೆಚ್ಚುವರಿ ಷೇರನ್ನು ಜೊತೆಯಲ್ಲಿ ಅವರಿಗೆ ಚುನಾವಣೆಯಲ್ಲಿ ಭಾಗವಹಿಸುವಂಥದ್ದು ಮತ್ತು ಚುನಾವಣೆಯಲ್ಲಿ ಮತ ಹಾಕುವಂಥ ವ್ಯವಸ್ಥೆಯನ್ನು ಈ ಸರ್ಕಾರ ಮಾಡುತ್ತಿದೆ. ಹೆಚ್ಚಿನ ಪ್ರೋತ್ಸಾಹವನ್ನು ಸಹಕಾರ ಕ್ಷೇತ್ರಕ್ಕೆ ಕೊಡುತ್ತಿದ್ದಾರೆ. ಇನ್ನು ಹೆಚ್ಚಿನ ರೀತಿಯಲ್ಲಿ ಕೊಡಬೇಕೆಂದು ಸಹಕಾರ ಸಚಿವರಲ್ಲಿ ತಮ್ಮ ಮೂಲಕ ಮನವಿಯನ್ನು ಮಾಡುತ್ತಿದ್ದೇನೆ. ಅನ್ನಭಾಗ್ಯ ಯೋಜನೆಗೆ ಒಂದು ರೂಪಾಯಿಗೆ ಒಂದು ಕೆಜಿ ಅಕ್ಕಿಯನ್ನು ಕೊಡುತ್ತಿದ್ದಾರೆ. ಸುಮಾರು 1 ಕೋಟಿ BPL card ಕೊಡುವಂಥ ಕೆಲಸ ಕರ್ನಾಟಕ ಸರ್ಕಾರ ಮಾಡುತ್ತಿದೆ. ಇದರ ಜೊತೆಯಲ್ಲಿ APL card ಗೂ ಸಹ ಅಕ್ಕಿಯನ್ನು ಕೊಡುವಂಥ ಕೆಲಸವನ್ನು ಈ ಸರ್ಕಾರ ಮಾಡಬೇಕೆಂದು ತಮ್ಮ ಮೂಲಕ ಮನವಿಯನ್ನು ಮಾಡುತ್ತಿದ್ದೇನೆ. ಆರೋಗ್ಯ ಇಲಾಖೆಯಲ್ಲಿ APL ಕಾರ್ಡುದಾರರಿಗೆ ರಾಜೀವ್ ಆರೋಗ್ಯ ಭಾಗ್ಯ ಯೋಜನೆಯನ್ನು ತರುತ್ತಿರುವುದರಿಂದ APL ಕಾರ್ಡುದಾರರಿಗೆ ಎಲ್ಲಾ ರೀತಿಯ ಹೆಚ್ಚಿನ facilities ಕೊಡಬೇಕಾಗುತ್ತದೆ. ಮುಖ್ಯಮಂತ್ರಿಗಳ ಪರಿಹಾರ ನಿಧಿಯಲ್ಲಿ BPL card ಗೆ ಮಾತ್ರ ಕೊಡುತ್ತಿರುವ ಸಹಾಯಧನವನ್ನು APL card ಗೂ ಸಹ ವಿಸ್ತರಣೆ ಮಾಡಬೇಕೆಂದು ಹೇಳಿ ತಮ್ಮ ಮೂಲಕ ಮನವಿಯನ್ನು ಮಾಡುತ್ತಿದ್ದೇನೆ. ಅದೇ ರೀತಿ ಕಂದಾಯ ಇಲಾಖೆಯಲ್ಲಿ Pension Adalat ಅನ್ನು ವ್ಯವಸ್ಥಿತವಾಗಿ ಮಾಡುವ ಮೂಲಕ ಪ್ರತಿಯೊಬ್ಬರಿಗೂ pension ಕೊಡುವುದನ್ನು ಮಾಡುತ್ತಿದ್ದಾರೆ. ಹೋಬಳಿ ಮಟ್ಟದಲ್ಲಿ Pension Adalat ಮಾಡುತ್ತಿರುವುದನ್ನು ಸರ್ಕಾರ

ಜನಮೆಚ್ಚುಗೆಯನ್ನು ಗಳಿಸಿದೆ. ಅದೇ ರೀತಿ Revenue Adalat ಮಾಡುವ ಮೂಲಕ ಪಹಣಿ ಮತ್ತು ಖಾತಾಗಳಲ್ಲಿ ತಿದ್ದುಪಡಿ ಮಾಡುವಲ್ಲಿ ಏನು ನ್ಯೂನತೆಗಳಿವೆ, ಅದನ್ನು ಸರಿಪಡಿಸುವುದಕ್ಕೆ ಸರ್ಕಾರ ಯೋಜನೆಯನ್ನು ರೂಪಿಸಿದೆ. ಇವತ್ತು ಪ್ರತಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಆ Revenue Adalat ಮಾಡುವ ಮೂಲಕ ಯಾರು ತಹಶೀಲ್ದಾರ್, AC, ಜಿಲ್ಲಾಧಿಕಾರಿ ಕಛೇರಿಗಳಿಗೆ ಹೋಗುವಂಥ ಸಾಮಾನ್ಯ ರೈತರ ಅಲೆದಾಟವನ್ನು ತಪ್ಪಿಸುವ ಸಲುವಾಗಿ ಈ Revenue Adalat ಅನ್ನು ಆ ಪಂಚಾಯಿತಿ ಮಟ್ಟದಲ್ಲಿ ಮಾಡುವಂಥ ಒಂದು ಐತಿಹಾಸಿಕ ತೀರ್ಮಾನವನ್ನು ಮಾಡಿ ಆ ಪಹಣಿ ಇರಬಹುದು, ಖಾತೆ ಇರಬಹುದು ಸಣ್ಣ ಸಣ್ಣ ಬದಲಾವಣೆಯನ್ನು ಮಾಡುವಂಥ ಐತಿಹಾಸಿಕ ತೀರ್ಮಾನವನ್ನು ಸಹ ಮಾಡಿದ್ದಾರೆ. ವಿಶೇಷವಾಗಿ ಬೆಂಗಳೂರಿನಲ್ಲಿ land mafia ಇದೆ, ಯಾರು ಸರ್ಕಾರಿ ಭೂಮಿಯನ್ನು ಒತ್ತುವರಿ ಮಾಡಿದ್ದಾರೆ, ದೊಡ್ಡ ದೊಡ್ಡ institutions ಒತ್ತುವರಿ ಮಾಡಿದ್ದಾರೆ, ಆ ಎಲ್ಲಾ ಅಕ್ರಮ ಒತ್ತುವರಿಯನ್ನು ತೆರವುಗೊಳಿಸಿ ಸರ್ಕಾರದ ವಶಕ್ಕೆ ತೆಗೆದುಕೊಳ್ಳುವಂಥ ಐತಿಹಾಸಿಕ ತೀರ್ಮಾನವನ್ನು ಬೆಂಗಳೂರು ನಗರ ಜಿಲ್ಲಾಧಿಕಾರಿಗಳು ಮಾಡುತ್ತಿದ್ದಾರೆ, ಇದು ಬಹಳ ಒಳ್ಳೆಯ ಬೆಳವಣಿಗೆ ಎಂದು ಹೇಳಿ ಜೊತೆಗೆ ಎರಡು ವಿಶೇಷ ಜಿಲ್ಲಾಧಿಕಾರಿಗಳನ್ನು ಬೆಂಗಳೂರು ನಗರ ಜಿಲ್ಲೆಗೆ ನೇಮಿಸುವ ಮೂಲಕ ಎಲ್ಲೆಲ್ಲಿ ಸರ್ಕಾರದ ಜಾಗ ಒತ್ತುವರಿಯಾಗಿದೆ, ಅದನ್ನೆಲ್ಲಾ ತೆರವುಗೊಳಿಸುವಂಥ ಐತಿಹಾಸಿಕ ತೀರ್ಮಾನವನ್ನು ಈ ನಮ್ಮ ಸರ್ಕಾರ ಕೈಗೊಂಡಿದೆ. ಹೊಸದಾಗಿ ಗ್ರಾಮೀಣ ಮತ್ತು ಹಿಂದುಳಿದ ಪ್ರದೇಶಗಳಲ್ಲಿ ಹೊಸ ಕಾಲೇಜುಗಳನ್ನು ಮಾಡುವ ಮೂಲಕ ಇವತ್ತು ಎಲ್ಲಾ ಕಾಲೇಜುಗಳಲ್ಲಿ ಮಹಿಳೆಯರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅದರಿಂದ ಹೆಚ್ಚು ಹೆಚ್ಚು ಮಹಿಳಾ ಕಾಲೇಜುಗಳನ್ನು open ಮಾಡುವಂಥ ತೀರ್ಮಾನವನ್ನು ಸಹ ನಮ್ಮ ಸರ್ಕಾರ ಮಾಡಿದೆ. ವಿಶೇಷವಾಗಿ ಬೆಂಗಳೂರು ನಗರ ಜಿಲ್ಲೆಗೆ ಇವತ್ತೇನು 198 ವಾರ್ಡ್‌ಗಳಿವೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ ಸಾವಿರ ಕೋಟಿ ರೂಪಾಯಿಗಳ ಮೇಲೆ income ಬರುತ್ತಿದೆ. ಮುಖ್ಯಮಂತ್ರಿಗಳು ಕಳೆದ ಸಲ ಬೆಂಗಳೂರು ನಗರಕ್ಕೆ 1000 ಕೋಟಿ ರೂಪಾಯಿಗಳನ್ನು ನಗರೋತ್ಥಾನಕ್ಕೆ ಕೊಟ್ಟಿದ್ದರು. ಈ ವರ್ಷವೂ ಸಹ

ನಗರೋತ್ಥಾನಕ್ಕೆ 1000 ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರೋತ್ಥಾನಕ್ಕೆ ಕೊಡುವ ಮೂಲಕ ಬೆಂಗಳೂರು ನಗರ ಜಿಲ್ಲಾದ್ಯಂತ ಎಲ್ಲಾ ರಸ್ತೆಗಳನ್ನು ಚೆನ್ನಾಗಿ ಮಾಡುವಂಥ ಒಂದು ತೀರ್ಮಾನವನ್ನು ಸರ್ಕಾರ ಮಾಡಿದೆ. ಆದರೆ ವಿಶೇಷವಾಗಿ ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಬೆಂಗಳೂರಿನಲ್ಲಿ ಬೇಕಾದಷ್ಟು ಹಣ ಸಂಗ್ರಹಣೆ ಆಗುತ್ತಿರುವುದರಿಂದ ನಮ್ಮ ಮುಖ್ಯಮಂತ್ರಿಗಳು ಇನ್ನು ಹೆಚ್ಚಿನ ಅನುದಾನವನ್ನು ಕೊಡಬೇಕೆಂದು ತಮ್ಮ ಮೂಲಕ ಹೇಳಬಯಸುತ್ತೇನೆ. ಇವತ್ತು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯನ್ನು ಮೂರು ಅಥವ ನಾಲ್ಕು ಭಾಗಗಳನ್ನಾಗಿ ಮಾಡಬೇಕೆಂದು ಇವತ್ತೇನು ಸರ್ಕಾರ ಯೋಚನೆಯಿದೆ, ಅದಕ್ಕೆ ತಜ್ಞರು ಸಮಿತಿಯನ್ನು ಸಹ ಇವತ್ತೇನು ಸರ್ಕಾರ ಮಾಡಿದೆ, ಈ ಕೂಡಲೇ ಸರ್ಕಾರ ಆ ತಜ್ಞರ ಸಮಿತಿಯ ವರದಿಯನ್ನು ಮಾಡಿ 198 ವಾರ್ಡ್‌ಗಳಿರುವ 800 ಚದರ ಅಡಿಯಿರುವ ಬಿಬಿಎಂಪಿಯನ್ನು ವಿಭಾಗ ಮಾಡಿ administration ಅನ್ನು ಬಿಗಿ ಮಾಡಬೇಕು ಎಂದು ಸರ್ಕಾರದಲ್ಲಿ ಮನವಿ ಮಾಡುತ್ತಿದ್ದೇನೆ. ಕ್ರೀಡಾಪಟುಗಳಿಗೆ 11 ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆ. ರಾಜ್ಯ ಮಟ್ಟದ, ಅಂತರ್‌ರಾಜ್ಯ ಮಟ್ಟದ ಕ್ರೀಡಾಪಟುಗಳಿಗೆ ಇನ್ನು ಹೆಚ್ಚಿನ ರೀತಿಯಲ್ಲಿ ಸಹಕಾರವನ್ನು ಕೊಡಬೇಕು. ಕನ್ನಡ ಭಾಷೆಗೆ ಸರ್ಕಾರದವರು ನಿರಂತರವಾಗಿ ಆದ್ಯತೆ ನೀಡುವಂತೆ ಮಾಡುತ್ತೇವೆಂದು ಹೇಳುತ್ತಿದ್ದಾರೆ. ಅದು ಹೈಕೋರ್ಟ್ ಇರಬಹುದು, ಸಿಟಿ ಸಿವಿಲ್ ಕೋರ್ಟ್ ಇರಬಹುದು, ಆಮೇಲೆ ವಿಧಾನಸೌಧದಲ್ಲಿಯೂ ಸಹ ನಮ್ಮ ಎಷ್ಟೋ ಸಚಿವರುಗಳು ಇಂಗ್ಲೀಷ್‌ನಲ್ಲಿ ಸಹಿ ಮಾಡುವುದನ್ನು, ಇಂಗ್ಲಿಷ್‌ನಲ್ಲಿ ಬರೆಯುವುದನ್ನು ನೋಡಿದ್ದೇವೆ. ಅದಕ್ಕೆ ಕಡಿವಾಣ ಹಾಕುವ ಮೂಲಕ ಕರ್ನಾಟಕದಲ್ಲಿ ಕನ್ನಡ ಭಾಷೆಗೆ ಆದ್ಯತೆಯನ್ನು ಕೊಡಬೇಕಾಗುತ್ತದೆ ಎಂದು ಹೇಳಿ, ನನಗೆ ಮಾತನಾಡಲಿಕ್ಕೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ಧನ್ಯವಾದಗಳನ್ನು ಹೇಳಿ ನನ್ನ ಮಾತನ್ನು ಮುಕ್ತಾಯಗೊಳಿಸುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು):– ಸನ್ಮಾನ್ಯ ಉಪಾಧ್ಯಕ್ಷರೆ, ಮಾನ್ಯ ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಚರ್ಚೆ ಮಾಡಲಿಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ. ತಮಗೆ ಧನ್ಯವಾದಗಳನ್ನು ಅರ್ಪಣೆ ಮಾಡುತ್ತಿದ್ದೇನೆ. ಸನ್ಮಾನ್ಯ ರಾಜ್ಯಪಾಲರ ಭಾಷಣ ಎಂದರೆ ಅದು ಸರ್ಕಾರದ ನೀತಿ, ನಡಾವಳಿಕೆ ಮತ್ತು ನಿರ್ದಿಷ್ಟವಾದಂಥ ಗುರಿ ಯಾವ ರೀತಿ ಇರಬೇಕು. ಆಡಳಿತ ಹೇಗೆ ಹೋಗಬೇಕು, ನಮ್ಮ policy decisions ಏನೇನಿವೆ, ಇದರ ಬಗ್ಗೆ ಸಮಗ್ರವಾಗಿ ಆ ಇಡೀ ವರ್ಷದ ಒಂದು ಕೂಲಂಕಷವಾದ ವಿಚಾರವನ್ನು ಸನ್ಮಾನ್ಯ ರಾಜ್ಯಪಾಲರ ಮುಖಾಂತರ ಜನತೆಗೆ ತಿಳಿಸುವುದು, ಈ ಸದನಕ್ಕೆ ತಿಳಿಸುವಂಥ ವ್ಯವಸ್ಥೆಯಾಗಿದೆ. ಹೀಗಾಗಿ ಇದು ಪ್ರತಿವರ್ಷ ಈ ಒಂದು ಸಂಪ್ರದಾಯ ನಡೆದುಕೊಂಡು ಬರುವುದು. ಮಾನ್ಯ ಉಪಾಧ್ಯಕ್ಷರೆ, ಈಗ ಯಾರೂ ಅಧಿಕಾರಿಗಳೂ ಇಲ್ಲ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಾನ್ಯ ಮುಖ್ಯಮಂತ್ರಿಗಳು ಇರಬೇಕಾಗಿತ್ತು. ಪ್ರಮುಖ ಅಧಿಕಾರಿಗಳೂ ಸಹಿತ ಇಲ್ಲ.

ಉಪಾಧ್ಯಕ್ಷರು:– ಕರೆಸೋಣ ಇರ್ರಿ.

ಶ್ರೀ ಟಿ.ಬಿ. ಜಯಚಂದ್ರ:– ನಾನು ಇದ್ದೀನಲ್ಲಾ?

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಜಯಚಂದ್ರರವರು ಒಬ್ಬರಿದ್ದಾರೆ. 2–3 ಜನರು ಮಿನಿಸ್ಟರ್ಸ್ ಇದ್ದಾರೆ.

ಉಪಾಧ್ಯಕ್ಷರು:– ಮಂತ್ರಿಗಳೆ, ಅಧಿಕಾರಿಗಳನ್ನು ಕರೆಸಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಚಂಚನಸೂರುರವರು ಇದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ಕರೆಕ್ಟ್ ರ್ರೀ. ನೀವು, ಚಿಂಚನಸೂರು ಹಾಗೂ ದಿನೇಶ್ ಗುಂಡೂರಾವ್‌ರವರು ಇದ್ದೀರಿ. ಅಧಿಕಾರಿಗಳು ಒಬ್ಬರೂ ಇಲ್ಲ. Secretary ಯವರು, ಹಿರಿಯ ಅಧಿಕಾರಿಗಳು ಒಬ್ಬರೂ ಇಲ್ಲ. ಮುಖ್ಯವಾಗಿ ಮಾನ್ಯ ಮುಖ್ಯಮಂತ್ರಿಗಳೂ ಇರಬೇಕಾಗಿತ್ತು.

(ಗೊಂದಲ)

ಶ್ರೀ ಪಿ. ರಾಜೀವ್:– ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಮಂತ್ರಿಗಳು busy ಇರಬಹುದು. ಆದರೆ, ಅಧಿಕಾರಿಗಳ ಕುರ್ಚಿಗಳು ಖಾಲಿಯಿರುತ್ತವೆ ಎಂದರೆ ಈ ಸರ್ಕಾರದ ಹಿಡಿತ ಅಧಿಕಾರಿಗಳ ಮೇಲೆ ಯಾವ ಮಟ್ಟದಲ್ಲಿದೆ ಎಂಬುದು ಗೊತ್ತಾಗುತ್ತದೆ. ಮಂತ್ರಿಗಳು busy ಇದ್ದು Council ನಲ್ಲಿರಬಹುದು. ವಿರೋಧ ಪಕ್ಷದ ನಾಯಕರು ಮಾತನಾಡುವಾಗ ಅಧಿಕಾರಿಗಳು ಇರುವುದಿಲ್ಲವೆಂದರೆ ಹೇಗೆ?

(ಗೊಂದಲ)

ಉಪಾಧ್ಯಕ್ಷರು:– ಕರೆಸಿ.

ಶ್ರೀ ಎನ್.ಹೆಚ್. ಕೋನರೆಡ್ಡಿ:– ಎಲ್ಲಾ ಶಾಸಕರು ಶೂನ್ಯ ವೇಳೆಯಲ್ಲಿ ಉತ್ತರ ಕೇಳಿದರೆ ಅದಕ್ಕೆ ಶೂನ್ಯ ಉತ್ತರ.

ಶ್ರೀ ಎಸ್. ಸುರೇಶ್ ಕುಮಾರ್:– ಅವರು ಬಂದಮೇಲೆ ಮಾತನಾಡುತ್ತಾರೆ.

ಉಪಾಧ್ಯಕ್ಷರು:– ಇಲ್ಲ, ಕರೆಸುತ್ತಾರೆ ಬಿಡಿ.

ಶ್ರೀ ಟಿ.ಬಿ. ಜಯಚಂದ್ರ:– ಮಾನ್ಯ ಉಪಾಧ್ಯಕ್ಷರೆ, ಕರೆಸುತ್ತೇವೆ. ಮಹದೇವಪ್ರಸಾದ್‌ರವರೆ ಬನ್ನಿ.

ಉಪಾಧ್ಯಕ್ಷರು:– ಮಂತ್ರಿಗಳನ್ನು ಕರೆಸಿ. ಅಲ್ಲಿ ಆ ಹೌಸ್‌ನಲ್ಲಿದ್ದಾರೆ.

ಶ್ರೀ ಎಸ್. ಸುರೇಶ್ ಕುಮಾರ್:– ಮಂತ್ರಿಗಳು ಎಂದು ಅಲ್ಲ. ಅಲ್ಲಿ ಆ front row ನೋಡಿ. ಈ front row ನೋಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ಆಫೀಸರ್ಸ್ ಇಲ್ಲ. ಆಫೀಸರ್ಸ್ ಯಾರಿದ್ದಾರೆ? At least ನೋಟ್ ಮಾಡಿಕೊಳ್ಳುವವರು ಬೇಕಲ್ಲಾ?

ಶ್ರೀ ಟಿ.ಬಿ. ಜಯಚಂದ್ರ:– ನೋಟ್ ಮಾಡಿಕೊಳ್ಳುವವರು ಇದ್ದಾರೆ. ಅದಕ್ಕೆ ಏನೂ ತೊಂದರೆಯಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ:- ಸರ್ ಈ ರೀತಿ ಸದನ ನಡೆಸಿದರೆ ಹೇಗೆ?

ಶ್ರೀ ಚಂದ್ರಶೇಖರ್ ಮಾಮನಿ:- ಹೀಗೆ ಮಾಡುತ್ತಾರೆ, ತಿಳುವಳಿಕೆ ಹೇಳಿ ಸರ್. ಇದು ರೆಕಾರ್ಡ್‌ಗೆ ಹೋಗುವುದಲ್ಲವೇ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ನೀವೇ ಹೇಳ್ರಿ, ನೀವು ಈಗ ಸೀನಿಯರ್ ಇದ್ದೀರಿ.

SRI BASAVARAJ BOMMAI:- This Government is totally paralyzed. None of the officers are here.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಉಪಾಧ್ಯಕ್ಷರೆ, ಕರೆಸುತ್ತೇವೆ. ವಿರೋಧ ಪಕ್ಷದ ನಾಯಕರು ಭಾಷಣ ಮುಂದುವರೆಸಲಿ. ನಾನು ಇರುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಕಾನೂನು ಸಚಿವರಾದ ನೀವೇ ಹೇಳಿ. ಇಷ್ಟು ವರ್ಷ ಸದನ ನಡೆಸಿದ್ದೀರಿ. ಈ ರೀತಿ ಸದನ ನಡೆಸಿದ್ದೀರಾ? ನೀವೇ ಈ ಕಡೆ ಇದ್ದಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಿರಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಕಾರಜೋಳರವರೆ, . ..

ಶ್ರೀ ಕೆ. ಶಿವಮೂರ್ತಿ:- ನೀವು ಹೇಳಿದ್ದನ್ನೆಲ್ಲಾ ನೋಟ್ ಮಾಡಿಕೊಳ್ಳುತ್ತಾರೆ..

ಶ್ರೀ ಗೋವಿಂದ ಎಂ. ಕಾರಜೋಳ:- ನೀವು ಈ ಜಾಗದಲ್ಲಿ ಕುಳಿತಿದ್ದರೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಿರಿ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಈಗಿನ ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ಸ್ಥಾನದಲ್ಲಿದ್ದಾಗ ಮಾನ್ಯ ಜಗದೀಶ್ ಶೆಟ್ಟರ್‌ರವರು ಆಗ

ಮುಖ್ಯಮಂತ್ರಿಗಳಾಗಿದ್ದರು. ಅನೇಕ ಜನರು ಅಧಿಕಾರಿಗಳಿದ್ದಾಗಲೂ ಕೂಡ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಸಚಿವರು ಕಡ್ಡಾಯವಾಗಿ ಇರಬೇಕೆಂದು ಅವರು ವಾದವನ್ನು ಮಾಡಿದ್ದರು. ಇವತ್ತು ಯಾರೂ ಇಲ್ಲ. ಮಾನ್ಯ ಉಪಾಧ್ಯಕ್ಷರೆ, ಬೇರೆ ವಿಷಯ ತೆಗೆದುಕೊಳ್ಳಿ. ಬೇಕಾದರೆ ಆಮೇಲೆ ಮಂತ್ರಿಗಳು ಹಾಗೂ ಅಧಿಕಾರಿಗಳೆಲ್ಲರೂ ಬಂದಮೇಲೆ ಮಾತನಾಡಿ.

ಶ್ರೀ ಗೋವಿಂದ ಎಂ. ಕಾರಜೋಳ:- ಕಲಾಪವನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿಬಿಡಿ. ಅವರು ಬರಲಿ. ಅವರು ಬಿಡುವು ಮಾಡಿಕೊಂಡು ಬಂದಮೇಲೆ ಶುರು ಮಾಡೋಣ. ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮಂತ್ರಿಗಳಿಗೆ ಯಾವಾಗ ಬಿಡುವು ಆಗುತ್ತದೆ, ಆಗ ಕಾರ್ಯಕಲಾಪ ಶುರು ಮಾಡೋಣ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ:- ವಿರೋಧ ಪಕ್ಷದ ನಾಯಕರು ಮಾತನಾಡುವಾಗ ನಿಮ್ಮವರೇ ಯಾರೂ ಇಲ್ಲ. ನಿಮ್ಮವರೇ ಕುಳಿತುಕೊಳ್ಳುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ್ ಬೊಮ್ಮಾಯಿ:- ಮಂತ್ರಿಮಂಡಲದ ಭಿನ್ನಾಭಿಪ್ರಾಯ ಬಗೆಹರಿಸಿಬಿಟ್ಟು ಬರುತ್ತೀರೋ ಏನೊ? ಸದನಕ್ಕೆ ಅದನ್ನಾದರೂ ಹೇಳಿ. ಏನಾದರೂ ಭಿನ್ನಾಭಿಪ್ರಾಯಗಳಿವೆಯೇ? ಅವನ್ನು ಬಗೆಹರಿಸಿ ಬರುತ್ತೀರಾ?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಅವರಿಗೆ ಬಿಡುವಾದಾಗ ಕಾರ್ಯಕಲಾಪ ತೆಗೆದುಕೊಳ್ಳೋಣ. ದಯವಿಟ್ಟು ಮುಂದಕ್ಕೆ ಹಾಕಿ. ಇದು ಬದ್ಧತೆ ಅಲ್ಲ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ:- ನಿನ್ನೆ ಎಲ್ಲಾ ಮಂತ್ರಿಗಳು ಇದ್ದರು.

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:- ಏನು ಹಾಗೆ ಹೇಳಿದರೆ? ಇವತ್ತಿನದು ಇವತ್ತಿಗೆ ಇರುವುದು ಬೇಡವೇ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇವತ್ತಿನದು ಹೇಳ್ರಿ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ರಾಮಲಿಂಗಾರೆಡ್ಡಿಯವರೆ, ನೀವು ಹಿರಿಯ ಸದಸ್ಯರಿದ್ದೀರಿ. ನಿನ್ನೆ ಇದ್ದರು ಎಂದರೆ ಅರ್ಥವೇನು? ಇವತ್ತು ಬೇಡವೇ? ನೀವು ಸರ್ಕಾರ ನಡೆಸುವವರು.

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್:- ಇದೊಂದು fashion ಆಗಿಬಿಟ್ಟಿದೆ. ಮಾನ್ಯ ಮಂತ್ರಿಗಳು ಇಲ್ಲವೆಂದು ಹೇಳುವುದು, ಆಫೀಸರ್ಸ್ ಇಲ್ಲವೆಂದು ಹೇಳುವುದು. ಈಗ ಮಾನ್ಯ ಬಸವರಾಜ್ ಬೊಮ್ಮಾಯಿಯವರು ಏನಾದರೂ ಭಿನ್ನಾಭಿಪ್ರಾಯಗಳಿದ್ದರೆ ಹೇಳಿ ಎಂದು ಹೇಳಿದರು. ಬಹಳ ಕಳಕಳಿಯಿಂದ ನಾನು ನಿಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಾವೆಲ್ಲರೂ ಕೂಡ ಸೀರಿಯಸ್ ಆಗಿ self introspection ಮಾಡಿಕೊಳ್ಳೋಣ. ಈ ಸದನದ ಗೌರವ, ಕಲಾಪಗಳು ಇದರ ಬಗ್ಗೆ how serious are we?

ಶ್ರೀ ಬಸವರಾಜ್ ಬೋಮ್ಮಾಯಿ:- ಸರ್, ತಾವು generalize ಮಾಡುವುದಕ್ಕೆ ಹೋಗಬೇಡಿ. ದಯವಿಟ್ಟು ಇದನ್ನು generalize ಮಾಡುವುದಕ್ಕೆ ಹೋಗಬೇಡಿ. ದಯಮಾಡಿ ಹೇಳಿ.

SRI K.R.RAMESH KUMAR:- Please hear me.

ಶ್ರೀ ಬಸವರಾಜ್ ಬೋಮ್ಮಾಯಿ:- ಸರ್, ನೀವು ಸೀನಿಯರ್ ಇದ್ದೀರಿ. ನೀವು ಅದನ್ನು generalize ಮಾಡಿದರೆ . . .

ಶ್ರೀ ಕೆ.ಆರ್. ರಮೇಶ್ ಕುಮಾರ್:- ಇಲ್ಲಿ ಕೇಳಿ. Please listen to me. I am not holding any defence.

ಶ್ರೀ ಬಸವರಾಜ್ ಬೊಮ್ಮಾಯಿ:- ಈಗ ವಿರೋಧ ಪಕ್ಷದ ನಾಯಕರು ಮಾತನಾಡುವಂತಹ ಸಂದರ್ಭದಲ್ಲಿ ಈ ವಿಷಯವನ್ನು ನಾನು ಮಾತನಾಡಿದ್ದೇನೆ.

(ಗೊಂದಲ)

SRI. K.R. RAMESH KUMAR:- Mr. Basavaraj, kindly listen to me. I am not holding any defence for anybody. ನಾನು ಇಂತಹ ವಿಚಾರಗಳನ್ನು ಸರ್ಕಾರಕ್ಕೆ defence ಮಾಡುವಂತಹ ಮಟ್ಟಕ್ಕೆ ನಾನು ಇನ್ನೂ ಇಳಿದಿಲ್ಲ. ನಾನು ಏನು ಹೇಳುತ್ತೇನೆ ಎಂದರೆ, as a whole, ಅವರು Speaker ಆಗಿ ಕೆಲಸ ಮಾಡಿದ್ದಾರೆ, ಮುಖ್ಯಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ ಹಾಗೂ Opposition Leader ಆಗಿದ್ದಾರೆ. Opposition role ಏನು? Governor's address ಎಂದರೇನು? ಅದಕ್ಕೆ ಇರುವಂತಹ seriousness ಏನು? Members ಹೇಗೆ ಹೇಗೆ ಇರಬೇಕು? ಯಾರು initiate ಮಾಡಬೇಕು? ಏನೇನು issues ಅವರು ಕವರ್ ಮಾಡುತ್ತಾರೆ? See, ನಾವು ಎಲ್ಲಾ complete ಆಗಿ, we have given a good bye to all the values. It is very painful. ನಾವು ಇದನ್ನು ಒಂದು formality ಎಂದು ಮಾಡುತ್ತಿದ್ದೇವೆ. How did this start in the parliamentary democracy? Why was this introduced? Where did it start? ಅದಕ್ಕೆ ಇರತಕ್ಕಂತಹ ವೈಭವವೇನು, ಮಹತ್ವವೇನು, ಹಿನ್ನೆಲೆಯೇನು? ನಮ್ಮ ಶಾಸಕರಿಗಂತೂ, ಹೊಸದಾಗಿ ಬಂದಿರುವಂತಹ ಅನೇಕ ಶಾಸಕರಿಗೆ ಇದರ ಬಗ್ಗೆ zero knowledge ಇದೆ. ಪಾಪ, ನಾವು ಅವರಿಗೆ ತಿಳಿಸಬೇಕಲ್ಲವೇ? ನಾವು ಏನೂ effort ಕೂಡ ಮಾಡುತ್ತಿಲ್ಲ, orientation ಇಲ್ಲ. See, all of us should be present. Just not the Chief Minister, Ministers and the officers. Look at the attendance. ಎಲ್ಲೋ ಒಂದು ಕಡೆಗೆ at this rate, ಈ institutions ನ validity ಏನಾಗುತ್ತದೆ in days to come? ಇವುಗಳ ಅಸ್ತಿತ್ವದ ಪ್ರಶ್ನೆಯೇ ಉದ್ಭವವಾಗಿಬಿಡುತ್ತದೆ. ಎಲ್ಲೋ ಒಂದು ಕಡೆಗೆ..., In fact ನಾನು ಲೈಬ್ರರಿಯಿಂದ ಬಂದೆ. One hour late ಆಗಿ ಬಂದೆ. I was not very sure

that the House would resume its presence. I really wanted to go right from 1950 to..., ರಾಷ್ಟ್ರ ಪತಿ ಭಾಷಣದ ಮೇಲೆ ರಾಜ್ಯಸಭೆಯಲ್ಲಿ ಏನಾಗಿದೆ, ಲೋಕಸಭೆಯಲ್ಲಿ ಏನಾಗಿದೆ, ಈ House ನಲ್ಲಿ 1956 ರಲ್ಲಿ ಏನಾಗಿದೆ, 1957ರಲ್ಲಿ ಏನಾಗಿದೆ, I wanted to go to all the details. ಎಲ್ಲೋ ಒಂದು ಕಡೆಗೆ I think, ತಾವು Business Advisory Committee ಯಲ್ಲಿ ಕರೆಯಿರಿ, ಅಧ್ಯಕ್ಷರೊಂದಿಗೂ ಮಾತನಾಡೋಣ. We must address this question to ourselves. All the respective parties and the leaders, ನಮ್ಮ members ಅನ್ನು ತಯಾರು ಮಾಡುವುದು ಇದೆ. You have a big responsibility as Opposition. ಅವರು ಅಧಿಕಾರದಲ್ಲಿದ್ದಾರೆ ಎನ್ನುವ ಮದದಿಂದ ಅಥವಾ ಬೇಜವಾಬ್ದಾರಿಯಿಂದ ಅವರು ಸ್ವಲ್ಪ ಹಾಗೆ ಇರುತ್ತಾರೆ. But you have got to be more alert. Your members will have to be trained. ಈ ಕಡೆ ಬಿಡಿ. ನಮಗೆ ಅರ್ಥವೇ ಆಗುವುದಿಲ್ಲ. What is the total strength of the Ministry? Parliamentary Affairs Minister is here. ಕೌನ್ಸಿಲ್‌ಗೆ ಇಂತಿಷ್ಟು ಜನ ಹಾಗೂ ಅಸೆಂಬ್ಲಿಗೆ ಇಂತಿಷ್ಟು ಜನ ಎಂದು you allocate the business.

A minister should either be in the Council or be here. If he is not in both the Houses, if he is on any official business either out side the country or to Delhi or some place, ನಿಮ್ಮ ಹತ್ತಿರ communication ಇರಬೇಕು. ಅಥವಾ ಎರಡೂ ಹೌಸ್‌ಗಳಿಗೆ ಬರುವುದಕ್ಕೆ ಆಗದೇ ಇರುವಂತಹ ಅನಾರೋಗ್ಯವಿದ್ದರೆ, that should be communicated. ಎಲ್ಲಿಗೆ ಹೋಗುತ್ತಾರೆ ಎಂದು ಇರಬೇಕು. Nobody is doing a charitable work here. We are all paid. ಸಹಿ ಹಾಕಿದ ತಕ್ಷಣ ಸಾಯಂಕಾಲಕ್ಕೆ ನಮ್ಮ ಅಕೌಂಟ್‌ಗೆ ಹಣ deposit ಆಗುತ್ತದೆ. ನಮಗೆ ನಾಚಿಕೆ ಬೇಡವೇ? ಆತ್ಮಗೌರವ ಬೇಡವೇ? ತೆರಿಗೆದಾರರು ತಮ್ಮ ಬೆವರು ಸುರಿಸಿ ದುಡಿದ ಹಣವನ್ನು ನಮಗೆ ಕೊಡುತ್ತಾರೆ. ನಾವು ಅವರ ಋಣವನ್ನು ಯಾವಾಗ ತೀರಿಸುವುದು? ನಮ್ಮ ನಡವಳಿಕೆಯಲ್ಲಿ ಅವನು ನಮ್ಮನ್ನು ನೋಡಿ ನಾಚಿಕೆಯಿಂದ ತಲೆತಗ್ಗಿಸಬೇಕೇ ಅಥವಾ ಹೆಮ್ಮೆಯಿಂದ ತಲೆಎತ್ತಿಕೊಂಡು ತಿರುಗಬೇಕಾ? This is the issue. It is not the question of summoning a few officers to the galleries or asking the Ministers to be

present. The dedication, that is very important Basavaraj. I am talking it on a very broader perspective.

SRI BASAVARAJ BOMMAI:- That is what I said Sir.

ಶ್ರೀ ಕೆ.ಆರ್. ರಮೇಶ್ ಕುಮಾರ್:- ನಾನು generalize ಮಾಡುವಂತಹದ್ದು ಅಲ್ಲ ಅಥವಾ ಯಾರಿಗೂ defend ಮಾಡುವುದು ಮಾಡುತ್ತಿಲ್ಲ.

SRI BASAVARAJ BOMMAI:- Sir, we really agree and appreciate both of your points. ಇಲ್ಲಿ ಪ್ರಶ್ನೆ ಏನೆಂದರೆ, in our democracy, because of different backgrounds and everything, certain small aberrations will be happening. That keeps our democracy alive. Along with the aberrations there should be corrections. Continuous corrections ಆಗುತ್ತಿರಬೇಕು. ಈಗ ಈ ಸದನದಲ್ಲಿ who should lead that? The Government should lead it, the Minister should lead it, Council of Ministers should lead it. ಒಂದು ಸಲ Ministers ಮತ್ತು ನಾವು ಶಾಸಕರು lead ಆದರೆ that will give a message to the officers. ಇವತ್ತು Government ನಡೆಸುವವರು ಈ ರೀತಿ ಇದ್ದರೆ officers ಹೇಗೆ? ನೀವು masters ಕೇಳುವುದಿಲ್ಲವೆಂದರೆ servants ಹೇಗೆ ಮಾಡುತ್ತಾರೆ? ಅವರಿಗೆ ಈಗ ಭಯವೇ ಇಲ್ಲ. ನಾನು House ಗೆ ಬರಬೇಕು ಎನ್ನುವಂತಹ ಭಯ ಯಾವುದೇ secretary ಗಳಿಗೂ ಇಲ್ಲ. ನಾನು ಬರಲಿಲ್ಲವೆಂದರೆ ಕೇಳುತ್ತಾರೆ ಎನ್ನುವ ಭಯವೂ ಅವರಿಗೆ ಇಲ್ಲ. ಯಾವುದೂ ಭಯಭೀತಿಯಿಲ್ಲದೇ . ..

SRI K.R. RAMESH KUMAR:- I fully endorse. ನೀವು ಹೇಳಿದ್ದನ್ನು ಪೂರ್ತಿ endorse ಮಾಡುತ್ತೇನೆ. ಸತತವಾಗಿ, ಕ್ರಮೇಣ ಅವರಿಗೆ ಭಯವೂ ಹೋಗಿದೆ ನಮಗೆ ಜವಾಬ್ದಾರಿಯೂ ಹೋಗಿದೆ.

ಶ್ರೀ ಬಸವರಾಜ್ ಬೊಮ್ಮಾಯಿ:- ಒಂದು duty conscious ಆದರೂ ಇರಬೇಕು. ಇಲ್ಲದಿದ್ದರೆ ಭಯವಾದರೂ ಇರಬೇಕು. ಯಾವುದೂ ಇಲ್ಲವೆಂದರೆ

ನಾವು ಇವತ್ತು ಎಲ್ಲವನ್ನೂ generalize ಮಾಡಿಕೊಂಡರೆ ಹೇಗೆ? ಈಗ ಇಲ್ಲಿಂದ ಪ್ರಾರಂಭವಾಗಲಿ. ನಾವು ಆತ್ಮಾವಲೋಕನ ಮಾಡೋಣ. ಇಲ್ಲವೆಂದು ನಾನು ಹೇಳುವುದಿಲ್ಲ. But Ministers have got specific responsibly. You have taken the entire responsibility of running this Government for the people. ಇಡೀ ರಾಜ್ಯಕ್ಕೆ ನೀವು ಜನತೆಗೆ ಹೇಳಿದ್ದೀರಿ. ನಿಮ್ಮ welfare ನೋಡಿಕೊಳ್ಳುವಂತಹದ್ದು ನಮ್ಮ ಜವಾಬ್ದಾರಿ ಎಂದು ಹೇಳಿದ್ದೀರಿ. ಈ ಸದನದಲ್ಲಿ ಆ welfare ಬಗ್ಗೆ ಚರ್ಚೆ ಮಾಡುವಂತಹ ಸಂದರ್ಭದಲ್ಲಿ, ಅದೂ ಒಟ್ಟಾರೆ. ಯಾವುದೋ ಒಂದು subject ಇದೆ, concerned ಇದೆ ಎನ್ನುವುದಲ್ಲ. Governor's address ಎಂದರೆ ಇಡೀ ರಾಜ್ಯದ ಆಗುಹೋಗುಗಳ ಬಗ್ಗೆ ಚರ್ಚೆ ಮಾಡುವುದಕ್ಕೆ ಇರುವುದು. ಆಕಾಶದವರೆಗೂ ಎಲ್ಲಾ subject ಗಳಿಗೆ ಅವಕಾಶವಿದೆ ಎಂದು ನೀವೇ ಹೇಳಿದ್ದೀರಿ. ಅಂತಹ ಸಂದರ್ಭದಲ್ಲಿ ಈ ತರಹದ ಬೇಜವಾಬ್ದಾರಿಯಾದರೆ ಏನು ಸಂದೇಶ ಕಳುಹಿಸುತ್ತೀರಿ ನೀವು? What message you are going to send? That is the whole issue.

ಉಪಾಧ್ಯಕ್ಷರು:- OK. ಆಯಿತು ಬಸವರಾಜ್. ಅವರು ಮುಂದುವರೆಸುತ್ತಾರೆ.

ಶ್ರೀ ಬಸವರಾಜ್ ಬೊಮ್ಮಾಯಿ:- ಅಲ್ಲ ಯಾರಿಗೂ ಅನಾನೂಕೂಲತೆಯಿದ್ದು ಬರಲಿಲ್ಲವೆಂದರೆ ಪರವಾಗಿಲ್ಲ. We can also understand. But, what message in the overall ನಾವು ಕಳುಹಿಸುತ್ತಿದ್ದೇವೆ ಎಂದು ನಾವು ಕಳಕಳಿಯಿಂದ ಹೇಳಿದ್ದೇವೆಯೇ ಹೊರತಾಗಿ ಇದರಲ್ಲಿ ಏನೂ prestige ಇಲ್ಲ.

ಉಪಾಧ್ಯಕ್ಷರು:- ಅವರು ಬಂದಿದ್ದಾರೆ, ಜಗದೀಶ್ ಶೆಟ್ಟರ್‌ರವರೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:- ಯಾರೂ ಬಂದಿಲ್ಲ. ಇಷ್ಟು ಆದಮೇಲೆ ಏನೂ ಆಗಲಿಲ್ಲ ಸರ್. 10 minutes ಆದರೂ ..., ಯಾರಿಗೂ ಇದರ ಬಗ್ಗೆ responsibility ಇಲ್ಲ.

ಉಪಾಧ್ಯಕ್ಷರು:– Ministers ಈ ಕಡೆ ಇದ್ದಾರೆ.

ಉಪಾಧ್ಯಕ್ಷರು:– ಬಂದಿದ್ದಾರೆ. ಜಗದೀಶ್ ಶೆಟ್ಟರ್‌ರವರೆ ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:– ಯಾರು ಬಂದಿದ್ದಾರೆ? ಇಷ್ಟು ತಾಳ್ಮೆಯಿಂದ ಹೇಳುವ ಹಾಗಿಲ್ಲ ಸಾರ್. ಯಾರಿಗೂ ಕೂಡ ಜವಾಬ್ದಾರಿಯಿಲ್ಲ.

ಉಪಾಧ್ಯಕ್ಷರು:– ಸಚಿವರೆಲ್ಲಾ ಈ ಕಡೆ ಇದ್ದಾರೆ ನೀವು ಮಾತನಾಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ದಯವಿಟ್ಟು ನಿಮ್ಮ ಅಧ್ಯಕ್ಷತೆಯಲ್ಲಿ ಅಧಿಕಾರಿಗಳನ್ನು ಕರೆಸಿ. ಹಿರಿಯ ಶಾಸಕರಾದ ರಮೇಶ್ ಕುಮಾರ್‌ರವರು, ಬಸವರಾಜ ಬೊಮ್ಮಾಯಿರವರು, ವಿರೋಧಪಕ್ಷದ ನಾಯಕರು ಎಲ್ಲಾ ಮಾತನಾಡಿದರು, ಇಷ್ಟೆಲ್ಲಾ ಆದ ನಂತರ ಕೂಡ ಅಧಿಕಾರಿಗಳು ಸದನಕ್ಕೆ ಬರದಿದ್ದರೆ wrong message pass ಆಗುತ್ತದೆ. ಪ್ರಧಾನ ಕಾರ್ಯದರ್ಶಿಗಳಿಗೆ ಏನು ಕೆಲಸವಿದೆ. ಅವರನ್ನು ಕರೆಸಿ. ಇಷ್ಟೆಲ್ಲಾ ಆದ ನಂತರ ಕೂಡ ಪ್ರಧಾನ ಕಾರ್ಯದರ್ಶಿಗಳು ಸದನಕ್ಕೆ ಬರುವುದಕ್ಕೆ ತಯಾರಿಲ್ಲವೆಂದರೆ ಸರ್ಕಾರಕ್ಕೆ ಜವಾಬ್ದಾರಿಯಿಲ್ಲವೆಂದು ಆಯಿತಲ್ಲವೇ? ಸದನವನ್ನು ಅರ್ಧಗಂಟೆ ಕಾಲ ಮುಂದಕ್ಕೆ ಹಾಕಿ. ಅಧಿಕಾರಿಗಳಿಗೆ message ಹೋಗಲಿ.

ಶ್ರೀ ಬಸವರಾಜ ಬೊಮ್ಮಾಯಿ:– ಶೂನ್ಯ ವೇಳೆ ಪ್ರಾರಂಭವಾಗಿ ಅರ್ಧ ಗಂಟೆ ಆಯಿತು ಅರ್ಧ ಗಂಟೆ ಆದ ನಂತರ ಕೂಡ ಬರಲಿಲ್ಲವೆಂದರೆ ಹೇಗೆ? ಸದನವನ್ನು ಅರ್ಧ ಗಂಟೆ ಮುಂದಕ್ಕೆ ಹಾಕಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇದಕ್ಕೆ ಮಹತ್ವ ಬರಬೇಕೆಂದರೆ ಮಂತ್ರಿಗಳಿಗೆ, ಶಾಸಕರಿಗೆ ಮತ್ತು ಅಧಿಕಾರಿಗೆ ಮೆಸೇಜ್ ಹೋಗಬೇಕು. ಬೆಂಗಳೂರಿನಿಂದ ಬರುವ ಶಾಸಕರ ಹಾಜರಾತಿಯನ್ನು ನೋಡಿದರೆ 100% ಇರುತ್ತದೆ. ಆದರೆ ಎಲ್ಲಿ ಹೋಗುತ್ತಾರೆ. ಸಚಿವರ, ಶಾಸಕರ ಮತ್ತು ಅಧಿಕಾರಿಗಳ ತಪ್ಪಿದೆ. ಅರ್ಧಗಂಟೆ ಕಾಲ ಸದನವನ್ನು ಮುಂದೂಡಿ ಇವರುಗಳ adsent ನಿಂದ ಸದನವನ್ನು ಅರ್ಧಗಂಟೆ ಮುಂದೂಡಲಾಯಿತು ಎಂಬ ಸಂದೇಶವನ್ನು ಕರ್ನಾಟಕ ರಾಜ್ಯದ ಜನತೆಗೆ ಕಳುಹಿಸಿ. ಬಹುಶಃ ನಮ್ಮ ಟಿ.ವಿ ಮಾಧ್ಯಮದವರೇನಾದರೂ ಎಲ್ಲರ seat ಹತ್ತಿರ ಕ್ಯಾಮರಾ ಹಿಡಿದು

ಇವತ್ತು ಯಾರ್ಯಾರು absent ಆಗಿದ್ದಾರೆ, ಅವರೆಲ್ಲಾ ಎಲ್ಲಿ ಹೋಗಿದ್ದಾರೆ, ಏನು ಮಾಡಿದ್ದಾರೆಂದು ಪ್ರಸಾರ ಮಾಡಿ ಟಿ.ವಿ. ಮಾಧ್ಯಮದವರು ಇವರಿಗೆಲ್ಲಾ ಬುದ್ಧಿ ಕಲಿಸಬೇಕೆಂದು ಕಾಣುತ್ತದೆ. ಇದೊಂದು ಒಳ್ಳೆಯ ಕೆಲಸವನ್ನು ಮಾಡುತ್ತಾರೆಂದು ಈ ಮೂಲಕ ಮಾಧ್ಯಮದವರಿಗೆ request ಮಾಡುತ್ತಿದ್ದೇನೆ. ನಿಜವಾಗಿಯು ಈ ಬಾರಿ ಸದನ ಪ್ರಾರಂಭವಾದ ನಂತರ ನಿರಾಸಕ್ತಿಯಾಗಿದೆ. ಸದನಕ್ಕೆ ಮಹತ್ವ ಇಲ್ಲ. ಸದನ ತನ್ನ ಅಸ್ತಿತ್ವವನ್ನು ಕಳೆದುಕೊಳ್ಳುತ್ತಿದೆ. ಆದ್ದರಿಂದ ದಯಮಾಡಿ ಈ ಸದನಕ್ಕಿರುವ ಸನಾತನ ಇತಿಹಾಸ ಮರುಕಳಿಸಬೇಕಾದರೆ ದಯಮಾಡಿ ಅರ್ಧಗಂಟೆ ಕಾಲ ಸದನವನ್ನು ಮುಂದೂಡಿ ಮತ್ತೆ ಸಭೆ ಸೇರುವಂತೆ ವ್ಯವಸ್ಥೆ ಮಾಡಿ ಆಗಲಾದರೂ ಸ್ವಲ್ಪ ಬುದ್ಧಿ ಕಲಿತುಕೊಳ್ಳುತ್ತಾರಾ ನೋಡೋಣ, ಉಪಾಧ್ಯಕ್ಷರೆ, ಅರ್ಧ ಗಂಟೆ ಕಾಲ ಮುಂದೂಡಿ ಇಲ್ಲವಾದರೆ ನಾವು ಧರಣಿ ಕೂರುತ್ತೇವೆ.

ಉಪಾಧ್ಯಕ್ಷರು:– ಅವರು ಬರುತ್ತಿದ್ದಾರೆ. ನೀವು ಮಾತನ್ನು ಮುಂದುವರೆಸಿ.

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಯಾರು ಸದನಕ್ಕೆ ಬರಲಿಲ್ಲವೆಂದರೆ ಸದನವನ್ನು ಏಕೆ ನಡೆಸಬೇಕು.?

(ಗೊಂದಲ)

ಶ್ರೀ ಗೋವಿಂದ ಎಂ. ಕಾರಜೋಳ:– ಸಂಬಂಧ ಇದ್ದವರು ಬರಲಿ ಅವರೆಲ್ಲಾ ಬಂದ ನಂತರ ಪ್ರಾರಂಭ ಮಾಡೋಣ.

(ಗೊಂದಲ)

ಶ್ರೀ ಎನ್.ಹೆಚ್. ಕೋನರೆಡ್ಡಿ:– ಶಾಸಕರ ಶೂನ್ಯವೇಳೆ ಪ್ರಶ್ನೆಗೆ ಶೂನ್ಯ ಉತ್ತರ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಆಡಳಿತ ಪಕ್ಷದ ಸದಸ್ಯರು ಕೂಡ ಇಲ್ಲ. ಮಂತ್ರಿಗಳು ಕೂಡ ಪತ್ತೆ ಇರುವುದಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– 40ಲಕ್ಷ ರೂ.ಗಳ ಹಣ ಕೊಟ್ಟಿದ್ದಾರೆಂದು ನಾವು ಹೋಗಿ ಸ್ಕೂಲ್ ಅನ್ನು ರಿಪೇರಿ ಮಾಡಿಸಿದರೆ ಅದಕ್ಕಿನ್ನೂ ಹಣ ಬಂದಿಲ್ಲ. ಅಲ್ಲಿ ಹೋಗುವುದು ಹೇಗೆಂದು ನಾವು ಕಾಯುತ್ತಿದ್ದೇವೆ. ಇಲ್ಲಿ ನೋಡಿದರೆ ಆ ಮಂತ್ರಿಗಳೇ ಪತ್ತೆ ಇಲ್ಲ. ಅದಕ್ಕೆ ಉತ್ತರ ಹೇಳುವವರಿಲ್ಲ ಏನಿದು? ಇದು ಸಂಸದೀಯ ವ್ಯವಸ್ಥೆಯೇ?

ಶ್ರೀ ಹೆಚ್.ಕೆ. ಕುಮಾರಸ್ವಾಮಿ:– ಅರ್ಧಗಂಟೆ ಕಾಲ ಮುಂದೂಡಿ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಇದಕ್ಕೆ ಯಾರು ಜವಾಬ್ದಾರರು?

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಈ ವಿಷಯ ಇವತ್ತು ಇಲ್ಲಿ ತೀರ್ಮಾನವಾಗಬೇಕು.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ನಿಮ್ಮ ಒಂದು ಕಡೆ ತಪ್ಪಾಗಿದೆಯೆಂದು ಎಂದು ಅರ್ಥವಲ್ಲ ಎಲ್ಲಾ ಕಡೆಯಿಂದ ತಪ್ಪಾಗಿದೆ. ಸದನವನ್ನು ಮುಂದೂಡಲಿ.

(ಗೊಂದಲ)

ಶ್ರೀ ಎಸ್. ಸುರೇಶ್ ಕುಮಾರ್:– ಹತ್ತು ನಿಮಿಷ ಸದನವನ್ನು ಮುಂದೂಡಿ ನಂತರ ಎಲ್ಲರನ್ನು ಕರೆದುಕೊಂಡು ಬರುತ್ತೇವೆಂದು ಕಾನೂನು ಸಚಿವರೆ ನೀವೇ ಹೇಳಿ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:– ಹತ್ತು ನಿಮಿಷ ಮುಂದೂಡಿ ಅವರೆಲ್ಲಾ ಬಂದ ನಂತರ ಸದನವನ್ನು ಪ್ರಾರಂಭ ಮಾಡೋಣವೆಂದು ನೀವೇ request ಮಾಡಿಕೊಳ್ಳಿ.

ಶ್ರೀ ಎಸ್. ಸುರೇಶ್ ಕುಮಾರ್:- ಮುಖ್ಯ ಸಚೇತಕರನ್ನು ನೋಡಿ ಸದನದಿಂದ ಹೊರಗೆ ಹೋಗುತ್ತಾರೆ ಬರುತ್ತಾರೆ, ಹೋಗುತ್ತಾರೆ, ಬರುತ್ತಾರೆ ಪಾಪ ಅವರ ಕೈಯಲ್ಲಿ ಇದನ್ನು ನೋಡುವುದಕ್ಕೆ ಆಗುತ್ತಿಲ್ಲ.

ಉಪಾಧ್ಯಕ್ಷರು:- ಆಯಿತು. ಹತ್ತು ನಿಮಿಷಗಳ ಕಾಲ ಸದನವನ್ನು ಮುಂದೂಡೋಣ. ಸದನವನ್ನು ಹತ್ತು ನಿಮಿಷಗಳ ನಂತರ ಸೇರುವಂತೆ ಮುಂದೂಡಲಾಗಿದೆ.

(ಈ ಹಂತದಲ್ಲಿ ಸದನವನ್ನು ಹತ್ತು ನಿಮಿಷಗಳ ನಂತರ ಸೇರುವಂತೆ ಮುಂದೂಡಲಾಯಿತು)

ಸದನವು ಪುನಃ 1 ಗಂಟೆ 26 ನಿಮಿಷಕ್ಕೆ ಸಮಾವೇಶಗೊಂಡಿತು

(ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ತಾವು ಸ್ವಲ್ಪ ಸಮಯದವರೆಗೆ ಸದನವನ್ನು ಮುಂದೂಡಿದ್ದರಿಂದ ಮಾನ್ಯ ಸಚಿವರುಗಳು ಸ್ವಲ್ಪ ಎಚ್ಚರವಾದರು. ಕೆಲವು ಮಂತ್ರಿಗಳು, ಅಧಿಕಾರಿಗಳು ಸದನಕ್ಕೆ ಬಂದರು.

ಶ್ರೀ ಎಸ್. ಸುರೇಶ್‌ಕುಮಾರ್:- ಮಾನ್ಯ ಉಪಾಧ್ಯಕ್ಷರೆ, ಕಾನೂನು ಸಚಿವರು ಬಂದಿರುವುದಿಲ್ಲ.

ಉಪಾಧ್ಯಕ್ಷರು:- ಮಾನ್ಯ ಸುರೇಶ್‌ಕುಮಾರ್ ರವರೆ ಅವರು ಬರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧಪಕ್ಷದ ನಾಯಕರು):- ಮಾನ್ಯ ಉಪಾಧ್ಯಕ್ಷರೆ, ಸದನದಲ್ಲಿ ಕಾನೂನು ಸಚಿವರು ಒಬ್ಬರು ಇದ್ದರು. ಈಗ ಉಳಿದವರನ್ನು ಬಿಟ್ಟು ಅವರು ಹೋಗಿದ್ದಾರೆ.

ಇವತ್ತು ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ನಡೆಯುತ್ತಿದೆ. ರಾಜ್ಯಪಾಲರ ಭಾಷಣ ಅಂದರೆ ಅದಕ್ಕೆ ತನ್ನದೇ ಆದ ಒಂದು ವೈಶಿಷ್ಟ್ಯತೆ ಇದೆ. ಸಂವಿಧಾನ ಬದ್ಧವಾಗಿ ಪ್ರತಿ ವರ್ಷ ಮೊದಲ ಅಧಿವೇಶನ ಏನು ಪ್ರಾರಂಭ ಆಗಬೇಕು, ಆ ಸಂದರ್ಭದಲ್ಲಿ ಜಂಟಿ ಅಧಿವೇಶನದ ಮುಖಾಂತರ ಆ ವರ್ಷದ ಸರ್ಕಾರದ ಒಂದು ನೀತಿ, ನಿರ್ದಿಷ್ಟವಾದಂಥ ಗುರಿ ಯಾವ ರೀತಿ ಇರಬೇಕು, ಆಡಳಿತಾತ್ಮಕವಾಗಿ ಯಾವ ರೀತಿ ತೀರ್ಮಾನಗಳನ್ನು ತೆಗೆದುಕೊಳ್ಳಬೇಕು? ಇವುಗಳ ಬಗ್ಗೆ ಒಂದು ಸಮಗ್ರವಾಗಿ ಒಂದು ನೀತಿ ನಿರೂಪಕ ಭಾಷಣವನ್ನು ರಾಜ್ಯಪಾಲರ ಭಾಷಣದ ಮುಖಾಂತರ ಹೇಳಿಸುವಂಥದ್ದಾಗಿದೆ. ಆ ಇಡೀ ವರ್ಷದ ಸರ್ಕಾರದ ನೀತಿಯನ್ನು ಹಾಗೂ ಸ್ಪಷ್ಟವಾದ ಗುರಿಯನ್ನು ರಾಜ್ಯಪಾಲರ ಭಾಷಣದ ಮುಖಾಂತರ ಹೇಳುವುದು ಮುಖ್ಯವಾಗಿ ರಾಜ್ಯಪಾಲರ ಭಾಷಣವಾಗಿದೆ. ಇದು ಪ್ರತಿವರ್ಷ ನಡೆಯುವಂಥ ಸಂಪ್ರದಾಯವಾಗಿದೆ. ನಾವು ರಾಜ್ಯಪಾಲರ ಭಾಷಣದ ಮುಖಾಂತರ ಏನು ಸರ್ಕಾರದ ನೀತಿಯನ್ನು ಹೇಳುತ್ತೇವೆ, ಅದಕ್ಕೆ ತನ್ನದೇ ಆದ ಪ್ರಾಮುಖ್ಯತೆ ಇದೆ. ಕೇವಲ ಸಂಪ್ರದಾಯವಾಗಿ ರಾಜ್ಯಪಾಲರ ಭಾಷಣವನ್ನು ಮಾಡಿಸುವುದು ಅಷ್ಟೇ ಅಲ್ಲ, ಆ ಭಾಷಣದಲ್ಲಿ ನೀವು ಸರ್ಕಾರದ ನೀತಿ ಏನು ಹೇಳುತ್ತೀರಿ, ಅದರ ಪ್ರಕಾರ ನಡೆದುಕೊಳ್ಳುವಂಥದ್ದು ಬಹಳ ಮುಖ್ಯವಾದುದ್ದಾಗಿದೆ. ಹೀಗಾಗಿ ಪ್ರತಿ ವರ್ಷ ರಾಜ್ಯಪಾಲರ ಭಾಷಣವನ್ನು ತಯಾರು ಮಾಡುವ ಸಂದರ್ಭದಲ್ಲಿ ಅದು ಕ್ಯಾಬಿನೆಟ್‌ಗೆ ಹೋಗಿ, ಕ್ಯಾಬಿನೆಟ್‌ನಲ್ಲಿ ಸದಸ್ಯರ ಎಲ್ಲರ ಅಭಿಪ್ರಾಯಗಳನ್ನು ತೆಗೆದುಕೊಂಡು ಹಾಗೂ ಎಲ್ಲಾ ಇಲಾಖೆಗಳ ಅಭಿಪ್ರಾಯಗಳನ್ನು ತೆಗೆದುಕೊಂಡು ಅವುಗಳನ್ನು ಒಂದು ಕ್ರೋಢೀಕರಣ ಮಾಡಿ ರಾಜ್ಯಪಾಲರ ಕಡೆಗೆ ಭಾಷಣದ ಒಂದು ಪ್ರತಿ ಹೋಗುತ್ತದೆ. ಇವಲ್ಲಾ process ನಡೆಯುವಂಥವುಗಳು. ನಂತರ ಸರ್ಕಾರದ ಸ್ಪಷ್ಟ ನೀತಿ ಚಾಲು ಆಗುತ್ತದೆ. ಆದರೆ, ರಾಜ್ಯಪಾಲರ ಭಾಷಣವನ್ನು ತಯಾರಿಸುವಾಗ ಸರ್ಕಾರದ ನೀತಿ ನಿರೂಪಣೆ ಯಾವ ರೀತಿ ಇರಬೇಕು,

ಯಾವ ರೀತಿ ಗುರಿ ಇರಬೇಕು, ಅದರ ಬಗ್ಗೆ ಇವತ್ತಿನ ದಿವಸ ಸರ್ಕಾರಕ್ಕೆ ಯಾವುದೇ ಕಾಳಜಿ ಇಲ್ಲ. ಈ ವರ್ಷದ ಜಂಟಿ ಅಧಿವೇಶನದಲ್ಲಿ ಸನ್ಮಾನ್ಯ ರಾಜ್ಯಪಾಲರು ಭಾಷಣ ಮಾಡಿದರು. ಆ ಭಾಷಣದ ಪ್ರತಿಯಲ್ಲಿರುವ ಅಂಶಗಳನ್ನು ನೋಡಿದರೆ ಮಾನ್ಯ ಸಿದ್ದರಾಮಯ್ಯರವರು ಮುಖ್ಯಮಂತ್ರಿ ಆದಮೇಲೆ ಅವರ ನೇತೃತ್ವದಲ್ಲಿ ಹೊಸದಾಗಿ ಕಾಂಗ್ರೆಸ್ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಕಳೆದ ಅಧಿವೇಶನದಲ್ಲಿ ನಡೆದ ರಾಜ್ಯಪಾಲರ ಭಾಷಣದಲ್ಲಿ ಇರುವಂಥ ವಿಚಾರದಲ್ಲಿ ಮತ್ತು ಈ ವರ್ಷದ ರಾಜ್ಯಪಾಲರ ಭಾಷಣದ ವಿಚಾರದಲ್ಲಿ ಬಹಳಷ್ಟು ಏನು ವ್ಯತ್ಯಾಸವಿಲ್ಲ. ಈ ವರ್ಷದ ರಾಜ್ಯಪಾಲರ ಭಾಷಣದಲ್ಲೂ ಸಹ ಯಾವುದೇ ಸ್ಪಷ್ಟವಾದ ಗುರಿ ಇಲ್ಲ. ಈ ವರ್ಷ ನಮ್ಮ ನೀತಿ ಏನಿದೆ, ನಮ್ಮ ಆಡಳಿತ ಹೇಗಿರಬೇಕು? ಇದರ ಬಗ್ಗೆ ಅವರು ಸ್ಪಷ್ಟತೆಯನ್ನು ಇಟ್ಟುಕೊಂಡಿಲ್ಲ. ಕಳೆದ ಬಜೆಟ್‌ನಲ್ಲಿ ಏನು ಅವರು ಹಲವಾರು ವಿಚಾರಗಳನ್ನು, ಯೋಜನೆಗಳನ್ನು ಪ್ರಕಟ ಮಾಡಿದ್ದರು, ಅವರು ಏನು ಸಾಧನೆಗಳನ್ನು ಮಾಡಿದ್ದೇವೆಂದು ಹಾಗೂ ಮಾಡಬೇಕೆಂದು ಹೇಳಿದ್ದರು, ಅದರ ಒಂದು brief note ಈ ರಾಜ್ಯಪಾಲರ ಭಾಷಣದಲ್ಲಿ ಇದೆ ಅಷ್ಟೇ. ಅದರದ್ದೇ ಒಂದು brief note ಇದೆಯೇ ಹೊರತು, ಹೊಸದೇನೂ ಇಲ್ಲ. ಇದನ್ನು ನೋಡಿಬಿಟ್ಟರೆ ಆಯಿತಪ್ಪಾ ಈ ರಾಜ್ಯಕ್ಕೆ ಏನೋ ಒಂದು ಒಳ್ಳೆಯದಾಗುತ್ತದೆ ಎನ್ನುವಂಥ ಕಲ್ಪನೆ ಬರುವುದಕ್ಕೆ ಸಾಧ್ಯವಿದೆ. ಆದರೆ, ಇದ್ಯಾವುದೂ ಆಗುತ್ತಿಲ್ಲ. ಹೀಗಾಗಿ ಸುಮ್ಮನೆ ಕಾಟಾಚಾರಕ್ಕೆ ಒಂದು ಭಾಷಣ ಮಾಡಿಸಬೇಕು, ಮಾಡಿಸುತ್ತಿದ್ದಾರೆ. ಪ್ರತಿ ವರ್ಷ ಇರುವಂಥ ರಾಜ್ಯಪಾಲರ ಭಾಷಣದ repetition ಮಾಡಿ, ಪ್ಯಾರಾಗಳನ್ನು ಸ್ವಲ್ಪ ಹೆಚ್ಚು ಕಡಿಮೆ ಮಾಡಿ ಇವತ್ತು ರಾಜ್ಯಪಾಲರ ಭಾಷಣ ಎನ್ನುವುದನ್ನು ನಮಗೆ ಕಾಟಾಚಾರಕ್ಕೆ ಮಾಡಿದ್ದಾರೆ. ಹೀಗಾಗಿ ಇದರ ಬಗ್ಗೆ ಗಾಂಭೀರ್ಯತೆಯಾಗಲಿ, ಸರ್ಕಾರ ಇದನ್ನು ಗಂಭೀರವಾಗಿ ತೆಗೆದುಕೊಳ್ಳುವುದಾಗಲಿ ಇವತ್ತು ಇಲ್ಲ.

ರಾಜ್ಯಪಾಲರ ಭಾಷಣದ ಪ್ಯಾರಾ ನಂ.2ರಲ್ಲಿ "ಕರ್ನಾಟಕದಲ್ಲಿ ನನ್ನ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಹಲವಾರು ಸುಧಾರಣಾತ್ಮಕ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜ್ಯದ ಸಮಸ್ತ ನಾಗರೀಕರ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಜನಪರ, ಪಾರದರ್ಶಕ ಮತ್ತು

ಪರಿಣಾಮಕಾರಿ ಆಡಳಿತ ನೀಡಲು ನನ್ನ ಸರ್ಕಾರ ಬದ್ಧವಾಗಿದೆ. ಇದು common ಆಗಿ ಹೇಳುವಂಥದ್ದು. ನನ್ನ ಸರ್ಕಾರ ಆಡಳಿತವನ್ನು ನಾಗರೀಕರ ಮನೆ ಬಾಗಿಲಿಗೆ ಕೊಂಡೆಯ್ಯಲು ನಿರಂತರವಾಗಿ ಶ್ರಮಿಸುತ್ತದೆ ಹಾಗೂ ರೈತರ, ಬಡವರ ಮತ್ತು ಸಮಾಜದಲ್ಲಿ ಹಿಂದುಳಿದ ವರ್ಗದವರ ಅಭಿವೃದ್ಧಿಗೆ ಹಾಗೂ ಅವರ ಜೀವನದ ಗುಣಮಟ್ಟವನ್ನು ಸುಧಾರಿಸಲು ಕಟಿಬದ್ಧವಾಗಿದೆ".

ಹಿಂದಿನ ವರ್ಷದ ರಾಜ್ಯಪಾಲರ ಭಾಷಣವನ್ನೂ ನಾನು refer ಮಾಡುತ್ತೇನೆ. ಅದು ಯಾವ ರೀತಿಯಿದೆ, ಮೊದಲನೆ ಮತ್ತು ಎರಡನೇ ಪ್ಯಾರಾ ಎಂದರೆ;

ಕಳೆದ ವರ್ಷದ ಘನತೆವೆತ್ತ ರಾಜ್ಯಪಾಲರ ಭಾಷಣ : "ಪ್ಯಾರಾ ನಂ.– 2 : ಕರ್ನಾಟಕದಲ್ಲಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ ಹಲವಾರು ಕ್ರಾಂತಿಕಾರಿ ಕ್ರಮಗಳನ್ನು ಕೈಗೊಳ್ಳಲಾಗಿದೆ. ರಾಜ್ಯದ ಮತ್ತು ಜನರ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳುವ ನಿಟ್ಟಿನಲ್ಲಿ ಸ್ವಚ್ಛ, ದಕ್ಷ ಮತ್ತು ಪಾರದರ್ಶಕ ಆಡಳಿತ ನೀಡಲು ನನ್ನ ಸರ್ಕಾರ ಬದ್ಧವಾಗಿದೆ". ಇದು ಮತ್ತೆ ಈ ವರ್ಷದ ಭಾಷಣದಲ್ಲಿ repeat ಆಗಿದೆ. "ನನ್ನ ಸರ್ಕಾರವು ಕೇಂದ್ರ ಸರ್ಕಾರ ಜಾರಿಗೆ ತಂದಿರುವ ಜನಲೋಕಪಾಲ್ ವಿಧೇಯಕವನ್ನು ಸ್ವಾಗತಿಸುತ್ತದೆ ಹಾಗೂ ನಮ್ಮ ರಾಜ್ಯದಲ್ಲಿ ಸದರಿ ವಿಧೇಯಕವನ್ನು ತರಲು ಕ್ರಮ ಕೈಗೊಳ್ಳಲಾಗುತ್ತದೆ".

ಮೂರನೇ ಪ್ಯಾರಾದಲ್ಲಿ; ನಮ್ಮ ರಾಜ್ಯದಲ್ಲಿ ಲೋಕಪಾಲ್ ವಿಧೇಯಕ ಬರಲೇ ಇಲ್ಲ. ಮೊದಲನೇ ವರ್ಷದ ರಾಜ್ಯಪಾಲರ ಭಾಷಣದಲ್ಲಿ ಲೋಕಪಾಲ್ ಬಿಲ್ ಬಗ್ಗೆ ಹೇಳಿಸಿದರು. ಲೋಕಪಾಲ್ ಬಿಲ್ ಸ್ವಾಗತ ಮಾಡಿ ಎಲ್ಲವನ್ನು ಮಾಡಿದರು. ನಮ್ಮಲ್ಲಿ ಲೋಕಪಾಲ್ ಬರಲಿಲ್ಲ.

ಮುಂದೆ ಹಿಂದಿನ ರಾಜ್ಯಪಾಲರ ಭಾಷಣದ 3ನೇ ಪ್ಯಾರಾದಲ್ಲಿ ಹೇಳುತ್ತಾರೆ; 'ನನ್ನ ಸರ್ಕಾರವು ಆಡಳಿತವನ್ನು ಸದೃಢಗೊಳಿಸುವ, ಸುವ್ಯವಸ್ಥೆಗೊಳಿಸುವ ಹಾಗೂ ಸರಳೀಕರಣಗೊಳಿಸುವ ನಿಟ್ಟಿನಲ್ಲಿ ಮಾನ್ಯ ಕಾನೂನು ಸಚಿವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಿದೆ. ಆಡಳಿತವನ್ನು ಪಾರದರ್ಶಕ, ಉತ್ತರದಾಯಿ ಮತ್ತು ಭ್ರಷ್ಟಾಚಾರ

ಮುಕ್ತವಾಗಿಸುವ ರಾಜ್ಯ ಸರ್ಕಾರದ ಪ್ರಯತ್ನಗಳನ್ನು ರಾಷ್ಟ್ರ ಮಟ್ಟದಲ್ಲಿ ಗುರುತಿಸಲಾಗಿದೆ' ಎಂದು ಸಕಾಲ ಯೋಜನೆ ಬಗ್ಗೆ ಹೇಳುತ್ತಾರೆ.

2 ಮತ್ತು 3ನೇ ಪ್ಯಾರಾದಲ್ಲಿ ಸಕಾಲದ ಬಗ್ಗೆ ಹೇಳಿರುವ ಮಾದರಿಯಲ್ಲಿ ಈ ವರ್ಷದ ಭಾಷಣದಲ್ಲಿ repetition ಆಗಿದೆ. ಹೊಸದೇನೂ ಇಲ್ಲ. ನಾವು ಹೊಸದೇನು ಎಂದು ಹುಡುಕಬೇಕು, ಆಡಳಿತ ವ್ಯವಸ್ಥೆಯಲ್ಲಿ ಏನು ಬದಲಾವಣೆ ಮಾಡುತ್ತಾರೆ, ಹಿಂದಿನ ಸಲ ಈ ರೀತಿ ಹೇಳಿದ್ದರು, ಅದಾದ ನಂತರ ಈ ರೀತಿಯಾಯಿತು, ಏನೂ ಯಾವುದೇ ಹೊಸದರ ಬಗ್ಗೆ ಹೇಳಿಲ್ಲ. ಇವರು ಇಷ್ಟೆಲ್ಲಾ ಹೇಳುತ್ತಿದ್ದಾರಲ್ಲ, ಆದರೆ ಸರ್ಕಾರ ಇವತ್ತು ಎಷ್ಟೊಂದು ನಿಷ್ಕ್ರಿಯತೆಯಾಗಿದೆಯೆಂದರೆ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದು ಹೋಗಿದೆ. ಬೇರೆ ಬೇರೆ ಇಲಾಖೆಗಳ performance ನೋಡಿದಾಗ ಯಾವ ರೀತಿ ಇವತ್ತು ಆಡಳಿತ ನಡೆಯುತ್ತಿದೆ ಎನ್ನುವುದು, ಬಹುಶಃ ಏನಾಗಿದೆಯೆಂದರೆ 2015ರ ಮೇ ತಿಂಗಳು ಇನ್ನೊಂದು 3 ತಿಂಗಳುಗಳಲ್ಲಿ ಬರುತ್ತದೆ. ಅಂದರೆ ಒಂದು ವರ್ಷ 9 ತಿಂಗಳು ಸರ್ಕಾರ ಅಸ್ತಿತ್ವಕ್ಕೆ ಬಂದ ಮೇಲೆ, ಸಾಮಾನ್ಯವಾಗಿ ಹೊಸ ಸರ್ಕಾರ ಅಸ್ತಿತ್ವಕ್ಕೆ ಬಂದಾಗ ಏನೊಂದು ಜೀವಂತಿಕೆಯಿರಬೇಕು, ಏನೊಂದು ಲವಲವಿಕೆಯಿರಬೇಕು, ಅದು ಮುಖ್ಯಮಂತ್ರಿಗಳಿರಬಹುದು, ಮಂತ್ರಿಗಳಿರಬಹುದು even ಆಡಳಿತ ಪಕ್ಷದ ಶಾಸಕರು ಮತ್ತು ಜನರಲ್ಲಿ ಇರುವಂಥ ಭಾವನೆ ಹೇಗಿದೆಯೆಂದರೆ, ನಾವು ಎಲ್ಲೆಲ್ಲಿ ಪ್ರವಾಸ ಮಾಡುತ್ತೇವೆಯೋ, ಎಲ್ಲೆಲ್ಲಿ ಹೋಗುತ್ತೇವೆಯೋ ಅಲ್ಲೆಲ್ಲಾ ರಾಜ್ಯದಲ್ಲಿ ಸರ್ಕಾರ ಜೀವಂತವಾಗಿ ಇದೆಯೋ ಅಥವಾ ಇಲ್ಲವೋ ಎಂದು ಹೇಳಿ ಹೇಳುತ್ತಾರೆ. ಸರ್ಕಾರದ ಅಸ್ತಿತ್ವವನ್ನೇ ಪ್ರಶ್ನೆ ಮಾಡುವ ರೀತಿಯಲ್ಲಿ ಸರ್ಕಾರದ ಆಡಳಿತ ನಡೆಯುತ್ತಿದೆ. ಕಾನೂನು, ಸುವ್ಯವಸ್ಥೆ ಹದಗೆಟ್ಟು ಹೋಗಿದೆ. ಆಡಳಿತದಲ್ಲಿ ನಿಯಂತ್ರಣವಿಲ್ಲ. ಆಡಳಿತ ಯಾವ ರೀತಿ ಗಟ್ಟಿಮುಟ್ಟಾಗಿರುವಂಥ ದಕ್ಷ ಆಡಳಿತ ಇರಬೇಕಾಗಿತ್ತೋ ಆ ದಕ್ಷ ಆಡಳಿತದ ಒಂದಿಷ್ಟು ಕುರುಹುಗಳು ಎಲ್ಲಿಯೂ ಕಾಣಿಸುತ್ತಿಲ್ಲ. ಅಧಿಕಾರಿಗಳು ಮುಖ್ಯಮಂತ್ರಿಗಳ ಮತ್ತು ಮಂತ್ರಿಗಳ ಮಾತನ್ನು ಕೇಳುತ್ತಿಲ್ಲ. ಮಂತ್ರಿಗಳು ಮತ್ತು ಮುಖ್ಯಮಂತ್ರಿಗಳಲ್ಲಿ ವಿಶ್ವಾಸವಿಲ್ಲ. ಪರಸ್ಪರ ವಿಶ್ವಾಸ ಬಹಳ ಮುಖ್ಯ.

ಮಂತ್ರಿಗಳ ಮೇಲೆ ಶಾಸಕರಿಗೆ ವಿಶ್ವಾಸವಿಲ್ಲ. ಹೀಗಾಗಿ ಆಡಳಿತ ವ್ಯವಸ್ಥೆ ಸಂಪೂರ್ಣವಾಗಿ ಕುಸಿದುಹೋಗಿದೆ.

(ಗೊಂದಲ)

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:– ಶೆಟ್ಟರ್‌ರವರೆ, ನಿಮ್ಮ ಶಾಸಕರಲ್ಲಿ ವಿಶ್ವಾಸವಿಲ್ಲದೇ ಇರಬಹುದು, ನಮ್ಮ ಶಾಸಕರಿಗೆ ಅಲ್ಲ.

ಉಪಾಧ್ಯಕ್ಷರು:– ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:– ಇದನ್ನೆಲ್ಲಾ ಯಾರು ಹೇಳಿದ್ದಾರೆನ್ನುವುದನ್ನು ನಾನು ಈಗ ಹೇಳುತ್ತೇನೆ.

ಶ್ರೀ ವೈ.ಎನ್. ರುದ್ರೇಶ್‌ಗೌಡ:– ನಿಮ್ಮ ಆಡಳಿತ ಅವಧಿಯಲ್ಲಿ 5 ವರ್ಷ ನೋಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:– ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತು ಪರಿಸ್ಥಿತಿ ಹೇಗಾಗಿದೆಯೆಂದರೆ ಕಾಂಗ್ರೆಸ್ ಪಾರ್ಟಿಯ ಶಾಸನ ಸಭೆ ಪ್ರತಿ ಬಾರಿ ನಡೆಯುತ್ತದೆ. ಮರುದಿವಸ ಪತ್ರಿಕೆಯಲ್ಲಿ ಬರುತ್ತದೆ. ಆ ಪತ್ರಿಕೆಯಲ್ಲಿ ಬಂದಿರುವುದನ್ನು ನೀವು ನೋಡಿದರೆ ಯಾವ ರೀತಿ ಪರಿಸ್ಥಿತಿಯಿದೆ ಎನ್ನುವುದು ಅರಿವಾಗುತ್ತದೆ.

ಶ್ರೀ ಸಿದ್ದರಾಮಯ್ಯ (ಮಾನ್ಯ ಮುಖ್ಯಮಂತ್ರಿಗಳು):– ಪತ್ರಿಕೆಯಲ್ಲಿ ಬರುವುದೆಲ್ಲಾ ನಿಜವಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಆಯಿತು, ಒಂದು ಪತ್ರಿಕೆಯಲ್ಲಿ ಬರೆದಿರುವುದು ಸುಳ್ಳು ಎನ್ನಬಹುದು. ಆದರೆ ಎಲ್ಲಾ ಪತ್ರಿಕೆಗಳಲ್ಲಿ ಬಂದಿರುವುದನ್ನು ಸುಳ್ಳೆಂದು ಹೇಳಿದರೆ ಇದಕ್ಕೆ ನಾವೇನು ಹೇಳುವುದಕ್ಕೆ ಆಗುವುದಿಲ್ಲ. ಪತ್ರಿಕೆಯಲ್ಲಿ ಬಂದಿರುವ 2–3 ವಾಕ್ಯಗಳನ್ನು ಹೇಳುತ್ತೇನೆ. ಮೊನ್ನೆ ಕನ್ನಡಪ್ರಭ ಪತ್ರಿಕೆಯಲ್ಲಿ ಬಂದಿರುವಂಥ ಹೇಳಿಕೆ: "ಅಲ್ಲಿ ದಿಗ್ವಿ ಮುಂದೆ ಪ್ರತಿಕೂಲ ವಾತಾವರಣ, ದಿಗ್ವಿಜಯ ಸಿಂಗ್ ಎದುರಿನಲ್ಲೇ ಸಚಿವರು, ಸರ್ಕಾರದ ವಿರುದ್ಧ ಸ್ವಪಕ್ಷೀಯರಿಂದಲೇ ಅಸಮಾಧಾನ. ಸಿ.ಎಂ. ಸುತ್ತ ಬರೀ

ವಂದಿಮಾಗಧರು, ಬಾಲಬಡುಕರು, ರಿಯಲ್ ಎಸ್ಟೇಟ್ ಕುಳಗಳು" ಇದು ಕನ್ನಡಪ್ರಭಾ ಪತ್ರಿಕೆಯಲ್ಲಿ 1ನೇ ತಾರೀಖಿನಂದು ಬಂದಿರುವಂಥದ್ದು,

ಮತ್ತೆ ಕನ್ನಡಪ್ರಭಾದಲ್ಲಿ ಮತ್ತೊಂದು ವರದಿ: "ಶಾಸಕರು ಮತ್ತು ಸಚಿವರ ನಡುವೆ ಹಳಸುತಿದೆ ಸಂಬಂಧ, ಸರ್ಕಾರಕ್ಕೆ ಎಚ್ಚರಿಕೆ ಗಂಟೆ ರವಾನಿಸಿದೆ ಶಾಸಕರು, ಸ್ಥಳೀಯ ಸಮಸ್ಯೆಗಳಿಗೆ ಸಚಿವರಿಂದ ಉತ್ತರ ಸಿಗುತ್ತಿಲ್ಲ, ಸ್ಥಳೀಯ ರಾಜಕೀಯ ದ್ವೇಷದಿಂದ ಪಕ್ಷಕ್ಕೆ ಹಾನಿ. ಸಿದ್ದರಾಮಯ್ಯನವರಿಗೆ ಗೊತ್ತಿದ್ದರೂ ಕಡಿವಾಣ ಹಾಕುತ್ತಿಲ್ಲ". ಇದು ಕನ್ನಡ ಪ್ರಭಾ ಪತ್ರಿಕೆಯಲ್ಲಿ ಮರುದಿವಸ ಬಂದಿರುವಂಥ ವರದಿ. Indian Express February ಒಂದರಂದು ಬಂದಿರುವಂಥ ವರದಿ ಎಂದರೆ;. .

ಶ್ರೀ ಸಿದ್ದರಾಮಯ್ಯ:- ಮಾನ್ಯ ಉಪಾಧ್ಯಕ್ಷರೆ, ಪತ್ರಿಕೆಯಲ್ಲಿ ಊಹೆ ಮಾಡಿಕೊಂಡು ಬರೆದಿರುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್:- ಒಂದು ಪತ್ರಿಕೆಯವರು ಊಹೆ ಮಾಡಬಹುದು.

ಶ್ರೀ ಸಿದ್ದರಾಮಯ್ಯ:- ಶಾಸನಸಭೆಯ ಮೀಟಿಂಗ್‌ನಲ್ಲಿ ಪತ್ರಿಕೆಯವರು, ಟಿ.ವಿ. ಯವರು ಇದ್ದರಾ? ಅಥವಾ ಅಲ್ಲಿರುವಂಥ ಯಾರಾದರೂ ಪತ್ರಿಕೆಗಳಿಗೆ ಹೇಳಿಕೆ ಕೊಟ್ಟಿದ್ದಾರಾ? ಪತ್ರಿಕಾಗೋಷ್ಠಿ ಕರೆದು ಹೇಳಿದ್ದಾರಾ? ಟಿ.ವಿ. ಯವರಿಗೆ ಹೇಳಿದ್ದಾರಾ? ಇವೆಲ್ಲವೂ ಆಧಾರರಹಿತವಾದ ಊಹೆಗಳು, ಈ ಊಹೆಗಳನ್ನು ಸದನದಲ್ಲಿ ತೆಗೆದುಕೊಂಡು ಬಂದು ಸತ್ಯ ಎಂದು ಹೇಳುವುದಕ್ಕೆ ಹೋದರೆ ಇದಕ್ಕೆಲ್ಲಾ ಏನು ಕಿಮ್ಮತ್ತಿರುತ್ತದೆ?

ಶ್ರೀ ಜಗದೀಶ್ ಶೆಟ್ಟರ್:- ಸಿದ್ದರಾಮಯ್ಯನವರು defend ಮಾಡಬೇಕು, defend ಮಾಡಲಿ.

ಶ್ರೀ ಸಿದ್ದರಾಮಯ್ಯ:- ಇವಕ್ಕೆಲ್ಲಾ ಏನು ಕಿಮ್ಮತ್ತಿರುತ್ತದೆ? I can understand.

ಶ್ರೀ ಕೆ.ಜಿ. ಬೋಪಯ್ಯ:- Reply ಕೊಡುವಾಗ ನೀವು deny ಮಾಡಿ.

ಶ್ರೀ ಸಿದ್ದರಾಮಯ್ಯ:– ಇದನ್ನೆಲ್ಲಾ ಹೇಳುವುದೇ ತಪ್ಪು.

ಶ್ರೀ ಕೆ.ಜಿ. ಬೋಪಯ್ಯ:– ಹೇಳುವುದಕ್ಕೆ ಅವಕಾಶವಿದೆ.

ಶ್ರೀ ಸಿದ್ದರಾಮಯ್ಯ:– ನೀವು Speaker ಆಗಿದ್ದವರು ಈ ರೀತಿ ಹೇಳಿದರೆ ಹೇಗೆ?

ಶ್ರೀ ದಿನೇಶ್ ಗುಂಡೂರಾವ್:– ಮಾನ್ಯ ಉಪಾಧ್ಯಕ್ಷರೆ, ಅವರು ಆಡಳಿತ ಮಾಡಬೇಕಾದರೆ ಅವರ ಶಾಸಕರೆಲ್ಲಾ ಬೀದಿಗೆ ಬಂದು ಇವರನ್ನು ಬೈಯ್ಯುತ್ತಿದ್ದರು.

(ಗೊಂದಲ)

ಶ್ರೀ ವಿ. ಶ್ರೀನಿವಾಸ್ ಪ್ರಸಾದ್:– ಜಗದೀಶ್ ಶೆಟ್ಟರ್‌ರವರೆ, ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ಈ ಸಮಯವನ್ನು ಯಾವ ರೀತಿ ಉಪಯೋಗಿಸಿಕೊಳ್ಳುತ್ತಿದ್ದೀರೆಂದರೆ, ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳ ಜೊತೆ ವಿರಸವನ್ನು ನೀವು ಹುಟ್ಟು ಹಾಕುತ್ತಿರುವಂಥದ್ದು, ಮತ್ತೆ ಮಂತ್ರಿಗಳು ಮತ್ತು ಶಾಸಕರ ಮಧ್ಯೆ ವಿರಸ ತರುವುದಕ್ಕೆ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುವ ಸಮಯವನ್ನು ನೀವು ಉಪಯೋಗಿಸಿಕೊಳ್ಳುತ್ತಿದ್ದೀರಿ. ಇದು ಸರಿ ಇಲ್ಲ. ನಮ್ಮಗಳ ಮಧ್ಯೆ ಯಾವ ವಿರಸವೂ ಇಲ್ಲ. ನೀವು ಬಹಳ ಬುದ್ಧಿವಂತಿಕೆಯಿಂದ ಈ ಒಂದು ಸಂದರ್ಭವನ್ನು ಉಪಯೋಗಿಸಿಕೊಳ್ಳುತ್ತಿದ್ದೀರಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಹಾಗಾದರೆ, 'ಸತೀಶ್ ಜಾರಕಿಹೊಳಿಯವರಿಗೆ ವಿರೋಧ ಪಕ್ಷದ ನಾಯಕರೇ ಪ್ರಚೋದನೆ ಕೊಟ್ಟಿದ್ದಾರೆಯೇ'?

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:– ನಿಮ್ಮ ಕಾಳಜಿ ಏನಿದ್ದರೂ ನಿಮ್ಮ ಪಕ್ಷದವರು ಒಗ್ಗಟ್ಟಾಗಿದ್ದಾರೆಯೇ ಎಂದು ಇರಬೇಕು.

(ಗೊಂದಲ)

ಶ್ರೀ ಜಗದಿಶ್ ಶೆಟ್ಟರ್:- ಅವರು ಪರಸ್ಪರ ವಿಶ್ವಾಸದಿಂದ ಇರಲಿ, ಶಾಸಕರದ್ದು ಸಹ ಏನೂ complaint ಇಲ್ಲ. ಒಳ್ಳೆಯದಾಗಲಿ, 5 ವರ್ಷ ಸರ್ಕಾರವನ್ನು ನಡೆಸಲಿ. ಇದರ ಬಗ್ಗೆ ನಮ್ಮದೇನೂ ತಕರಾರಿಲ್ಲ. ನಾನು ಪತ್ರಿಕೆಯಲ್ಲಿ ಬಂದಿರುವ ಬಗ್ಗೆ ಹೇಳಿದೆ. ಮಾನ್ಯ ಮುಖ್ಯಮಂತ್ರಿಗಳು ಮಾತನಾಡುತ್ತಾ ಹೇಳಿದರು, ಪತ್ರಿಕೆಯಲ್ಲಿ ಬಂದಿರುವುದೆಲ್ಲಾ ಸುಳ್ಳು, ಊಹೆಯಿಂದ ಬರೆದಿರುವುದು ಎಂದು ಹೇಳಿದರು. ಯಾವುದೋ ಒಂದು ಪತ್ರಿಕೆಯಲ್ಲಿ ಬಂದರೆ ಊಹೆ ಎಂದು ಎನ್ನಬಹುದು. ಶಾಸನಸಭೆ ಆದ ಮರುದಿವಸವೇ ಎಲ್ಲಾ ಪತ್ರಿಕೆಯಲ್ಲಿ ಬಂದಿರುವುದನ್ನೂ ಊಹೆ ಎಂದು ಹೇಳಿದರೆ ಅದು ಸತ್ಯಕ್ಕೆ ದೂರ ಎಂದು ಹೇಳಿದರೆ ನಾನು ಇವರಿಗೆ ಇನ್ನೇನು ಹೇಳಬೇಕೆಂದು ಅರ್ಥವಾಗುತ್ತಿಲ್ಲ. ಹಾಗಾದರೆ ನೀವು deny ಮಾಡಬೇಕಾಗಿತ್ತು. ಮುಖ್ಯಮಂತ್ರಿಗಳು ಮರುದಿವಸ ಪತ್ರಿಕಾಗೋಷ್ಠಿಯನ್ನು ಕರೆದು, 'ಇಲ್ಲ, ಈ ಪತ್ರಿಕೆಯಲ್ಲಿ ಬಂದಿರುವುದೆಲ್ಲಾ ಸುಳ್ಳು, ನೀವು ಸುಳ್ಳು ಬರೆಯುತ್ತಿದ್ದೀರಿ ಎಂದು ಹೇಳಬೇಕಾಗಿತ್ತು ಅಥವಾ ಅವರ ಅಧ್ಯಕ್ಷರು ಹೇಳಬೇಕಾಗಿತ್ತು'. ನಾನು ಯಾವುದೇ ಒಂದೇ ಒಂದು ಪತ್ರಿಕೆಯನ್ನು refer ಮಾಡುತ್ತಿಲ್ಲ.

ಫೇಬ್ರವರಿ 1ನೇ ತಾರೀಖಿನಂದು Indian Express ಪತ್ರಿಕೆಯಲ್ಲಿ ವರದಿಯಾಗಿತ್ತು, ಏನೆಂದರೆ, "MLAs target Siddu at Digvijay meet. A meeting on Saturday to discuss ideas to galvanize the Congress turned into an opportunity for the party MLAs to air their grievances against Chief Minister Siddaramaiah".

ಫೇಬ್ರವರಿ 1ನೇ ತಾರೀಖಿನಂದು ವಿಜಯವಾಣಿ ಪತ್ರಿಕೆಯಲ್ಲಿ ಬಂದಿರುವುದು; "ಕೈ ಶಾಸಕರ ಅಕ್ರೋಶ ಸ್ಫೋಟ, ದಿಗ್ವಿಜಯಸಿಂಗ್ ಎದುರಿನಲ್ಲೇ ಮುಖ್ಯಮಂತ್ರಿ ಸಚಿವರುಗಳಿಗೆ ತರಾಟೆ, ಶಾಸಕರ ಆಕ್ರೋಶ".

ಪ್ರಜಾವಾಣಿ ಪತ್ರಿಕೆಯಲ್ಲಿ; "ಕಾಂಗ್ರೆಸ್ ಗುಂಪು ಚರ್ಚೆ, ಅಸಮಾಧಾನ ಸ್ಫೋಟ" ಮತ್ತು "ಶಾಸಕರಾದ ರಮೇಶ್‌ಕುಮಾರ್‌ರವರು ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸುತ್ತ ಇರುವವರ ಕುರಿತು ಕೆಪಿಸಿ ಸಭೆಯಲ್ಲಿ ವಾಗ್ದಾಳಿ ನಡೆಸಿದ್ದಾರೆ. ಸಿದ್ದರಾಮಯ್ಯನವರ ಸುತ್ತ ಇರುವ ಬಾಲಬಡುಕರಿಂದಲೇ

ಸರ್ಕಾರ ಮತ್ತು ಅವರಿಗೆ ಸಮಸ್ಯೆಯಾಗುತ್ತದೆಂದು ಎಚ್ಚರಿಕೆ ನೀಡಿದ್ದಾರೆಂದು" ಮೂಲಗಳು ಹೇಳಿದ್ದಾವೆ. Deccan Herald ನಲ್ಲಿ "Congress Legislators complained against Chief Minister's coterie". Deccan Herald, ಕನ್ನಡಪ್ರಭ, ಪ್ರಜಾವಾಣಿ, ವಿಜಯವಾಣಿ, Indian Express, Times of India ಪತ್ರಿಕೆಯಲ್ಲಿ "Congress legislators went ire against ministers" ಎಂದು ಬಂದಿದೆ. Minister ವಿರುದ್ಧ ದೂರನ್ನು ಕೊಟ್ಟಿರುವುದು Times of India ಪತ್ರಿಕೆಯಲ್ಲಿ ಬಂದಿದೆ. "Congress leaders named ineffective minister to Digvijay Singh" ಎಂದು ಮತ್ತೊಂದು ಇಂಗ್ಲೀಷ್ ಪತ್ರಿಕೆಯಲ್ಲಿ ಬಂದಿದೆ. ದಿನಾಂಕ 3.2.2015 ರ ಕನ್ನಡ ಪತ್ರಿಕೆಯಲ್ಲಿ ಮಂತ್ರಿಗಳ ಅಸಡ್ಡೆ, ಶಾಸಕರ ಆಕ್ರೋಶ, ಶಾಸಕಾಂಗ ಸಭೆಯಲ್ಲಿ ಕಾಂಗ್ರೆಸ್ ಪಕ್ಷದ ಶಾಸಕರು ಸರ್ಕಾರ ರಾಜ್ಯದಲ್ಲಿ take off ಆಗಿಲ್ಲ ಎಂಬ ವಾತಾವಾರಣ ಇನ್ನು ಮನೆ ಮಾಡಿದ್ದು, ಕೆಲವು ಸಚಿವರ ಬೇಜವಾಬ್ದಾರಿ ಕಾರ್ಯವೈಖರಿ ಇದಕ್ಕೆ ಕಾರಣವೆಂದು ನೇರವಾಗಿ ಆರೋಪಿಸಿರುತ್ತಾರೆ. ಅಸಮರ್ಥ ಸಚಿವರಿಂದ ಸರ್ಕಾರಕ್ಕೆ ನೇರವಾಗಿ ಕೆಟ್ಟ ಹೆಸರು ಬರುತ್ತಿದ್ದು, ಅವರನ್ನು ಸಚಿವ ಸಂಪುಟದಿಂದ ಕೈ ಬಿಟುವಂತೆ ಬೇಡಿಕೆ ಸಲ್ಲಿಲಸಿರುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನೀವು ಸುಳ್ಳು ಎಂದು ಹೇಳಬೇಕಲ್ಲವೇ? ಯಾವುದೋ ಒಂದು ಪತ್ರಿಕೆಯಲ್ಲಿ ಬಂದಿದ್ದರೆ OK.

ಶ್ರೀ ಸಿ.ಎಸ್. ನಾಗೌಡ (ಅಪ್ಪಾಜಿ):- ಪತ್ರಿಕೆಯವರು ಏನಾದರೊಂದು sensational issue ಅನ್ನು ಅಥವಾ ಯಾವುದಾದರೂ ಮುಖ್ಯವಾದ ವಿಷಯವನ್ನು ಬಿಂಬಿಸದೇ ಹೋದರೆ ಪತ್ರಿಕೆ ಮಾರಾಟವಾಗುವುದಿಲ್ಲ. ಅವರ ಉದ್ಯೋಗ ಅವರು ಮಾಡುತ್ತಾರೆ. ಅದನ್ನು ನಂಬಿಕೊಂಡು ನೀವು ಇಲ್ಲಿ ಹೇಳಿಕೊಂಡು ಕುಳಿತರೆ ಹೇಗೆ?

ಶ್ರೀ ಜಗದೀಶ್ ಶೆಟ್ಟರ್:- ಕೆಲವು weekly ಪತ್ರಿಕೆಗಳಿದ್ದು, ಆ ಪತ್ರಿಕೆಗಳು sensational issues ಪ್ರಕಟಿಸುತ್ತವೆ. Daily ಪತ್ರಿಕೆ daily ಬರುವಂತಹ ಪತ್ರಿಕೆಯಲ್ಲಿ ಬಂದಿರುವುದು ಸುಳ್ಳೆ?

(ಗೊಂದಲ)

ಶ್ರೀ ಸಿ.ಎಸ್. ನಾಡಗೌಡ (ಅಪ್ಪಾಜಿ):- ತಾವು ರೆಸಾರ್ಟ್ ಹೋಗಿ ಕುಳಿತುಕೊಂಡಿದ್ದಿರಿ. ನಾಲ್ಕು ಮಂದಿಯನ್ನು ಈ ಕಡೆ ಮತ್ತು ಆ ಕಡೆ ಕೂರಿಸಿಕೊಂಡು ಹೋಗುತ್ತಿದ್ದೀರಿ. ಗೋವಾಗೆ ಕರೆದುಕೊಂಡು ಹೋಗುತ್ತಿದ್ದೀರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ದಿನ ನಿತ್ಯ ಪತ್ರಿಕೆಗಳಲ್ಲೂ ಬಂದಿರುತ್ತದೆ.

(ಗೊಂದಲ)

ಶ್ರೀ ಯು.ಟಿ. ಖಾದರ್, (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):- ಮಾನ್ಯ ಅಧ್ಯಕ್ಷರೆ, ಬಹಳಷ್ಟು ಪತ್ರಿಕೆಗಳಲ್ಲಿ ಮೆಚ್ಚುಗೆ ವ್ಯಕ್ತಪಡಿಸಿ ಬರೆದಿರುತ್ತಾರೆ.

(ಗೊಂದಲ)

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:- ನಾವೆಲ್ಲಾ resort ಗೆ ಹೋಗಿಲ್ಲ.

ಶ್ರೀ ಯು.ಟಿ. ಖಾದರ್:- ಬಹಳಷ್ಟು ಪತ್ರಿಕೆಯವರು ಮೆಚ್ಚುಗೆಯನ್ನು ವ್ಯಕ್ತಪಡಿಸಿ ಬರೆದಿದ್ದಾರೆ. ಅದನ್ನು ಕೂಡಾ ಓದಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳು ವಿರೋಧ ಪಕ್ಷದಲ್ಲಿದ್ದಾಗ ಪತ್ರಿಕೆಯಲ್ಲಿ ಬಂದದ್ದೆಲ್ಲವೂ ಸತ್ಯ ಎಂದು ಮಾತನಾಡಿದರು ಆಗ ನಮ್ಮ ಬಗ್ಗೆ. ಈಗ ಪತ್ರಿಕೆಯಲ್ಲಿ ಬಂದದ್ದೆಲ್ಲಾ ಸುಳ್ಳು ಎಂದು ಮಾತನಾಡುತ್ತಾರೆ.

ಶ್ರೀ ದಿನೇಶ್ ಗುಂಡೂರಾವ್:- ಇಲ್ಲ, ಈ ರೀತಿ ಯಾವಾಗಲೂ ಮಾತನಾಡಿಲ್ಲ. ನಿಮ್ಮಲ್ಲಿ ನಿಜಾಂಶ ಇತ್ತು.

ಶ್ರೀ ಸಿದ್ದರಾಮಯ್ಯ:- ನಾನು ಯಾವತ್ತು ಪತ್ರಿಕೆಯನ್ನು ಹಿಡಿದುಕೊಂಡು assembly ಯಲ್ಲಿ ವಾದ ಮಾಡಿಯೇ ಇಲ್ಲ.

ಒಬ್ಬ ಮಾನ್ಯ ಸದಸ್ಯರು:- ನಾವ್ಯಾರು ಬಾಯಿ ಬಾಯಿ ಬಡಿದುಕೊಳ್ಳಲಿಲ್ಲ. ನಾವ್ಯಾರು ಗೋವಾ resort ಗೆ ಹೋಗಲಿಲ್ಲ.

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:- ಎಲ್ಲಾ ಎಂ.ಎಲ್.ಎ ಗಳು resort ಗೆ ಹೋಗಿದ್ದು, ನಾವು resort ಗೆ ಹೋಗಿಲ್ಲ.

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಅಧ್ಯಕ್ಷರೆ, ಇವರು ಇಲ್ಲದ ವಿಷಯವನ್ನು ಪ್ರಸ್ತಾಪ ಮಾಡುತ್ತಿದ್ದಾರೆ. ಇವೆಲ್ಲಾ ಊಹಾಪೋಹಗಳನ್ನು ನೀವು ಏಕೆ ಮಾತನಾಡುತ್ತಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್:- "ಕುಂಬಳಕಾಯಿ ಕಳ್ಳ ಎಂದರೆ ನೀವು ಏಕೆ ಹೆಗಲು ಮುಟ್ಟಿಕೊಳ್ಳುತ್ತೀರಿ?"

ಶ್ರೀ ದಿನೇಶ್ ಗುಂಡೂರಾವ್:- ಯಾರೋ ಹೇಳಿದರು ಎಂದು ಏಕೆ ಊಹಾಪೋಹಗಳನ್ನು ಮಾತನಾಡುತ್ತೀರಿ?

ಶ್ರೀ ಜಗದೀಶ್ ಶೆಟ್ಟರ್:- ಅಲ್ಲಿ ಶಾಸನಸಭೆಯಲ್ಲಿ ಮಾತನಾಡುವುದು, ಇಲ್ಲಿ ಹೊರಗೆ ಬಂದು ಇಲ್ಲವೆಂದು ಹೇಳುವುದು.

ಶ್ರೀ ದಿನೇಶ್ ಗುಂಡೂರಾವ್:- ಇದೇ ಕನಸಿನಲ್ಲಿರಿ ಮಾನ್ಯ ವಿರೋಧ ಪಕ್ಷದ ನಾಯಕರೆ. ನಿಮ್ಮ ಕನಸು ಯಾವುದೂ ಕೂಡಾ ನನಸಾಗುವುದಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಬಿಡಿ, ನಮಗೆ ಬುದ್ಧಿ ಕಲಿಸಿ ಆಗಿದೆ, ಅದಕ್ಕೆ ನಾವು ಇಲ್ಲಿ ಬಂದಿದ್ದೇವೆ. ನೀವಾದರೂ ಸರಿಯಾಗಿ, ಯಾರು ಬೇಡವೆನ್ನುತ್ತಾರೆ? ಬೆಳಿಗ್ಗೆಯಿಂದ ಸಂಜೆಯವರೆಗೆ... ಹೋಗಲಿ ಆ inefficient ministers ತೆಗೆದು ಹಾಕಿದರೆ ನಿಮ್ಮಗಳಿಗೆ ಒಂದಿಷ್ಟು ಜನರಿಗೆ opportunity ಸಿಗುತ್ತದೆ. ಬಹಳ ಜನ ಕಾಯ್ದು ಕುಳಿತಿದ್ದೀರಿ.

ಶ್ರೀ ರುದ್ರೇಶ್‌ಗೌಡ ವೈ.ಎನ್.:- ಆ ನಾಟಕ ಆಡಿದ್ದಕ್ಕೆ ನೀವು ಅಲ್ಲಿ ಕುಳಿತಿರುವುದು.

ಶ್ರೀ ಜಗದೀಶ್ ಶೆಟ್ಟರ್:- ಮಿನಿಸ್ಟರ್ ಆಗಬೇಕೆಂದು ಬಹಳಷ್ಟು ಜನರು ಕಾಯ್ದು ಕುಳಿತಿದ್ದಾರೆ, ಕೆಲವರು statement ಕೂಡಾ ಕೊಟ್ಟಿದ್ದಾರೆ. Open statement ಕೊಟ್ಟಿದ್ದಾರೆ.**ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:-** ನೀವು 5 ವರ್ಷ ಹಗಲುಗನಸು ಕಾಣಬೇಡಿ.

ಶ್ರೀ ಜಗದೀಶ್ ಶೆಟ್ಟರ್:- ಇವರು ಹೇಳುತ್ತಾರೆ. ಹಿಂದೆ ಕೆಲವು ಶಾಸಕರು statement ಕೊಟ್ಟಿದ್ದಾರೆ. ಗುತ್ತೇದಾರ್ ರವರು statement ಕೊಟ್ಟಿದ್ದಾರೆ. ಏನೆಂದರೆ, ಈ cabinet ನಲ್ಲಿ XXX XXX XXX ಆಗುವುದಿಲ್ಲ. ಅಂತಹವರು ಮಿನಿಸ್ಟರ್ ಆಗಿದ್ದಾರೆ, ಅವರನ್ನು ತೆಗೆಯಿರಿ ಎಂದು ತಿಂಗಳ ಹಿಂದೆ ಹೇಳಿದ್ದಾರೆ. ಹಲವಾರು ಶಾಸಕರು open ಆಗಿ ಹೇಳಿದ್ದಾರೆ. ಒಂದು 10-12 ಜನ inefficient ministers ಇದ್ದಾರೆ, ಅವರನ್ನು ತೆಗೆದು ನಮಗೆ ಹೊಸದಾಗಿ ಅವಕಾಶ ಕೊಡಿ ಎಂದು ಕೇಳಿದ್ದಾರೆ. ಇದನ್ನು deny ಮಾಡುತ್ತಾರೆಯೇ? ಹಾಗದರೆ ಇಲ್ಲಿ ನಿಮ್ಮ ಗುತ್ತೇದಾರ್ ರವರ statement ಬಂದಿದೆ, ಅವರನ್ನು ಕೇಳಿ. ಇಲ್ಲವೆಂದು ಹೇಳಲಿ. ಅವರು ಜಾರಕಿಹೊಳಿಯವರು ...

ಶ್ರೀ ಯು.ಟಿ. ಖಾದರ್:- ಬಹಳಷ್ಟು ಪತ್ರಿಕೆಯವರು ಮೆಚ್ಚುಗೆ ವ್ಯಕ್ತಪಡಿಸಿ ಪ್ರಕಟಿಸಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಈಗ ಅವರು ಇಲ್ಲ, ಪತ್ರಿಕೆಯಲ್ಲಿ ಬಂದಿರುವುದು ಸುಳ್ಳು. ಯಾರೂ statement ಕೊಟ್ಟಿಲ್ಲವೆಂದು ಹೇಳಿದರು. ಕಾಂಗ್ರೆಸ್ ಪಕ್ಷದ ಅಧ್ಯಕ್ಷರು ಡಾ|| ಜಿ. ಪರಮೇಶ್ವರ್ ರವರು ವಿಜಯವಾಣಿ ಪತ್ರಿಕೆಯಲ್ಲಿ ಒಂದು statement ಬಂದಿದೆ. "ಸಚಿವರುಗಳ ಕಾರ್ಯವೈಖರಿಯ ಬಗ್ಗೆ ಕೆಲವು ಶಾಸಕರು ಅಸಮಾಧಾನವನ್ನು ಹೇಳಿಕೊಂಡಿದ್ದಾರೆ. ಈ ದೂರು ಅಭಿಪ್ರಾಯಗಳನ್ನು ನಾನು ದಿಗ್ವಿಜಯಸಿಂಗ್, ಸಿ.ಎಂ. ಗಮನಕ್ಕೆ ತರುತ್ತೇವೆ". It is a straight statement by the state congress president Dr. G.

Parameshwar. ಹಾಗಾದರೆ ಇದನ್ನು deny ಮಾಡುತ್ತೀರೇನು? ಪರಮೇಶ್ವರ್‌ರವರು ಇದನ್ನು deny ಮಾಡಬಹುದಿತ್ತಲ್ಲ? ಫೆಬ್ರವರಿ 1 ರಂದು ಪತ್ರಿಕೆಯಲ್ಲಿ ಬಂತಲ್ಲ, ಯಾರಾದರೂ ಅಧಿಕೃತವಾಗಿ ಒಂದು ಹತ್ತು ಜನ

XXX ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ

ಶಾಸಕರು ಯಾರ್‍ಯಾರು ಹೆಸರು ಪತ್ರಿಕೆಯಲ್ಲಿ ಬಂದಿತ್ತು, direct ಮಾತನಾಡಿದರಲ್ಲ, ಅವರು ಪತ್ರಿಕಾಗೋಷ್ಠಿ ಮಾಡಬಹುದಿತ್ತಲ್ಲ, ಮಾಡಿ ಈ ರೀತಿ ಶಾಸಕಾಂಗ ಸಭೆಯಲ್ಲಿ ಇದು ಯಾವುದೂ discussion ಆಗಿಲ್ಲ. ನಾವು ಯಾರ ವಿರುದ್ಧವೂ ಬಂಡಾಯ, ಯಾರ ವಿರುದ್ಧವೂ ಸಿಟ್ಟು, ಕೋಪ ವ್ಯಕ್ತಪಡಿಸಿಲ್ಲ. ಇಲ್ಲಿ inefficient ministers ಇಲ್ಲ, ಎಲ್ಲರೂ ಒಳ್ಳೆಯ ಕೆಲಸ ಮಾಡುತ್ತಿದ್ದಾರೆ ಎಂದು ಒಂದು press conference ಮಾಡಬಹುದಿತ್ತಲ್ಲ. ಶಾಸಕರು 8–10 ಜನರು atleast ಯಾರ್‍ಯಾರ ಹೆಸರುಗಳು ಪತ್ರಿಕೆಯಲ್ಲಿ ಬಂದಿತ್ತು, ಅವರಾದರೂ ಮಾಡಬಹುದಿತ್ತಲ್ಲ, ನಿಮ್ಮ ರಾಜ್ಯಾಧ್ಯಕ್ಷರಾದ ಪರಮೇಶ್ವರ್‌ರವರಾದರೂ ಇದರ ಬಗ್ಗೆ ಏನೂ ಆಗಿಲ್ಲವೆಂದು ಒಂದು counter statement ಕೊಡಬಹುದಿತ್ತಲ್ಲ. ಇಲ್ಲಿ ಅರ್ಥವಾಗುತ್ತದೆ. ಯಾವ ರೀತಿ ಸರ್ಕಾರ ನಡೆಯುತ್ತಿದೆ, ಯಾವ ರೀತಿ ಆಡಳಿತ ನಡೆಯುತ್ತಿದೆ. ನೀವೇ ಆತ್ಮಾವಲೋಕನ ಮಾಡಿಕೊಳ್ಳಿ.

ಶ್ರೀ ಯು.ಟಿ. ಖಾದರ್:– ನಮ್ಮ ಪಕ್ಷದ ಬಗ್ಗೆ ನಿಮಗೆ ಎಷ್ಟು ಕಾಳಜಿ ಇದೆಯಲ್ಲ?

ಶ್ರೀ ಜಗದೀಶ್ ಶೆಟ್ಟರ್:– ಹೌದು. ಬಹಳ ಕಾಳಜಿ ಇದೆ, 5 ವರ್ಷ ಸರ್ಕಾರ ನಡೆಯಲಿ ಎಂದು. ನಿಮ್ಮ ಆಡಳಿತ ಸತ್ತು ಹೋಗಿದ.

ಶ್ರೀ ಕೆ.ಜಿ. ಬೋಪಯ್ಯ:– ನಿಮ್ಮ ಬಗ್ಗೆ speaker ರವರೆ ಮುಖ್ಯಮಂತ್ರಿಗಳಿಗೆ ಬರೆದಿದ್ದಾರೆ. ಸುಮ್ಮನೆ ಏಕೆ?

ಶ್ರೀ ಯು.ಟಿ. ಖಾದರ್:– ಅದನ್ನು ನಾವು ಸ್ವಾಗತಿಸುತ್ತೇವೆ.

ಶ್ರೀ ಕೆ.ಜಿ. ಬೋಪಯ್ಯ:– ನಿಮ್ಮ ಕಾರ್ಯವೈಖರಿ ಹಾಗಿದೆ ಎಂದು.

ಶ್ರೀ ಜಗದೀಶ್ ಶೇಟ್ಟರ್:- ಮಾನ್ಯ ಅಧ್ಯಕ್ಷರೆ, ಇತ್ತೀಚೆಗೆ ಸತೀಶ್ ಜಾರಕಿಹೊಳಿರವರ ರಾಜೀನಾಮೆಯ ಪ್ರಹಸನ ನಡೆಯಿತು.

ಶ್ರೀ ಗೋವಿಂದ ಎಂ. ಕಾರಜೋಳ:- ಸರ್ ಒಂದು ನಿಮಿಷ್. ಅವರು ತಾವು ಹೇಳಿದಂತೆ ಹೇಳಿಲ್ಲ.

XXX XXX XXX ಪಾಪಿ-ಪರದೇಶಿಗಳೆಲ್ಲರೂ ಮಂತ್ರಿಗಳಾಗಿದ್ದಾರೆ. ಅವರನ್ನು ತೆಗೆದು ನಮ್ಮನ್ನು ಮಂತ್ರಿಗಳನ್ನಾಗಿ ಮಾಡಿ ಎಂದು ಅವರು ಕೇಳಿದರು. ನೀವು ಅದನ್ನು ಸರಿಯಾಗಿ ಹೇಳಲಿಲ್ಲ.

ಶ್ರೀ ಬಿ.ಎ. ಮೊಹಿಯುದ್ದೀನ್ ಬಾವಾ:- ಪರವಾಗಿಲ್ಲ. ನಾವು ನಮ್ಮ ಸರ್ಕಾರದಲ್ಲಿ XXX XXX XXX ಕೊಟ್ಟು ಅಷ್ಟಾದರೂ ಮಾಡಿದ್ದೇವಲ್ಲ ಪುಣ್ಯ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ಸಾರಾಸಗಟಾಗಿ ಪತ್ರಿಕೆಯಲ್ಲಿ ಬಂದದ್ದನ್ನು. . .

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಅಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಹೇಳುವ ಪ್ರಕಾರ ಯಾರಿಗೆ XXX XXX XXX ಅವರಿಗೆ ಕೆಲಸ ಮಾಡಲಾಗುವುದಿಲ್ಲವೇನು? ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ ಎಂದು ಹೇಳಿದ ತಕ್ಷಣ ಅವರನ್ನು ನಾವು ನಿರ್ಲಕ್ಷ್ಯ ಮಾಡಬೇಕೇನು?

ಶ್ರೀ ಡಿ.ಎನ್. ಜೀವರಾಜ್:- ಮೊಹಿದ್ದೀನ್ ಬಾವಾ ರವರು ನಿಮಗೆ ಹೇಳಿದ್ದಲ್ಲ. ದಯವಿಟ್ಟು ನೀವು ಅದಲ್ಲ.

ಶ್ರೀ ದಿನೇಶ್ ಗುಂಡೂರಾವ್:- ಅಂತಹವರು ಎಲ್ಲಾ ಕ್ಷೇತ್ರದಲ್ಲಿಯೂ ಇರುತ್ತಾರೆ. ಅವರನ್ನು ನೀವು ಈ ರೀತಿಯಾಗಿ ಟೀಕೆ ಮಾಡುವುದು ಸರಿಯಲ್ಲ.

ಶ್ರೀಮತಿ ಉಮಾಶ್ರೀ:- ಮಾನ್ಯ ಅಧ್ಯಕ್ಷರೆ, ದಯವಿಟ್ಟು ಆ ಎಂಬ ಪದಗಳು ಅಸಂವೈಧಾನಿಕ ಅಲ್ಲ. ಆದರೆ, ನೀವು ಮಾತನಾಡುವ ಮಾತುಗಳಲ್ಲ.

ಉಪಾಧ್ಯಕ್ಷರು:–ಆ ಪದಗಳನ್ನು ಕಡತದಿಂದ ತೆಗೆಯಲಾಗಿದೆ.

XXX ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ

XXX XXX XXX ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ

ಶ್ರೀ ದಿನೇಶ್ ಗುಂಡೂರಾವ್:– ಪಾಪ ನೀವು ಅವರನ್ನು insult ಮಾಡುತ್ತಿದ್ದೀರಿ. ಯಾರು community ಇದೆ, ಅವರನ್ನು insult ಮಾಡುತ್ತಿದ್ದೀರಿ ನೀವು.

ಶ್ರೀ ಸಿ.ಟಿ. ರವಿ:– Inefficient ಮಂತ್ರಿಗಳಿದ್ದಾರೆಂದು ನಿಮ್ಮ ಎಂ.ಎಲ್.ಎ ಗಳು ಹೇಳಿರುವುದು.

ಶ್ರೀ ದಿನೇಶ್ ಗುಂಡೂರಾವ್:– ಅವರು inefficient ಎಂದು ಹೇಳುವುದಕ್ಕೆ ಬರುವುದಿಲ್ಲ. ಎಷ್ಟೋ ಜನ XXX XXX XXX ಒಳ್ಳೆಯ ಕೆಲಸ ಮಾಡಿದ್ದಾರೆ.

ಉಪಾಧ್ಯಕ್ಷರು:– ದಿನೇಶ್ ರವರೆ ತೆಗೆಸಿದ್ದೇನೆ ಬಿಡಿ.

ಶ್ರೀ ದಿನೇಶ್ ಗುಂಡೂರಾವ್:– ಎಷ್ಟೋ ಕಡೆ ಅನೇಕ ಸಾಧನೆ ಮಾಡಿದ್ದಾರೆ. ಅದಕ್ಕೋಸ್ಕರ ಅವರನ್ನು ನೀವು ಈ ರೀತಿಯಾಗಿ ಟೀಕೆ ಮಾಡುವುದು ಸರಿಯಲ್ಲ. ಆ community ಯಾರನ್ನು ನೀವು. . .

ಶ್ರೀ ಗೋವಿಂದ ಎಂ. ಕಾರಜೋಳ:–ಅವರು ಹೇಳಿದ್ದು ನಿಮ್ಮ ಮಂತ್ರಿಗಳ ಬಗ್ಗೆ. ನಿಮ್ಮ ಮಂತ್ರಿಗಳು ಯಾರಾದರೂ ಸಾಧನೆ ಮಾಡಿದ್ದರೆ ಹೇಳಿ.

XXX ಮಾನ್ಯ ಉಪಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆಯಲಾಗಿದೆ

ಶ್ರೀ ದಿನೇಶ್ ಗುಂಡೂರಾವ್:– ಯಾರಾದರೂ ಇದ್ದರೂ ಕೂಡಾ, ಬೇರೆ ಕ್ಷೇತ್ರದಲ್ಲಿದ್ದರೂ ಕೂಡಾ ಅದನ್ನು ನೀವು ಈ ರೀತಿ ಮಾತನಾಡಬಾರದು. ಆ ಪದಗಳ ಉಪಯೋಗ ಮಾಡಬಾರದು

ಶ್ರೀ ಜಗದೀಶ್ ಶೆಟ್ಟರ್:– ಆ ರೀತಿ ಯಾರು XXX XXX XXX ಇದ್ದಾರೆ ನೀವೇ ಹೇಳಿಬಿಡಿ.

ಶ್ರೀ ಗೋವಿಂದ ಎಂ. ಕಾರಜೋಳ:– ದಿನೇಶ್ ಗುಂಡೂರಾವ್ ರವರೆ, ನಿಮ್ಮ ಮಂತ್ರಿಮಂಡಲದಲ್ಲಿರುವ XXX XXX XXX ಯಾರಾದರೂ ಸಾಧನೆ ಮಾಡಿದ್ದರೆ ಹೇಳಿ.

ಶ್ರೀ ದಿನೇಶ್ ಗುಂಡೂರಾವ್:–XXX XXX XXX ಆ ರೀತಿ ಮಾತನಾಡಬಾರದು. ಅದು ಒಳ್ಳೆಯದಲ್ಲ.

ಶ್ರೀಮತಿ ಉಮಾಶ್ರೀ:– ಮಾನ್ಯ ಅಧ್ಯಕ್ಷರೆ XXX XXX XXX ಎಂದರೆ ದಯವಿಟ್ಟು ವಿಕಲಚೇತನರಿಗೆ ಅವಮಾನ ಮಾಡಿದಂತಾಗುತ್ತದೆ. ದಯಮಾಡಿ ಬೇಡ. ಆ ಪದಗಳನ್ನು ಕಡತದಿಂದ ತೆಗೆಸಿ.

ಉಪಾಧ್ಯಕ್ಷರು:– ನಾನು ತೆಗೆಸಲು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:– ಆ ರೀತಿ ಯಾರು XXX XXX XXX ಇಲ್ಲ. XXX XXX XXX ಎಂದು ನಾವು ಹೇಳಿಲ್ಲ. ನಿಮ್ಮ ಪಕ್ಷದ ಶಾಸಕರಾದ ಗುತ್ತೇದಾರ್ ರವರು ಏನು ಹೇಳಿದ್ದಾರೆ, ಅದನ್ನು ನಾನು repeat ಮಾಡಿದ್ದೇನೆ. ನಮ್ಮ ಕಡೆಯಿಂದ statement ಬಂದಿಲ್ಲ.

ಶ್ರೀ ದಿನೇಶ್ ಗುಂಡೂರಾವ್:– ಆ ಸಮಾಜಕ್ಕೆ ಎಲ್ಲೋ ಒಂದು ಕಡೆ ನೀವು ಅವರನ್ನು ಚುಚ್ಚಿ ಮಾತನಾಡುತ್ತಿದ್ದೀರಿ. ನಿಮ್ಮ ಟೀಕೆ ಸರಿಯಿಲ್ಲ. ಆ ರೀತಿ ಮಾತನಾಡುವುದು ಬೇಡ.

ಶ್ರೀ ಜಗದೀಶ್ ಶೆಟ್ಟರ್:– ನಾವು ಯಾರೂ XXX XXX XXX ಎಂದು ಹೇಳಿಲ್ಲ.

ಉಪಾಧ್ಯಕ್ಷರು:– ತೆಗೆಸಲು ಹೇಳಿದ್ದೇನೆ. ಕಡತದಿಂದ ತೆಗೆಸಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:–XXX XXX XXX ಎಂದು ನಾವ್ಯಾರೂ ಹೇಳಿಲ್ಲ. ನಿಮ್ಮ ಪಕ್ಷದ ಶಾಸಕರಾದ ಗುತ್ತೇದಾರ್‌ರವರು ಹೇಳಿದ್ದಾರೆ. ಈ ಕ್ಯಾಬಿನೆಟ್‌ನಲ್ಲಿ XXX XXX XXX ಮಂತ್ರಿಗಳಾಗಿದ್ದಾರೆಂದು ಹೇಳಿದ್ದಾರೆ. XXX XXX XXX ಎಂದು ನೀವೇ add ಮಾಡುತ್ತಿದ್ದೀರಿ. ಅದನ್ನು ನಾವು ಹೇಳಿಲ್ಲ, ನಿಮ್ಮವರ statement.

ಶ್ರೀ ದಿನೇಶ್ ಗುಂಡೂರಾವ್:– ನಮ್ಮ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ನಾವು ಟೀಕೆಗಳನ್ನೂ ಸ್ವೀಕಾರ ಮಾಡುತ್ತೇವೆ, ಒಳ್ಳೆಯ ಕೆಲಸಗಳನ್ನೂ ಮಾಡುತ್ತೇವೆ. ನಿಮ್ಮ ತರಹ ಭಂಡತನ ಮಾಡಿ ಹೋಗಿ ಬೀದಿಗೆ ಬಿದ್ದು ರಂಪಾಟ ಮಾಡುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ನೀವೆಲ್ಲಾ ಬಹಳ ಬಿಡಿ. ನೀವು ಕಾಂಗ್ರೆಸ್ಸಿಗರು ಎಷ್ಟು ಭಂಡರು ಎಂದು ಗೊತ್ತಿದೆ.

ಶ್ರೀ ದಿನೇಶ್ ಗುಂಡೂರಾವ್:– ಏನೇ ಇದ್ದರೂ ಆಂತರಿಕ ಚರ್ಚೆ ಮಾಡಿ ಇತ್ಯರ್ಥ ಮಾಡಿಕೊಳ್ಳುತ್ತೇವೆ. ನಮ್ಮಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ಅದು ನಿಮ್ಮಲ್ಲಿ ಇಲ್ಲದೆ ಇರುವುದರಿಂದ ಹೊಡೆದಾಡಿ ನಿಮ್ಮ ಪಕ್ಷದಲ್ಲಿ ಬೇರೆಯಾಗಿ ಮರು ಚುನಾವಣೆ ಆಯಿತು.

ಶ್ರೀ ಜಗದೀಶ್ ಶೆಟ್ಟರ್:– ಗೊತ್ತಾಗಿದೆ. ಇಂದು ಇಡೀ ದೇಶದಲ್ಲಿ ಕಾಂಗ್ರೆಸ್ ಮುಕ್ತ ಭಾರತವಾಗಿದೆ. ಇದೊಂದು ಕರ್ನಾಟಕ ಮಾತ್ರ ಉಳಿದಿದೆ. ಅದು ಅಂತ್ಯಕ್ಕೆ ಬಂದಿದೆ. ಅದೂ ಕಾಂಗ್ರೆಸ್ ಮುಕ್ತ ರಾಜ್ಯವಾಗುವ ಹಂತಕ್ಕೆ ಬಂದಿದೆ. ಈ ರೀತಿ ನೀವು ಆಡಳಿತ ನಡೆಸಿಕೊಂಡು ಹೋದರೆ ಆದಷ್ಟು ಬೇಗನೆ ಇದೂ ಕಾಂಗ್ರೆಸ್ ಮುಕ್ತ ರಾಜ್ಯವಾಗುತ್ತದೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ನಿಮಗೆ ಇಷ್ಟೊಂದು ಅಹಂಕಾರ ಬೇಡ. ದೆಹಲಿಯಲ್ಲಿ ಗೊತ್ತಾಗುತ್ತದೆ. ಇಷ್ಟೊಂದು ಅಹಂಕಾರ ಪಡಬೇಕಿಲ್ಲ ಮಾನ್ಯ ವಿರೋಧ ಪಕ್ಷದ ನಾಯಕರೆ, ಈ ರೀತಿ ಕಾಂಗ್ರೆಸ್ ಮುಕ್ತ ಭಾರತ ಎಂದು ಮಾತನಾಡುತ್ತೀರಲ್ಲ, ಇದೆಲ್ಲಾ ಆಗುವುದಿಲ್ಲ. ನಿಮ್ಮಲ್ಲಿ ಪ್ರಜಾಪ್ರಭುತ್ವ ಇಲ್ಲ.

ಯಾರೋ ಇಬ್ಬರು ಇಡೀ ಪಕ್ಷ ನಡೆಸುತ್ತಿದ್ದಾರೆ ಇವತ್ತು. ನಿಮ್ಮಲ್ಲಿ ಎಲ್ಲಿದೆ ಆಂತರಿಕ ಪ್ರಜಾಪ್ರಭುತ್ವ?

ಉಪಾಧ್ಯಕ್ಷರು:- ದಿನೇಶ್ ಕುಳಿತುಕೊಳ್ಳಿ, ಅವರು ಮಾತನಾಡಲಿ.

ಒಬ್ಬ ಮಾನ್ಯ ಸದಸ್ಯರು:- ದೆಹಲಿ ಜನರು ಉತ್ತರ ಕೊಡುತ್ತಾರೆ.

ಶ್ರೀ ಸಿ.ಟಿ. ರವಿ:- ನಮ್ಮಲ್ಲಿ ಯಾವುದೂ DNA ಮೇಲೆ ನಡೆಯುವುದಿಲ್ಲ. Democracy ಇರುವುದರಿಂದಲೇ..(ಗೊಂದಲ). DNA ಮೇಲೆ leader ಆಗುವುದನ್ನು ಯಾವತ್ತು ನಮ್ಮ ಪಾರ್ಟಿ ಒಪ್ಪಿಕೊಂಡಿಲ್ಲ. ಅಯೋಗ್ಯರು, DNA ಮೇಲೆ leader ಆಗಿರಲು ನಮ್ಮ ಪಕ್ಷ ಯಾವತ್ತೂ ಒಪ್ಪಲಿಲ್ಲ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:- ನಿಮ್ಮಲ್ಲಿ ಎಲ್ಲರೂ ಕೂಡಾ ನೀವು ಹೆದರಿಕೊಂಡು ಸಾಯುತ್ತಿದ್ದೀರಿ. ಯಾರೋ ಒಬ್ಬರಿಗೆ ಬೇಜಾರಾಗುತ್ತದೆ, ಯಾರೋ ಒಬ್ಬರಿಗೆ ಕೋಪ ಬರುತ್ತದೆಂದು ಹೆದರಿಕೊಂಡು ನರಳುತ್ತಿದ್ದೀರಿ ನೀವು. ಭಯದಿಂದ ನೀವು ಇವತ್ತು ಕೆಲಸ ಮಾಡುತ್ತಿದ್ದೀರಿ. ನಿಮಗೆ ಮಾತನಾಡಲು ಸ್ವಾತಂತ್ರ್ಯವಿಲ್ಲ. ಒಬ್ಬ ಕೇಂದ್ರದ ಮಂತ್ರಿಗಳು ಮಾತನಾಡುವುದಿಲ್ಲ. ಎಲ್ಲರೂ ಭಯದಿಂದ ಇದ್ದಾರೆ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಮಾನ್ಯ ಉಪಾಧ್ಯಕ್ಷರೆ, ರಾಜ್ಯಪಾಲರು ಈ ಸದನದಲ್ಲಿ ಮಾಡಿದ ಭಾಷಣದ ಮೇಲೆ ಚರ್ಚೆಯಾಗುತ್ತಿದೆ. ರಾಜ್ಯಪಾಲರ ಭಾಷಣದ ಮೇಲೆ ಗೌರವವನ್ನು ಸೂಚಿಸುವುದು ಈ ಸಭೆಯ ಸಂವಿಧಾನಬದ್ಧವಾದ ಕರ್ತವ್ಯ ಮತ್ತು ಜವಾಬ್ದಾರಿ. ಆ ಹಿನ್ನೆಲೆಯಲ್ಲಿ ಮಾತನಾಡಬೇಕಾದಾಗ ಪತ್ರಿಕೆಗಳಲ್ಲಿ ಬಂದಿರುವುದನ್ನೇ ಆಧರಿಸಿ ನಮ್ಮ ಭಾಷಣಕ್ಕೆ ಅದು ಪ್ರತ್ಯುತ್ತರವೆಂದು ಹೇಳಬೇಕಾದರೆ ಅದು ಎಷ್ಟರಮಟ್ಟಿಗೆ ಸರಿಯಾಗುತ್ತದೆ. ದಯಮಾಡಿ ನೀವು ಭಾಷಣ ಮಾಡಿ. ಅಲ್ಲೋ ಇಲ್ಲೋ

ಒಂದು ಕಡೆ ಪತ್ರಿಕೆಗಳ ಬಗ್ಗೆ ಹೇಳಿದರೆ ಅದನ್ನು ಒಪ್ಪೋಣ. ಬರಿ ಅದನ್ನೇ ಮಾತನಾಡುವುದಾದರೆ ಏನರ್ಥ?

ಶ್ರೀ ಜಗದೀಶ್ ಶೆಟ್ಟರ್:– ನಾನು ಇನ್ನು ಭಾಷಣ ಪ್ರಾರಂಭ ಮಾಡಿಲ್ಲ. ಇದು ನನ್ನ ಪೀಠಿಕೆ.

ಶ್ರೀ ಟಿ.ಬಿ. ಜಯಚಂದ್ರ:– ರಾಜ್ಯಪಾಲರು ಮಾಡಿದಂತಹ ಭಾಷಣದಲ್ಲಿ ಏನಾದರೂ ತಪ್ಪಿದ್ದರೆ ನೀವು amendments propose ಮಾಡಿ. Amendments ಅನ್ನು ಪ್ರಪೋಸ್ ಮಾಡಿ, ಅದರ ಬಗ್ಗೆ ಚರ್ಚೆ ಮಾಡೋಣ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ಇವರು ನಮಗೆ ಬುದ್ಧಿ ಹೇಳುವುದು ಬೇಕಾಗಿಲ್ಲ.

ಶ್ರೀ ಟಿ.ಬಿ. ಜಯಚಂದ್ರ:– ನೀವು ಏನು ಬೇಕಾದರೂ ಮಾತನಾಡಬಹುದಾ?

ಶ್ರೀ ಜಗದೀಶ್ ಶೆಟ್ಟರ್:– ನಾವು ಏನು ಮಾತನಾಡಬೇಕು, ಹೇಗೆ ಮಾತನಾಡಬೇಕು ಅದು ನಮಗೆ ಗೊತ್ತಿದೆ. ನಿಮ್ಮ ಕಡೆಯಿಂದ ನಾವು ಬುದ್ದಿ ಕಲಿಯುವುದು ಬೇಕಾಗಿಲ್ಲ. ನೀವು ಇಲ್ಲಿದ್ದಾಗ ಏನೇನು ಮಾತನಾಡಿದ್ದೀರಿ ಎಂದು ಎಲ್ಲ ಗೊತ್ತಿದೆ ನಮಗೆ. ಪತ್ರಿಕೆಗಳನ್ನು ರೆಫರ್ ಮಾಡಬಾರದು ಎಂದರೆ ಪತ್ರಿಕೆಗಳಿಗೆ ಕಡಿವಾಣ ಹಾಕಿಬಿಡಿ ಹಾಗಾದರೆ. ಇಲ್ಲಿ ಒಂದು ರೂಲ್ಸ್ ಮಾಡಿಬಿಡಿ.

ಶ್ರೀ ಟಿ.ಬಿ. ಜಯಚಂದ್ರ:– ತಾವು ಸಭಾಧ್ಯಕ್ಷರಾಗಿದ್ದಂತಹವರು, ಮುಖ್ಯ ಮಂತ್ರಿಗಳಾಗಿದ್ದಂತಹವರು, ವಿರೋಧ ಪಕ್ಷದ ನಾಯಕರಾಗಿ ಕೆಲಸ ಮಾಡಿರುವವರು.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಜಯಚಂದ್ರರವರೆ, ತಾವು ಇಲ್ಲಿದ್ದಾಗ ಏನೇನು ಮಾತನಾಡಿದ್ದೀರಿ ನಮಗೆ ಎಲ್ಲ ಗೊತ್ತಿದೆ. ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿದ್ದಾಗ ಏನೇನು ಮಾತನಾಡಿದರು ಎಲ್ಲಾ ಗೊತ್ತಿದೆ. ಸುಮ್ಮನೆ ವಾದ ಮಾಡುವುದಕ್ಕೆ ಹೋಗಬೇಡಿ. ನಿಮ್ಮ ಶಾಸನಸಭೆಯಲ್ಲಿ ಏನು ನಡೆದಿದೆ ಎಂದು ಎಲ್ಲರಿಗೂ ಗೊತ್ತಿದೆ. ಇಡೀ ಜಗತ್ತಿಗೆ ಗೊತ್ತಿದೆ. ನೀವೇಕೆ ತಲೆ

ಕೆಡಿಸಿಕೊಳ್ಳುತ್ತೀರಿ? ಅದರ ಪರಿಣಾಮ ಏನಾಗುತ್ತದೆ ಎಂದು ನಾನು ಹೇಳುತ್ತಿದ್ದೇನೆ. ಆಡಳಿತ ವ್ಯವಸ್ಥೆ ಕೆಟ್ಟು ಹೋಗಿದೆ.

ಶ್ರೀ ಟಿ.ಬಿ. ಜಯಚಂದ್ರ:– ರಾಜ್ಯಪಾಲರು ಮಾಡಿದ ಭಾಷಣದ ಹಿನ್ನೆಲೆಯಲ್ಲಿ . . .

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಾನು yield ಆಗಿಲ್ಲ. ಇವರು restriction ಹಾಕುವುದಾದರೆ ಇವರು ಹೇಗೆ ಹೇಳುತ್ತಾರೆ, ಹಾಗೆಯೇ ಮಾತನಾಡುತ್ತೇನೆ. ಸಂಸದೀಯ ವ್ಯವಹಾರಗಳ ಸಚಿವರು ಹೀಗೆ ಮಾತನಾಡಬೇಕು, ಇಂಥದೇ ವಿಷಯ ಇರಬೇಕೆಂದು ಹೇಳಲಿ ನಾವು ಹಾಗೆಯೇ ಮಾತನಾಡುತ್ತೇವೆ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್:– ನಮ್ಮ ಶಾಸಕಾಂಗ ಸಭೆಯಲ್ಲಿ ಏನಾಗುತ್ತದೆ ಅದು ನಿಮಗೇಕೆ ಬೇಕು?

ಶ್ರೀ ಜಗದೀಶ್ ಶೆಟ್ಟರ್:– "ಕುಂಬಳ ಕಾಯಿ ಕಳ್ಳ ಎಂದರೆ ನೀವು ಹೆಗಲು ಮುಟ್ಟಿ ನೋಡಿಕೊಳ್ಳುತ್ತಿದ್ದೀರಿ". ನಿಮ್ಮ ಶಾಸಕಾಂಗ ಸಭೆಯಲ್ಲಿ ಏನು ನಡೆಯುತ್ತಿದೆ, ಸರ್ಕಾರದಲ್ಲಿ ಏನು ನಡೆಯುತ್ತಿದೆ, ಮಂತ್ರಿಗಳು ಏನು ಮಾಡುತ್ತಿದ್ದಾರೆ, ಯಾವ ಹೇಳಿಕೆ ಕೊಡುತ್ತಿದ್ದಾರೆ, ಎಲ್ಲ ಇಡೀ ಜಗತ್ತಿಗೆ ಗೊತ್ತಿದೆ. ಅದು ಹೇಳಿದರೆ ನಿಮಗೆ ಬೇಜಾರಾಗುತ್ತದೆ.

ಶ್ರೀ ದಿನೇಶ್ ಗುಂಡೂರಾವ್:– ನಮ್ಮ ಶಾಸಕಾಂಗ ಸಭೆಯಲ್ಲಿ ಅನೇಕ ವಿಚಾರಗಳ ಬಗ್ಗೆ ಚರ್ಚೆ ಮಾಡುತ್ತೇವೆ. ಇಡೀ ದಿವಸ ಚರ್ಚೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:– ನಾನು yield ಆಗಿಲ್ಲ ಮಾನ್ಯ ಅಧ್ಯಕ್ಷರೆ, ಅವರೇ continue ಮಾಡುತ್ತಿದ್ದಾರೆ.

ಉಪಾಧ್ಯಕ್ಷರು:– ಅವರು continue ಮಾಡಲಿ ಬಿಡಿ.

ಶ್ರೀ ದಿನೇಶ್ ಗುಂಡೂರಾವ್:– ಬಿಲ್ ಬಗ್ಗೆ ಚರ್ಚೆ ಮಾಡುತ್ತೇವೆ, ನಮ್ಮ ಶಾಸಕಾಂಗ ಸಭೆ ಬಗ್ಗೆ ಇವರೇಕೆ ಪ್ರಸ್ತಾಪ ಮಾಡಬೇಕು ಇಲ್ಲಿ.

ಪಂಚಾಯತ್ ರಾಜ್ ಬಿಲ್ ಬಗ್ಗೆ ಇಡೀ ದಿವಸ ಚರ್ಚೆ ಮಾಡಿದೆವು. ಆಹಾರ ಸರಬರಾಜಿನ ಬಗ್ಗೆ ನಿನ್ನೆ ಎರಡು ಗಂಟೆಗಳ ಕಾಲ ಸುದೀರ್ಘವಾಗಿ ಚರ್ಚೆ ಮಾಡಿದೆವು.

ಶ್ರೀ ಜಗದೀಶ್ ಶೆಟ್ಟರ್:- ನಮ್ಮಲ್ಲಿ ಆಗಿವೆ. ನಿಮ್ಮಲ್ಲಿ ಅಮಾವಾಸ್ಯೆಗೋ ಹುಣ್ಣಿಮೆಗೋ ಒಂದು ಮಾಡಿದ್ದೀರಿ ಅಷ್ಟೆ. ಉಳಿದದ್ದು ಹೇಗೆ ನಡೆಯುತ್ತಿದೆ ಎಂದು ನಮಗೆಲ್ಲ ಗೊತ್ತಿದೆ. ಈ ಎಲ್ಲ ವಿಚಾರವಾಗಿ ರಾಜ್ಯದ ಕಾಂಗ್ರೆಸ್ ಅಧ್ಯಕ್ಷರು ಏನು ಹೇಳಿಕೆ ಕೊಟ್ಟಿದ್ದರು, ಅದನ್ನು ತಮ್ಮ ಮುಂದಿಟ್ಟಿದ್ದೇನೆ. ಅದನ್ನೂ ಸುಳ್ಳು ಹೇಳುತ್ತಿದ್ದೇನೆಂದರೆ, ಅದನ್ನೂ ಅವರು ಹೇಳಿ ಬಿಡಲಿ. ಪತ್ರಿಕೆಯಲ್ಲಿ ರಾಜ್ಯ ಕಾಂಗ್ರೆಸ್ ಅಧ್ಯಕ್ಷರಾದ ಡಾ|| ಜಿ. ಪರಮೇಶ್ವರ್‌ರವರು ಏನು ಹೇಳಿದ್ದಾರೆ, ಅಸಮಾಧಾನ ಇದೆ, ಮಂತ್ರಿಗಳು ಹೇಳಿದ್ದಾರೆ. . . .

ಶ್ರೀ ದಿನೇಶ್ ಗುಂಡೂರಾವ್:- ಮಾನ್ಯ ಉಪಾಧ್ಯಕ್ಷರೆ, ಅವರು ಈ ಸದನದ ಸದಸ್ಯರಲ್ಲ. ಅವರು ಆ ಮನೆಯ ಸದಸ್ಯರು. ನಿಮ್ಮ ರಾಜ್ಯಾಧ್ಯಕ್ಷರು ಏನು ಹೇಳಿದರು, ನಿಮ್ಮ ರಾಷ್ಟ್ರೀಯ ಅಧ್ಯಕ್ಷರು ಏನು ಹೇಳಿದರು, ಅದರ ಬಗ್ಗೆ ನಾವು ಪ್ರಸ್ತಾಪ ಮಾಡಬಹುದಾ ಹೇಳಿ. ಅವರು ಈ ಮನೆಯ ಸದಸ್ಯರಲ್ಲ ಅವರ ಹೆಸರನ್ನು ನೀವೇಕೆ ಪ್ರಸ್ತಾಪ ಮಾಡುತ್ತೀರಿ ಇಲ್ಲಿ. ಅವರು ವಿಧಾನ ಪರಿಷತ್ತಿನ ಸದಸ್ಯರು ಅಲ್ಲಿ ಪ್ರಸ್ತಾಪ ಮಾಡಲಿ ಅವರು. ಇಲ್ಲಿ ಮಾತನಾಡುವ ಅಗತ್ಯವಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ನಾನು ಅವರ ಬಗ್ಗೆ ಟೀಕೆ ಮಾಡಿಲ್ಲ. ಆಪಾದನೆ ಮಾಡಿಲ್ಲ. ಆಪಾದನೆ ಮಾಡಿದ್ದರೆ ನೀವು ಹೇಳಬಹುದಿತ್ತು. ಅವರ ಬಗ್ಗೆ ವೈಯುಕ್ತಿಕವಾಗಿ ಟೀಕೆ ಮಾಡಿಲ್ಲ. ಅವರು ಹೇಳಿದಂತಹ statement quote ಮಾಡಿದ್ದೇನೆ. ಇವರಿಗೆ ಸಹಿಸಿಕೊಳ್ಳುವುದಕ್ಕಾಗುತ್ತಿಲ್ಲ.

ಶ್ರೀ ಕೆ.ಜಿ. ಬೋಪಯ್ಯ:- ಯಾರ ಮೇಲಾದರೂ ವೈಯುಕ್ತಿಕವಾಗಿ ಟೀಕೆ ಮಾಡಿದಾಗ ಹೇಳಿ.

ಶ್ರೀ ರಾಮಲಿಂಗಾರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ಅವರು ಹೇಳಿರುವುದು ಕಡತದಿಂದ ತೆಗೆದು ಹಾಕಬೇಕು.

ಶ್ರೀ ಜಗದೀಶ್ ಶೆಟ್ಟರ್:- Un-parliamentary ಇದ್ದರೆ ತೆಗೆಯಿರಿ. ನನ್ನ ಜೀವನದಲ್ಲಿ un-parliamentary ಶಬ್ದ ಉಪಯೋಗ ಮಾಡುವುದೇ ಇಲ್ಲ. ಯಾವುದಾದರೂ un-parliamentary ಪದ ಇದ್ದರೆ ತೆಗೆಯಿರಿ.

ಶ್ರೀ ದಿನೇಶ್ ಗುಂಡೂರಾವ್:- ಪದೇ ಪದೇ ನೀವೇಕೆ ಅವರ ಹೆಸರು ಪ್ರಸ್ತಾಪ ಮಾಡುತ್ತೀರಿ? ಅವರು ಈ ಮನೆಯ ಸದಸ್ಯರಲ್ಲ. ಅವರು ಪದೇ ಪದೇ ಡಾ॥ ಪರಮೇಶ್ವರ್‌ರವರ ಹೆಸರು ಪ್ರಸ್ತಾಪ ಮಾಡುತ್ತಿದ್ದಾರೆ.

ಶ್ರೀ ಸಿ.ಟಿ. ರವಿ:- ಪರಮೇಶ್ವರ್‌ರವರ ಹೆಸರು ಪ್ರಸ್ತಾಪ ಮಾಡದೆ KPCC ಅಧ್ಯಕ್ಷರು ಏನು ಹೇಳಿದ್ದಾರೆ ಅಷ್ಟು ಹೇಳಿದರೆ ಸಾಕು.

ಶ್ರೀ ಕೆ.ಜಿ. ಬೋಪಯ್ಯ:- ಅಧ್ಯಕ್ಷರು ಎಂದು ಹೇಳಿದ್ದು ಅಷ್ಟೆ. ಅವರ ಬಗ್ಗೆ ಏನಾದರೂ ವೈಯುಕ್ತಿಕವಾಗಿ ಟೀಕೆ ಮಾಡಿದರಾ?

ಶ್ರೀ ದಿನೇಶ್ ಗುಂಡೂರಾವ್:- ಈ ರೀತಿ ಆದರೆ ನಾವೂ ಯಾರ್‍ಯಾರು ಏನೇನು ಹೇಳಿದ್ದಾರೆ, ಎಲ್ಲವನ್ನೂ ಪ್ರಸ್ತಾಪ ಮಾಡಬಹುದು.

ಶ್ರೀ ಕೆ.ಜಿ. ಬೋಪಯ್ಯ:- ನೀವು ಮಾತನಾಡುವಾಗ ಹೇಳಿ.

ಶ್ರೀ ದಿನೇಶ್ ಗುಂಡೂರಾವ್:- ನಿಮ್ಮ ಜನಾರ್ಧನರೆಡ್ಡಿಯವರು ಏನು ಹೇಳಿದರು, ನಿಮ್ಮ ಶಾಸಕರು ಬೇರೆಯವರು ಏನೇನು ಹೇಳಿದರು, ನಿಮ್ಮ ಪ್ರಹ್ಲಾದ್ ಜೋಷಿಯವರು ಏನೇನು ಹೇಳಿದರು ಅದನ್ನೂ ನಾವು ಇಲ್ಲಿ ಪ್ರಸ್ತಾವನೆ ಮಾಡುತ್ತೇವೆ. ಆಗ ನೀವು ನಮ್ಮನ್ನು ನಿಲ್ಲಿಸಬೇಡಿ.

ಶ್ರೀ ಕೆ.ಜಿ. ಬೋಪಯ್ಯ:- ಮಾಡಿ ಮಾಡಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ನೀವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದೀರೋ ಅಥವಾ ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆಯಾಗಿದ್ದು, ನಮ್ಮ KPCC president ಹೇಳಿಕೆ ಬಗ್ಗೆ ನಮ್ಮ AICC General Secretary ಬಂದು ಸಮಾಲೋಚನೆ ಮಾಡಿದಂತಹ ವಿಷಯಗಳ ಬಗ್ಗೆ ಚರ್ಚೆ ಇವತ್ತು ಮಾಡುತ್ತಿದ್ದೀರೋ ಅಥವಾ ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಿದ್ದೀರೋ? ವಿರೋಧ ಪಕ್ಷದ

ನಾಯಕರಾಗಿರುವಂತಹವರು ಪ್ರಮುಖವಾಗಿ ರಾಜ್ಯಪಾಲರ ಭಾಷಣದ ಮೇಲೆ ಅವರು ಭಾಷಣ ಮಾಡಿರುವುದು ಸರಿಯೋ ಇಲ್ಲವೋ ಎಂಬ ಬಗ್ಗೆ ಹಾಗೂ ನಮ್ಮ ಸರ್ಕಾರದ ಬಗ್ಗೆ ಹೇಳಿ. ಮಾಲೀಕಯ್ಯ ಗುತ್ತೇದಾರ್‌ರವರು ಹೀಗೆ ಹೇಳಿದರು, ಬರೀ ಇದೇ ವಿಷಯಗಳನ್ನು ಹೇಳುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:- ರಾಜ್ಯಪಾಲರ ಭಾಷಣದ ಮೇಲೆ ಎಲ್ಲಾ ವಿಷಯಗಳ ಬಗ್ಗೆ ಮಾತನಾಡುವುದಕ್ಕೆ ಅವಕಾಶವಿದೆ. ಮಾತನಾಡುವ ಹಕ್ಕೂ ಇದೆ. ನಾವು ಹಾಗೆಯೇ ಮಾತನಾಡಬೇಕು, ಹೀಗೆಯೇ ಮಾತನಾಡಬೇಕೆಂದು ಹೇಳುವುದಕ್ಕಾಗುವುದಿಲ್ಲ. ರಾಜ್ಯಪಾಲರ ಭಾಷಣದ ಮೇಲೆ ಎಲ್ಲಾ ವಿಚಾರಗಳನ್ನು ಮಾತನಾಡುವುದಕ್ಕೆ ಅವಕಾಶವಿದೆ. ನೀವು ಹಿರಿಯದ್ದೀರಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಮ್ಮ ಮನಸ್ಸಿಗೆ ನೋವಾಗಬಹುದು, ನಿಮ್ಮಿಂದ ಕೂಡ ಪ್ರಾರಂಭವಾಗಿದೆ. ನಿಮ್ಮ ಸರ್ಕಾರ ಬಂದಾಗ ನೀವು ಸಭಾಧ್ಯಕ್ಷರಾಗಿದ್ದಿರಿ. ನೀವು ಸಭಾಧ್ಯಕ್ಷರಾಗಿದ್ದ ಅಸಮಾಧಾನ ನಿಮಗೂ ಇತ್ತು. ಮೊದಲು ನಿಮ್ಮ ಪಕ್ಷದ ನಿಯೋಗ ತೆಗೆದುಕೊಂಡು ದೆಹಲಿಗೆ ಹೋಗಿ ಜನಾರ್ಧನರೆಡ್ಡಿಯವರ ಮುಖಾಂತರ ನೀವು ಮಾಡಬಾರದ್ದು ಮಾಡಿದಾಗ ಇದ್ದಂತಹವರು.

ಶ್ರೀ ಜಗದೀಶ್ ಶೆಟ್ಟರ್:- ಜನ ಪಾಠ ಕಲಿಸಿದ್ದಾರೆ, ಅದಕ್ಕಾಗಿ ನಾವು ಇಲ್ಲಿ ಕೂತಿದ್ದೇವೆ. ನೀವಾದರೂ ಸರಿ ಮಾಡಿಕೊಂಡು ಹೋಗಿ.

(ಗೊಂದಲ)

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ನಾವು ಸರಿ ಇದ್ದೇವೆ. ಮಾನ್ಯ ಜಗದೀಶ್ ಶೇಟ್ಟರ್‌ರವರೆ, ನಾವು ನಮ್ಮ ಶಾಸಕಾಂಗ ಪಕ್ಷದ ಸಭೆಯಲ್ಲಿ ಚರ್ಚೆ ಮಾಡುವುದು ಬೇಡವಾ? KPCC president ಒಂದು ಹೇಳಿಕೆ ಕೊಡುವುದು ಬೇಡವೇ? AICC General Secretary ಯವರು ಬಂದು ಮುಕ್ತವಾಗಿ ಚರ್ಚೆ ಮಾಡುವುದು ಬೇಡವೇ? ಅದನ್ನು ತಾವು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡುತ್ತಾ ದೊಡ್ಡದಾಗಿ ಹೇಳುತ್ತೀರಲ್ಲ.

ಶ್ರೀ ಜಗದೀಶ್ ಶೆಟ್ಟರ್:- ನಾನು ಯೀಲ್ಡ್ ಆಗಿಲ್ಲ ಅವರು ಮಾತನಾಡುವುದಾದರೆ ಮಾತನಾಡಲಿ.

ಶ್ರೀ ವಿ. ಶ್ರೀನಿವಾಸ ಪ್ರಸಾದ್:- ನೀವು ವಿರೊಧ ಪಕ್ಷದ ನಾಯಕರು ಮುಖ್ಯವಾಗಿ ಇಲ್ಲಿ ಚರ್ಚೆಯಾಗಬೇಕಾಗಿರುವುದು ನೀವು ಬೆಳಕು ಚೆಲ್ಲಬೇಕಾಗಿರುವುದು ರಾಜ್ಯಪಾಲರ ಭಾಷಣದ ಬಗ್ಗೆ ತಾವು ಚರ್ಚೆ ಮಾಡುವುದು ಸೂಕ್ತ. ತಮ್ಮ ಸರ್ಕಾರ ಇದ್ದಾಗ ಐದು ವರ್ಷಗಳ ಕಾಲ ಏನಾಗಿದೆ ಎಂದು ಗೊತ್ತಿದೆ. ನಾವು ಮತ್ತೆ ಅದನ್ನು ತೆಗೆದುಕೊಂಡು ಪ್ರಸ್ತಾಪ ಮಾಡುವುದು ಬೇಡ. ರಾಜ್ಯಪಾಲರ ಭಾಷಣದ ಮೇಲೆ ಏನೇನಾಗಿದೆ ಎಂದು ಮಾತನಾಡಿ. ನಮ್ಮ Parliamentary Affairs Minister ಬಗ್ಗೆ ನಿಮಗೆ ಹಿಡಿಸಲಿಲ್ಲವೆಂದರೆ ತಿದ್ದುಪಡಿ ತೆಗೆದುಕೊಂಡು ಬನ್ನಿ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ನನಗೆ ಒಂದೂ ಅಥವಾಗುತ್ತಿಲ್ಲ. ಮಾನ್ಯ ರಾಮಲಿಂಗಾರೆಡ್ಡಿಯವರು ಕಡತದಿಂದ ತೆಗೆಯಬೇಕೆಂದು ಹೇಳಿದರು. ಸದನ ಸದಸ್ಯರಲ್ಲದವರ ಹೆಸರು ಪ್ರಸ್ತಾಪ ಮಾಡುತ್ತಿದ್ದೀರಿ ಎಂದು ಮಾನ್ಯ ದಿನೇಶ್ ಗುಂಡೂರಾವ್‌ರವರು ಹೇಳಿದರು. ನನಗೆ ಅರ್ಥವಾಗದೆ ಇರುವುದು ಪರಮೇಶ್ವರ್ ಎನ್ನುವುದು un-parliamentary word ಅಥವಾ ಇಲ್ಲ ಎಂಬ ಬಗ್ಗೆ ನನಗೆ clarification ಕೊಡಬೇಕು.

ಉಪಾಧ್ಯಕ್ಷರು:- ಅವರು ಹೇಳಿದ್ದು ಅದು ಅಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಉಪಾಧ್ಯಕ್ಷರೆ, ನಮ್ಮ ವಿರೋಧ ಪಕ್ಷದ ನಾಯಕರಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಅವರಿಗೆ ನಾನು ಅವರ್ಯಾಕೆ ಮಧ್ಯ ಪ್ರವೇಶ ಮಾಡುತ್ತಾರೆ, ಇವರೇಕೆ ಮಧ್ಯ ಪ್ರವೇಶ ಮಾಡುತ್ತಾರೆ, ನಾನು ಯೀಲ್ಡ್ ಆಗಿಲ್ಲವೆಂದು ನಮ್ಮ ವಿರೋಧ ಪಕ್ಷದ ನಾಯಕರು ಏನು ಹೇಳುತ್ತಿದ್ದಾರೆ, ಅದಕ್ಕಾಗಿ ನಾನು ವಿರೋಧ ಪಕ್ಷದ ನಾಯಕರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರ ಕಷ್ಟ ನೀವು ಅರ್ಥ ಮಾಡಿಕೊಳ್ಳಿ. ಮುಖ್ಯ ಮಂತ್ರಿಗಳು ಎಲ್ಲೋ ಒಂದು ಕಡೆ ಹೇಳಿದ್ದಾರೆ. ಸರಿಯಾಗಿ ಕಾರ್ಯನಿರ್ವಹಿಸದೆ ಇರತಕ್ಕಂತಹ ಸಚಿವರನ್ನು ಮುಂದೆ ನಾನು ಪರಿಶೀಲನೆ ಮಾಡಿ ಪುನರ್‌ವಿಂಗಡಣೆ ಮಾಡುತ್ತೇನೆಂದು ಹೇಳಿದ್ದಾರೆ. ಅದಕ್ಕೆ

ಅವರು ಏನಾದರೂ ಮಾಡಿಕೊಂಡು efforts ತೋರಿಸಬೇಕೆಂದು ಸ್ವಲ್ಪ ಮಧ್ಯ ಮಧ್ಯ ಏಳುತ್ತಿದ್ದಾರೆ. ಅದಕ್ಕೆ ನೀವು ಅಪಾರ್ಥ ಮಾಡಿಕೊಳ್ಳಬೇಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಇವತ್ತು ಇದರ ಪರಿಣಾಮ ಏನಾಗುತ್ತದೆ, ಶಾಸಕಾಂಗ ಪಕ್ಷದಲ್ಲಿ ನಡೆದಂತಹ ವರದಿಗಳು ಪತ್ರಿಕೆಗಳಲ್ಲಿ ಬಂದಿವೆ. ಅಲ್ಲಿ ಶಾಸಕರು ಕಾಮೆಂಟ್ಸ್ ಮಾಡಿ ತಮ್ಮ ಭಾವನೆಗಳನ್ನು ಹೇಳಿರುತ್ತಾರೆ. ಆ ಪತ್ರಿಕೆಯಲ್ಲಿ ಬಂದಿದ್ದನ್ನು ನಾವು ರೆಫರ್ ಮಾಡಬಾರದು ಎಂದರೆ, . . . ನಾವು ಎಲ್ಲೆಲ್ಲಿ ಪ್ರವಾಸ ಮಾಡುತ್ತೇವೆ, ಎಲ್ಲಾ ಕಡೆ ಸರ್ಕಾರ ನಿಷ್ಕ್ರೀಯವಾಗಿದೆ, ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲ, ಹೊಸ ಸರ್ಕಾರ ಇದೆ ಎಂದು ನಮಗೆ ಅನ್ನಿಸುತ್ತಿಲ್ಲ ಎಂದು ಹೇಳುತ್ತಿದ್ದಾರೆ. ಇದನ್ನು ನಾನು ಹೇಳುತ್ತಿಲ್ಲ ಅವರು ಹೇಳುತ್ತಿದ್ದಾರೆ. ಅವರು ತಮ್ಮ ತಮ್ಮ ಕ್ಷೇತ್ರದಲ್ಲಿ ಆ reflection ಅವರ ಭಾವನೆಗಳು ಏನಿವೆ, ಅವು ಎಲ್ಲಾ ಪತ್ರಿಕೆಯಲ್ಲಿ ಬಂದಿದ್ದು ಸಾರಾಸಗಟಾಗಿ ಸುಳ್ಳು ಎಂದು ಹೇಳುವ ಭಂಡತನ ಇದು ಯಾವ ರೀತಿ ಭಂಡತನ ಇದು ಕಾಂಗ್ರೆಸ್‌ನವರಿಗೇ ಬರುವುದಕ್ಕೆ ಸಾಧ್ಯವಿದೆ. ಎಲ್ಲವೂ ಸುಳ್ಳು, ಹಾಗಾದರೆ ಪತ್ರಿಕೆಯಲ್ಲಿ ಸುಳ್ಳು ಬರುತ್ತದಾ? ಯಾವುದೋ ಒಂದು ಪತ್ರಿಕೆಯಲ್ಲಿ ಬಂದಿದೆ ಎಂದರೆ, ಏನೋ ಉದ್ದೇಶಪೂರ್ವಕವಾಗಿ ಹಾಕಿದ್ದಾರೆ, ಯಾವುದೋ ಮಂತ್ರಿಗಳ ಮೇಲೆ ಸಿಟ್ಟು ಇದೆ, ಯಾವುದೋ ಮಂತ್ರಿಗಳ ಮೇಲೆ ಸಿಟ್ಟು ಇದೆ, ಮತ್ತೊಬ್ಬ ಶಾಸಕರು ಏನೋ feed back ಕೊಟ್ಟಿದ್ದಾರೆಂದು ಹೇಳಬಹುದು. ಸಾರಾಸಗಟಾಗಿ ಎಲ್ಲಾ ಪತ್ರಿಕೆಗಳಲ್ಲಿ ಸುದ್ದಿ ಬರುತ್ತದೆ. ಟಿ.ವಿ. ಯಲ್ಲಿಯೂ ಬರುತ್ತದೆ. ಅವೆಲ್ಲವೂ ಸುಳ್ಳು ಎನ್ನುವಂತಹ ಈ ಒಕ್ಕಣಿಕೆಯಿದೆಯಲ್ಲ, ಬಹುಶಃ ಇದೊಂದು ಅವರ ಭಂಡತನ ತೋರಿಸುತ್ತದೆ. ಈ ಭಂಡತನ ಬಹಳ ದಿವಸ ನಡೆಯುವುದಿಲ್ಲ. ಕೊನೆಗೆ ತೀರ್ಮಾನ ತೆಗೆದುಕೊಳ್ಳುವವರು ಜನರು. ಈ ಸರ್ಕಾರ ಹೇಗೆ ನಡೆಯುತ್ತಿದೆ, ಏನು ತನ, ಯಾವ ಕೆಲಸ ಆಗುತ್ತದೆಯೋ ಇಲ್ಲವೋ, ಆಡಳಿತ ವ್ಯವಸ್ಥೆ ಹೀಗಾಗುತ್ತಿದೆ, ಭ್ರಷ್ಟಾಚಾರ ತುಂಬಿ ತುಳುಕುತ್ತಿದೆ, ಕಾನೂನು ಸುವ್ಯವಸ್ಥೆ ಹದಗೆಟ್ಟು ಹೋಗಿದೆ, ಕಡೆಗೆ ಇದರ reflect ಆಗುವುದು, ಇದರಿಂದಾಗಿ ಜನರು ಅದಕ್ಕೆ ತಕ್ಕ ಪಾಠವನ್ನು ಕಲಿಸಿಯೇ ಕಲಿಸುತ್ತಾರೆ. ಅದಕ್ಕಾಗಿ ಈ ಬಗ್ಗೆ ಮೊದಲೇ ನಿಮಗೆ ಎಚ್ಚರಿಕೆಯನ್ನು ಕೊಡುವಂಥ ಕೆಲಸವನ್ನು ನಾವು

ಮಾಡಬೇಕಾಗುತ್ತದೆ. ವಿರೋಧ ಪಕ್ಷದ ನಾಯಕರಾದಂಥದವರು, ವಿರೋಧ ಪಕ್ಷದಲ್ಲಿದ್ದಂಥವರು, ನಾವು ಈ ಬಗ್ಗೆ ತಮಗೆ alert ಮಾಡುವಂಥ ಕೆಲಸವನ್ನು ಮಾಡಿ, ನೀವು ತಪ್ಪು ಮಾಡುತ್ತೀದ್ದೀರಪ್ಪಾ, ನೀವು ಸರಿಯಾಗಿ ಆಡಳಿತವನ್ನು ನೀಡಿ, 5 ವರ್ಷದ ಕಾಲ ಸರಿಯಾದ ಆಡಳಿತವನ್ನು ಮಾಡಿ, ನಿಮಗೆ ಜನರು 5 ವರ್ಷಗಳ ಆಡಳಿತ ನಡೆಸಲು mandate ಕೊಟ್ಟಿದ್ದಾರೆ. ಆದ್ದರಿಂದ 5 ವರ್ಷಗಳ ಆಡಳಿತವನ್ನು ನೀವು ನಡೆಸುವುದಕ್ಕೆ ನಮ್ಮದೇನೂ ತಕರಾರಿಲ್ಲ. ನೀವು ಆಡಳಿತ ನಡೆಸಿ. ಯಾರು ಬೇಡವೆನ್ನುತ್ತಾರೆ. ಆದರೆ ತಪ್ಪುಗಳನ್ನು ಮಾಡಬೇಡಿ. ನಾವು ಹಿಂದಿನ ಸರ್ಕಾರದಲ್ಲಿ ನಾವುಗಳು ಗೊಂದಲ ಮಾಡಿಕೊಂಡು ನಾವು division of vote ಆಗಿ ನಾವು ತಪ್ಪು ಮಾಡಿದ್ದರಿಂದ ಇಲ್ಲಿ ಈಗ ಬಂದು ಕುಳಿತಿದ್ದೇವೆ. ಹೀಗಾಗಿ ನಮ್ಮ ತಪ್ಪಿನಿಂದ ನೀವು ಅಧಿಕಾರಕ್ಕೆ ಬಂದಿದ್ದೀರಿಯೇ ಹೊರತು ನೀವೇನೂ ಹಾಗೆಯೇ ಅಧಿಕಾರಕ್ಕೆ ಬಂದಿಲ್ಲ. ಆದುದರಿಂದ ಅದೇ ತಪ್ಪನ್ನು ನೀವು ಮಾಡುತ್ತೀರೇನು?

ಶ್ರೀ ಕೆ.ಆರ್. ರಮೇಶ್‌ಕುಮಾರ್:- ಶೆಟ್ಟರ್ ಸಾಹೇಬರೆ, ಈಗ ನಿಮ್ಮ logic wrong ಆಗಿದೆ. ನೀವು ಹೇಳಿದಂತೆ ನಾವು ಮರ್ಯಾದೆಯಾಗಿ ನಡೆದುಕೊಂಡು ಏನೂ ಗಲಾಟೆ ಮಾಡಿಕೊಳ್ಳದೇ ಹೋದರೆ ನಿವು ಖಾಯಂ ಆಗಿ ಅಲ್ಲಿಯೇ ಕುಳಿತುಕೊಳ್ಳಬೇಕಾಗುತ್ತದೆ ಅಲ್ವೇನ್ರಿ. ನೀವು ಬಯಸಬೇಕಾಗುತ್ತದೆ ನಾವು ತಪ್ಪು ಮಾಡಬೇಕೆಂದು. ಈಗ ಸವದಿ ನೋಡಿ ಎಷ್ಟು ಚೆಂದವಾಗಿ ಮಾತನಾಡುತ್ತಾರೆ. ನೀವು ಸ್ವಲ್ಪ ಅವರ ಹತ್ತಿರ ಟ್ರೈನಿಂಗ್ ತೆಗೆದುಕೊಳ್ಳಬೇಕು. ಇದು ಎಂಥದ್ದು.

ಶ್ರೀ ಜಗದೀಶ್ ಶೆಟ್ಟರ್:- ನೋಡಿ ಇದು ಪ್ರಜಾತಂತ್ರ ವ್ಯವಸ್ಥೆಯಲ್ಲಿ ಸರ್ಕಾರ ಸರಿಯಾಗಿ ನಡೆಯಬೇಕು, ಸರ್ಕಾರದಿಂದ ಜನರಿಗೆ ಒಳ್ಳೆಯದಾಗಬೇಕು, ಕರ್ನಾಟಕದಲ್ಲಿ ಅಭಿವೃದ್ಧಿಯಾಗಬೇಕು, ಇಡೀ ದೇಶದಲ್ಲಿ ಕರ್ನಾಟಕವನ್ನು ನೋಡುವಂತಾಗಬೇಕು. ಈ ವಿಚಾರದಲ್ಲಿ ಆ ಪಾರ್ಟಿ ಈ ಪಾರ್ಟಿ ಎಂದು ಸಂಬಂಧ ಬರುವುದಿಲ್ಲ. ಸರ್ಕಾರ ತಪ್ಪು ಮಾಡಿದಾಗ ಎಚ್ಚರ ಮಾಡುವಂಥ ಕೆಲಸವನ್ನು ವಿರೋಧ ಪಕ್ಷದವರಾದ ನಾವು ಮಾಡಲೇಬೇಕು. ಹಾಗಾದರೂ ಮುಂದೆ ಸರಿ ದಾರಿಗೆ ಹೋಗಿ ಮತ್ತು ಒಳ್ಳೆಯ ಆಡಳಿತವನ್ನು

ಕೊಡಿ, ನಿಮಗೆ ಯಾರು ಬೇಡವೆನ್ನುತ್ತಾರೆ. ನಾವೇನು bjection ಮಾಡುವುದಿಲ್ಲ. ನೀವು ತಪ್ಪು ಮಾಡುತ್ತಿದ್ದೀರಿ ಎಂದು ಹೇಳಿದ ಮೇಲೂ ಕೂಡ ಮತ್ತೆ ಇನ್ನೂ ತಪ್ಪನ್ನು ಮಾಡಿಕೊಂಡೇ ಹೊರಟಿದ್ದೀರಿ. ಆಡಳಿತ ವ್ಯವಸ್ಥೆಯಲ್ಲಿ ಏನೂ ಸುಧಾರಣೆಯಾಗಲಿಲ್ಲ. ಇವತ್ತು ನಮ್ಮಲ್ಲಿ ಅಸಮಾಧಾನವಿಲ್ಲ, ಯಾವ ಭಿನ್ನಮತವೂ ಇಲ್ಲವೆಂದು ಇವತ್ತು ಹೇಳಿದಿರಿ. ಹಾಗಾದರೆ ಸತೀಶ್ ಜಾರಕಿಹೊಳಿಯವರು ಏಕೆ ರಾಜೀನಾಮೆಯನ್ನು ಕೊಟ್ಟರು? ಏಕೆ ಮತ್ತೆ ರಾಜೀನಾಮೆಯನ್ನು ವಾಪಸ್ ತೆಗೆದುಕೊಂಡರು? ಇದು ಅವರಿಗೆ ಬೇಕಾಗಿರಲಿಲ್ಲ ಅಲ್ಲವೆ?, open ಆಗಿ ಅವರ statement ಗಳು ಬಂತಲ್ಲ. ನಮಗೆ ಈ ಎಕ್ಸೈಸ್ ಖಾತೆ ವಹಿಸಿಕೊಳ್ಳಲು ಮನಸ್ಸಿಲ್ಲ, ಇವತ್ತು ನಾನೊಂದು ವಿಚಾರವನ್ನು ಹೇಳಬಯಸುತ್ತೇನೆ, ಮುಖ್ಯಮಂತ್ರಿಗಳಿಗೆ ಯಾರಿಗೆ ಯಾವ ಖಾತೆಯನ್ನು ಕೊಡಬೇಕೆನ್ನುವ ವಿಚಾರದಲ್ಲಿ ಪರಮಾಧಿಕಾರವಿದೆ. ಆದರೆ ಖಾತೆಯನ್ನು ನಡೆಸಬಹುದಾದಂಥ efficiency ಬಗ್ಗೆ ನೋಡಿಕೊಂಡು, seniority ನೋಡಿಕೊಂಡು ಯಾವ ಯಾವ ಇಲಾಖೆಯಲ್ಲಿ ಇನ್ನೂ ಹೆಚ್ಚು efficient ಆಗಿ ಯಾರು ಕೆಲಸ ಮಾಡಬಹುದು ಎಂಬುದನ್ನು ನೋಡಿಕೊಂಡು ನಿರ್ಣಯ ಕೈಗೊಳ್ಳುವ ಪರಮಾಧಿಕಾರ ಮುಖ್ಯಮಂತ್ರಿಗಳಿಗೆ ಇರುತ್ತದೆ. ಅದರ ಬಗ್ಗೆ ನಾವು question ಮಾಡುವುದಿಲ್ಲ. ಇವತ್ತು ಯಾರೋ ಒಬ್ಬರಿಗೆ ಒಂದು ಇಲಾಖೆಯನ್ನು ಕೊಟ್ಟಿರುತ್ತಾರೆ, ಆಗ ಇದು ಸಣ್ಣ ಇಲಾಖೆ, ಇದು ದೊಡ್ಡ ಇಲಾಖೆ, ಇದರಲ್ಲಿ ಸಂಪನ್ಮೂಲ ಬಹಳವಿದೆ, ಇದರಲ್ಲಿ ಇಲ್ಲ, ಎಂಬುದು ಬರಬಾರದು. ಕೆಲಸ ಮಾಡುವವರಿಗೆ ಯಾವ ಖಾತೆಯನ್ನು ಕೊಟ್ಟರೂ ಕೆಲಸ ಮಾಡುವುದಕ್ಕೆ ಸಾಧ್ಯವಿದೆ. ಅದರಲ್ಲಿಯೇ reforms ಮಾಡುವುದಕ್ಕೆ ಸಾಧ್ಯವಿದೆ. ಅದು ಬಿಟ್ಟು ಈ ಖಾತೆ ಬೇಡ ಆ ಖಾತೆ ಬೇಡ ಎನ್ನುವುದು ಸರಿಯಲ್ಲ. ಇಲ್ಲಿ ಸತೀಶ್ ಜಾರಕಿಹೊಳಿಯವರು ಎಕ್ಸೈಸ್ ಖಾತೆ ಬೇಡವೆಂದೇ open ಆಗಿ ಹೇಳಿದರು. O.K., ಅವರಿಗೆ ಏಕೆ ಎಕ್ಸೈಸ್ ಖಾತೆ ಮೇಲೆ ಮನಸ್ಸಿಲ್ಲವೋ ಗೊತ್ತಿಲ್ಲ. ಆದರೆ ನೀವು ನೋಡಿ ಅವರಿಗೆ ಮನಸ್ಸಿಲ್ಲದ ಖಾತೆಯನ್ನು ಕೊಟ್ಟಿದ್ದರಿಂದ ಏನಾಯಿತು ಎಂದರೆ ಎಕ್ಸೈಸ್‌ನಿಂದ ಬರಬೇಕಾದ 1000 ಕೋಟಿ ರೆವಿನ್ಯೂ ಈ ವರ್ಷ ಕಡಿಮೆಯಾಗಿದೆ, ಖೋತಾ ಆಗಿದೆ.

ಶ್ರೀ ಸಿದ್ದರಾಮಯ್ಯ:– ಹಾಗೇನೂ ಆಗಿಲ್ಲಾರಿ.

ಶ್ರೀ ಜಗದೀಶ್ ಶೆಟ್ಟರ್:– ನಾನು ಇದರ ಬಗ್ಗೆ ಮುಂದೆ ಅಂಕಿಸಂಖ್ಯೆ ಕೊಡುತ್ತೇನೆ. ನೀವೇ Finance ಗೆ ಸಂಬಂಧಪಟ್ಟಂತೆ ನಡೆಸಿದ ಸಭೆಯಲ್ಲಿ ಹೇಳಿದ್ದೀರಿ. ನಾನು ದಾಖಲೆಯನ್ನು ಕೂಡ ಕೊಡುತ್ತೇನೆ. ನಿಮ್ಮದೇನೂ ಬಜೆಟ್‌ನಲ್ಲಿ ಗುರಿ ಇಟ್ಟುಕೊಂಡಿದ್ದಿರೋ ಅದನ್ನು ಈ ವರ್ಷ ಸಾಧನೆ ಮಾಡುವುದಕ್ಕೆ ಸಾಧ್ಯವಿದೆಯೆ ಹೇಳಿ. ಸಾಧ್ಯವೇ ಇಲ್ಲ. ಇನ್ನು ಮಂಗಳೂರಿನ ಅಭಯಚಂದ್ರ ಜೈನ್‌ರವರು ನಮ್ಮ ಧರ್ಮದಲ್ಲಿ ನಾವು ಮೀನನ್ನು ತಿನ್ನುವುದಿಲ್ಲ, ನಾವು ಸಸ್ಯಹಾರಿಗಳು, ಆದಕಾರಣ ಮೀನುಗಾರಿಕೆ ಇಲಾಖೆ ನನಗೆ ಬೇಡವೆಂದು ಅವರು ಪ್ರಾರಂಭದಲ್ಲಿಯೇ ಹೇಳಿದ್ದರು. ಆದರೂ ಇವತ್ತಿಗೂ ಕೂಡ ಅವರಿಗೆ ಮೀನುಗಾರಿಕೆ ಇಲಾಖೆಯಿಂದ ಬದಲಾವಣೆ ಸಿಗಲಿಲ್ಲ. ಇದು ನಿಮಗೆ ಬಿಟ್ಟಂಥ ವಿಚಾರ. ನಿಮ್ಮ ಆಂತರಿಕ ವಿಚಾರ. ಆದರೆ ಅವರಿಗೆ ಆಸಕ್ತಿಯೇ ಆ ಇಲಾಖೆಯಲ್ಲಿ ಇರುವುದಿಲ್ಲ. ಎಷ್ಟೋ ಕಡೆ ಮೀನಿನ ಆಹಾರವನ್ನು vegetarian ಎಂದು ಹೇಳುತ್ತಾರೆ. ಮೀನನ್ನು ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು ಎಂದು ಹೇಳುತ್ತಾರೆ. ಇಷ್ಟೆಲ್ಲಾ ಇದ್ದರೂ ಕೂಡ ಅಭಯಚಂದ್ರ ಜೈನ್‌ರವರು ಮೀನುಗಾರಿಕೆ ಇಲಾಖೆ ಬೇಡವೆಂದು ಹೇಳುತ್ತಾರೆ. ಹೀಗಾಗಿ ಅವರು ಮಾನಸಿಕವಾಗಿ ಆ ಇಲಾಖೆಯಲ್ಲಿ ಕೆಲಸ ಮಾಡುವುದಕ್ಕೆ ಮನಸ್ಸಿಲ್ಲದಿದ್ದರೂ ಕೂಡ......

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದ ನಾಯಕರು ಮೀನುಗಾರಿಕೆ ವಿಚಾರದಲ್ಲಿ ಮಾತನಾಡುತ್ತಿದ್ದಾರೆ. ನೀರಿನಲ್ಲಿ ಸಿಗತಕ್ಕಂತ ಮೀನನ್ನು ನೀರಿಲ್ಲದೇ ಇರುವ ಜಾಗದಲ್ಲಿ ಹಿಡಿಯುವುದಕ್ಕೆ ಹೊಗುತ್ತಿದ್ದಾರೆ ಎನ್ನುವುದನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೆ, ಸತೀಶ್ ಜಾರಕಿಹೊಳಿಯವರ ರಾಜೀನಾಮೆ ಪ್ರಹಸನ ಏನಿದೆಯಲ್ಲಾ, ಈಗ ಹಲವಾರು ಶಾಸಕರು ಈಗಾಗಲೇ ಹೇಳಿದರು, ನಾವೇನು ಶಾಸನಸಭೆಯಲ್ಲಿ ಮಾತನಾಡಲಿಲ್ಲ, ಮುಖ್ಯಮಂತ್ರಿಗಳು ಒಳ್ಳೆಯವರಿದ್ದಾರೆ, ಮಂತ್ರಿಗಳು ಒಳ್ಳೆಯವರಿದ್ದಾರೆ, ಎಲ್ಲರೂ efficient ಆಗಿದ್ದಾರೆ, ಪತ್ರಿಕೆಯಲ್ಲಿ ಬಂದಿರುವುದು

ಸುಳ್ಳು ಎಂದರು. ಹಾಗಾದರೆ ಸತೀಶ್ ಜಾರಕಿಹೊಳಿಯವರು ರಾಜೀನಾಮೆಯನ್ನು ಕೊಟ್ಟರಲ್ಲಾ, ಬರೀ ಅದೊಂದು ಇಲಾಖೆ ವಿಚಾರವೊಂದೇ ಅಲ್ಲ, ಬೇರೆ ಬೇರೆ ಕಾರಣಗಳನ್ನು ಕೂಡ ಹೇಳಿದ್ದಾರೆ, ಪತ್ರಿಕೆಯಲ್ಲಿ ಅವೆಲ್ಲವೂ ಬಂದಿದೆ. ನಾನು ಈಗ ಅದರ ಬಗ್ಗೆ detail ಆಗಿ ಮಾತನಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ಈಗ ಅವೆಲ್ಲವನ್ನು ನಾನು ಹೇಳಿದರೆ ಅವರಿಗೆ ಬೇಜಾರಾಗುತ್ತದೆ. ಇವೆಲ್ಲವನ್ನೂ ಏಕೆ ಇವರು ಮಾತನಾಡುತ್ತಿದ್ದಾರೆಂದು. ರಾಜೀನಾಮೆ ಕೊಟ್ಟಮೇಲೆ ಮಾನ್ಯ ಮುಖ್ಯಮಂತ್ರಿಗಳ ಒತ್ತಾಯಕ್ಕೆ ರಾಜೀ ಸಂಧಾನವನ್ನು ಮಹದೇವಪ್ಪನವರು ಮಾಡಿ ಆಯಿತಪ್ಪಾ ಮುಂದೆ reshuffle ನಲ್ಲಿ ಮತ್ತೊಂದು additional ಖಾತೆ ಕೊಡುತ್ತೇವೆಂದು ಹೇಳಿ ಸಮಾಧಾನ ಮಾಡಿ ಸರಿಪಡಿಸಿದರು. ಆ ರೀತಿ ಮಾಡಿದ್ದನ್ನು ನಾವೇನು ಬೇಡವೆಂದು ಹೇಳುವುದಿಲ್ಲ. ಆದರೆ ಅಲ್ಲೇನು ಒಂದು ಭಿನ್ನಮತವಿದೆ, ಒಂದು ರೀತಿಯ ಅಸಮಾಧಾನವಿದೆಯೋ ಅದು ಒಂದು ಹಂತದಲ್ಲಿ ಸ್ಫೋಟವಾಗಿದೆಯಷ್ಟೆ. ಅದು ಇನ್ನು ಎಲ್ಲೆಲ್ಲಿ ಸ್ಫೋಟವಾಗುತ್ತದೋ ನನಗೆ ಗೊತ್ತಿಲ್ಲ. ಇದು ಇದ್ದಂಥ ವಸ್ತುಸ್ಥಿತಿ. ನಾನು ಇದನ್ನೆಲ್ಲ ಏಕೆ ಹೇಳುತ್ತಿದ್ದೇನೆಂದರೆ, ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಉತ್ತಮವಾದಂಥ, ಪಾರದರ್ಶಕವಾದಂಥ ಒಳ್ಳೆಯ ಆಡಳಿತವನ್ನು ಕೊಡುತ್ತೇವೆ, ಇನ್ನೂ ಹಲವಾರು ಒಳ್ಳೆಯ ಯೋಜನೆಗಳನ್ನು ತೆಗೆದುಕೊಂಡು ಬರುತ್ತೇವೆಂದು ಎಲ್ಲವನ್ನೂ ಹೇಳುತ್ತಿದ್ದಾರೆ. ಆದರೆ ಈ ರೀತಿ ನಿಮ್ಮಲ್ಲಿ ಒಳಬೇಗುದಿ ಇಟ್ಟುಕೊಂಡು ಮಂತ್ರಿಗಳಲ್ಲಿ ಅಸಮಾಧಾನವನ್ನಿಟ್ಟುಕೊಂಡು, ಇನ್ನೂ ಬಹಳ ಜನರಿದ್ದಾರೆ, ನಮಗೆ ಆ ಇಲಾಖೆ ಸರಿಯಿಲ್ಲ, ಈ ಇಲಾಖೆ ಸರಿಯಿಲ್ಲ, ಇಂಥ ಇಲಾಖೆ ಕೊಟ್ಟಿರುವುದು ಸರಿಯಿಲ್ಲವೆಂದು ಬಹಳ ಜನರು ಅಲ್ಲಲ್ಲೇ express ಮಾಡಿದ್ದಾರೆ. ಈ ರೀತಿ ಒಳಬೇಗುದಿ ಇಟ್ಟುಕೊಂಡು, ಅಸಮಾಧಾನವನ್ನಿಟ್ಟುಕೊಂಡು ನೀವು ಆಡಳಿತವನ್ನು ಹೇಗೆ ನಡೆಸುತ್ತೀರಿ? ಜನರಿಗೆ ನೀವು ನ್ಯಾಯವನ್ನು ಹೇಗೆ ಕೊಡುತ್ತೀರಿ? ಜನರಿಗೆ ನೀವು ನ್ಯಾಯ ಕೊಡುವುದಕ್ಕೆ ನಿಮ್ಮಿಂದ ಸಾಧ್ಯವೇ ಇಲ್ಲ. ಆ ದೃಷ್ಟಿಯಿಂದ ನಾನು ಇದನ್ನು ಹೇಳುತ್ತಿದ್ದೇನೆ. ಈ ರೀತಿಯ ಒಳಬೇಗುದಿ ಬಹಳ ದಿವಸ ಉಳಿಯುವುದಿಲ್ಲ. ಯಾವುದೇ ಸಂದರ್ಭದಲ್ಲಿ ಸ್ಫೋಟಗೊಳ್ಳಬಹುದು. ಈಗ ಜಯಚಂದ್ರರವರಿಗೆ

additional ಆಗಿ ಮುಜರಾಯಿ ಇಲಾಖೆಯನ್ನು ಕೊಟ್ಟಿದ್ದಾರೆ. ಅವರಿಗೆ ಏಕೆ ಈ ಖಾತೆಯನ್ನು ಕೊಟ್ಟರೋ ನನಗೆ ಗೊತ್ತಿಲ್ಲ. ನಾನು ಮೂಢನಂಬಿಕೆಯನ್ನು ನಂಬುವುದಿಲ್ಲ. ನಾನು ಬಸವಣ್ಣನವರ follower ಆಗಿದ್ದು ಮೂಢ ನಂಬಿಕೆಯನ್ನು ನಂಬುವುದಿಲ್ಲ. ಆದರೆ ಮುಜರಾಯಿ ಇಲಾಖೆಯನ್ನು ಜಯಚಂದ್ರರವರಿಗೆ ಕೊಟ್ಟ ಮೇಲೆ ಬಹಳ ಜನ ಮಾತನಾಡಿಕೊಳ್ಳಲು ಪ್ರಾರಂಭಿಸಿದ್ದಾರೆ. ಈ ಮುಜರಾಯಿ ಇಲಾಖೆಯನ್ನು ಹಿಂದೆ ಯಾರು ಯಾರು ಇಟ್ಟುಕೊಂಡಿದ್ದರೋ ಅವರೆಲ್ಲರ ಅಧಿಕಾರ ಹೋಗಿದೆಯೆಂದು ಮಾತನಾಡಿಕೊಳ್ಳುತ್ತಿದ್ದಾರೆ. ಜಯಚಂದ್ರರವರೆ, ನಿಮಗೆ ಆ ರೀತಿಯಾಗುವುದು ಬೇಡ. ನೀವೇನು ಹೆದರಬೇಡಿ. ಹಿಂದೆ ಕೃಷ್ಣಯ್ಯಶೆಟ್ಟಿ, ವಿ.ಎಸ್. ಆಚಾರ್ಯ ಮುಜರಾಯಿ ಇಲಾಖೆಯನ್ನು ನಿರ್ವಹಿಸಿದ್ದರು. ಈ ರೀತಿ ಒಂದು ದೊಡ್ಡ ಲಿಸ್ಟ್ ಇದೆ. ಹಿಂದೆ ಯಾರು ಯಾರು ಮುಜರಾಯಿ ಇಲಾಖೆಯನ್ನು ತೆಗೆದುಕೊಂಡಿದ್ದರೋ ಅವರೆಲ್ಲರೂ ಅಧಿಕಾರವನ್ನು ಕಳೆದುಕೊಂಡಿದ್ದಾರೆ. ಆದರೆ ನಾನು ಈ ಮೂಢನಂಬಿಕೆಯನ್ನು ನಂಬುವುದಿಲ್ಲ. ಆದರೆ ಹಿಂದೆ ಆ ರೀತಿ ನಡೆದಿದೆ.

ಶ್ರೀ ಟಿ.ಬಿ ಜಯಚಂದ್ರ:- ಹಿಂದೆ ಪ್ರಕಾಶ್ ಹುಕ್ಕೇರಿಯವರು ಮುಜರಾಯಿ ಸಚಿವರಾಗಿದ್ದರು. ಈಗ ಅವರು ಎಲ್ಲಿಗೆ ಹೋದರು ಹೇಳಿ. ಈಗ ಪ್ರಕಾಶ್ ಹುಕ್ಕೇರಿಯವರು ಲೋಕಸಭಾ ಸದಸ್ಯರಾಗಿ ಹೋದರು.

ಶ್ರೀ ಲಕ್ಷ್ಮಣ ಸವದಿ:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದರು, ಈ ಮುಜರಾಯಿ ಇಲಾಖೆ ತೆಗೆದುಕೊಂಡ ಮಂತ್ರಿಗಳೆಲ್ಲರೂ ಅಧಿಕಾರವನ್ನು ಕಳೆದುಕೊಳ್ಳುತ್ತಾರೆ, ಕಳೆದುಕೊಳ್ಳುತ್ತಾರೆಂದರು. ಇರಬಹುದು, ಅದೇನೋ ಒಂದು ಮೂಢನಂಬಿಕೆ. ಆದರೆ ನಮ್ಮ ಜಯಚಂದ್ರರವರು ಆ ರೀತಿಯಾಗದಿರಲು, ಅದಕ್ಕೆಲ್ಲಾ ಏನು ಬೇಕೋ ತಯಾರಿ ಮಾಡಿಕೊಂಡಿದ್ದಾರೆ. ತಿರುಗಾಡುವ ದೇವರನ್ನೂ ಹಿಡಿದುಕೊಂಡಿದ್ದಾರೆ, ಜನರ ಮೈ ಮೇಲೆ ಬರುವ ದೇವರನ್ನು ಹಿಡಿದುಕೊಂಡಿದ್ದಾರೆ, ಗುಡಿಗಳನ್ನು ಬಿಟ್ಟು ಅಲುಗಾಡಲಾರದಂಥ ದೇವರುಗಳನ್ನು ಕೂಡ ಹಿಡಿದುಕೊಡಿದ್ದಾರೆ. ಮೊನ್ನೆ ನಾನು ಅವರು

ಕೊಟ್ಟಿರುವ ಉತ್ತರದಲ್ಲಿ ನೋಡಿದೆ, ಎಲ್ಲ ದೇವರನ್ನು ಅವರ ಕ್ಷೇತ್ರದಲ್ಲಿ, ಅವರ ಜಿಲ್ಲೆಯಲ್ಲಿರತಕ್ಕಂಥವರೆಲ್ಲರನ್ನೂ ಅವರು ಸಮಾಧಾನ ಮಾಡಿದ್ದಾರೆ. ಆದುದರಿಂದ ಅವರಿಗೆ ಏನೂ ಆಗುವುದಿಲ್ಲ. ಮಾನ್ಯ ಜಯಚಂದ್ರರವರೆ, ನಿಮಗೆ ಏನೂ ಆಗುವುದಿಲ್ಲ, ನೀವು ತಲೆ ಕೆಡಿಸಿಕೊಳ್ಳಬೇಡಿ.

ಶ್ರೀ ಎಂ.ಕೆ. ಸೋಮಶೇಖರ್:– ಮಾನ್ಯ ಉಪಾಧ್ಯಕ್ಷರೆ, ಚಾಮರಾಜನಗರಕ್ಕೆ ಹೋದರೆ ಮುಖ್ಯಮಂತ್ರಿಗಳು ಅಧಿಕಾರ ಕಳೆದುಕೊಳ್ಳುತ್ತಾರೆ ಎಂದು ಹೇಳುತ್ತಿದ್ದರು. ನಮ್ಮ ಮುಖ್ಯಮಂತ್ರಿಗಳಾದ ಮಾನ್ಯ ಸಿದ್ದರಾಮಯ್ಯನವರು ಚಾಮರಾಜನಗರಕ್ಕೆ ಹೋಗಿಬಂದಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:– ನಾನು ಕೂಡ ಮುಖ್ಯಮಂತ್ರಿಯಾಗಿದ್ದಾಗ ಚಾಮರಾಜನಗರಕ್ಕೆ ಹೊಗಿ ಬಂದಿದ್ದೇನಪ್ಪಾ.

ಉಪಾಧ್ಯಕ್ಷರು:– ಈಗ ಊಟಕ್ಕೆ ಹೋಗೋಣ. ಈಗ ಸದನವನ್ನು ಮಧ್ಯಾಹ್ನ 3–15 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವನ್ನು ಮಧ್ಯಾಹ್ನ 2 ಗಂಟೆ 07 ನಿಮಿಷಕ್ಕೆ ಮುಂದೂಡಿ ಮತ್ತೆ ಮಧ್ಯಾಹ್ನ 3–15 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಲಾಯಿತು)

(ಭೋಜನ ವಿರಾಮದ ಬಳಿಕ ಸದನವು ಪುನಃ ಮಧ್ಯಾಹ್ನ 3.33ಕ್ಕೆ ಸಮಾವೇಶಗೊಂಡಿತು)

(ಉಪಾಧ್ಯಕ್ಷರು ಪೀಠವನ್ನಲಂಕರಿಸಿದ್ದರು)

ಶ್ರೀ ಗೋವಿಂದ ಎಂ. ಕಾರಜೋಳ:- ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಿದ ಯಾವುದಕ್ಕೂ ರಿಪ್ಲೈ ಕೊಟ್ಟಿಲ್ಲ. ಮಂತ್ರಿಗಳನ್ನು ಕರೆಸಿ ಉತ್ತರ ಕೊಡಿಸಿ.

ಶ್ರೀ ಟಿ.ಬಿ. ಜಯಚಂದ್ರ:- ಇವತ್ತು ಕೊಟ್ಟಿರುವ ವಿಷಯಗಳು ತಾನೇ, ಉತ್ತರ ಕೊಡಿಸೋಣ.

ಉಪಾಧ್ಯಕ್ಷರು:- ಅದಕ್ಕೆ ರಿಪ್ಲೈ ಆಮೇಲೆ ಕೊಡುತ್ತಾರೆ. ವಿರೋಧ ಪಕ್ಷದ ನಾಯಕರೇ, ತಾವು ಮುಂದುವರೆಸಿ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾದ ಮೇಲೆ ಮುಂದುವರೆದ ಚರ್ಚೆ

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು):- ಸನ್ಮಾನ್ಯ ಅಧ್ಯಕ್ಷರೆ, ನಾನು ಈಗಾಗಲೇ ಮಾತನಾಡಿದ ಪ್ರಕಾರ ಆಡಳಿತ ವ್ಯವಸ್ಥೆ ಸರಿ ಇರಬೇಕು. ಆಡಳಿತ ವ್ಯವಸ್ಥೆ ಸರಿ ಇಲ್ಲದಾಗ ಜನರಿಗೆ ಉತ್ತಮ ಆಡಳಿತ ಕೊಡಲು ಸಾಧ್ಯವಿಲ್ಲ. ಆಡಳಿತದಲ್ಲಿ ಏನು ಬದಲಾವಣೆಯಾಗುತ್ತದೆ, ಅದು ಕ್ಯಾಬಿನೆಟ್‌ನಲ್ಲಿರಬಹುದು, ರಾಜೀನಾಮೆ ವಿಚಾರ ಇರಬಹುದು, ಶಾಸಕರಲ್ಲಿ ಇರುವಂಥ ಅಸಮಾಧಾನ ಇರಬಹುದು, ಇದರ replication ಸರ್ಕಾರದ ಮೇಲೂ ಆಗುತ್ತದೆ. ಆ ದೃಷ್ಟಿಯಿಂದ ನಾನು ಆ ಎಲ್ಲ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಾನು paper cuttings ಓದಿ ಹೇಳಿದಾಗ ಮುಖ್ಯಮಂತ್ರಿಗಳು ಈ ಪತ್ರಿಕಾ ಹೇಳಿಕೆಗಳನ್ನು ನಂಬಬಾರದು ಎಂದು ಹೇಳಿದರು. ಆದರೆ ಇತ್ತೀಚೆಗೆ ನಿಮ್ಮ ಮಂತ್ರಿಗಳಲ್ಲೇ ಕೆಲವರು ಹೇಳಿಕೆ ಕೊಟ್ಟಿದ್ದು, ಅದನ್ನೂ ನೀವು deny ಮಾಡುತ್ತೀರೇನೋ ನನಗೆ ಗೊತ್ತಿಲ್ಲ. ನೇರವಾಗಿ ಮಂತ್ರಿಗಳೇ ಹೇಳಿಕೆಗಳನ್ನು ಕೊಟ್ಟಿದ್ದಾರೆ. ರೆವಿನ್ಯೂ ಮಿನಿಸ್ಟರ್‌ಆದ ಶ್ರೀನಿವಾಸ ಪ್ರಸಾದ್‌ರವರು ಒಂದು ಹೇಳಿಕೆಯನ್ನು ಕೊಟ್ಟರು. ಒಬ್ಬ ದಲಿತರು C.M. ಆಗಬೇಕೆಂದು ಅವರು ಹೇಳಿಕೆಯನ್ನು ಕೊಟ್ಟರು. ಅದನ್ನು deny

ಮಾಡುವುದಾದರೆ ಅವರು ಮಾಡಲಿ. ಆದರೆ ಅದು ಯಾವಾಗ, ಏನು ಎನ್ನುವುದು ನನಗೆ ಗೊತ್ತಾಗಲಿಲ್ಲ. ಅಥವಾ ಸಿದ್ದರಾಮಯ್ಯನವರನ್ನು ಆದಷ್ಟು ಬೇಗನೆ ಇಲ್ಲಿಂದ ತೆಗೆದು ಅವರ ಜಾಗಕ್ಕೆ ದಲಿತ ಸಿ.ಎಂ. ಅನ್ನು ಇದೇ ಐದು ವರ್ಷಗಳಲ್ಲಿಯೇ ಮಾಡಬೇಕೇ ಅಥವಾ ಮುಂದೆ ಮಾಡಬೇಕೇ ಎನ್ನುವ ಯಾವುದಕ್ಕೂ ಅವರು ಸ್ಪಷ್ಟೀಕರಣ ಕೊಡಲಿಲ್ಲ. ದಲಿತ ಸಿ.ಎಂ. ಬೇಕು ಎಂದು ಅವರು ಸಿಂಪಲ್ಲಾಗಿ ಹೇಳಿಬಿಟ್ಟರು. ಆಮೇಲೆ ಅದಕ್ಕೆ ಸ್ಪಷ್ಟೀಕರಣವನ್ನು ಅವರು ಕೊಡಲಿಲ್ಲ. ಸಮಾಜ ಕಲ್ಯಾಣ ಸಚಿವರಾದ ಆಂಜನೇಯರವರು ಅದಕ್ಕೆ ಸ್ಪಷ್ಟೀಕರಣ ಕೊಡುವ ರೀತಿಯಲ್ಲಿ, ಅದು ಈಗಲ್ಲ, ಮುಂದೆ 2018ರಲ್ಲಿ ದಲಿತ ಸಿ.ಎಂ. ಬೇಕು ಎಂದು ಹೇಳಿದರು. ಅದೇ ರೀತಿ, ರಾಮಲಿಂಗಾರೆಡ್ಡಿಯವರ ಹೇಳಿಕೆಯೂ ಬಂದಿದೆ. ಮುಂದಿನ ಸಲ ದಲಿತ ಸಿ.ಎಂ. ಆಗುತ್ತಾರೆ ಎನ್ನುವ ರಾಮಲಿಂಗಾರೆಡ್ಡಿಯವರ ಹೇಳಿಕೆಯೂ ಪತ್ರಿಕೆಯಲ್ಲಿ ಬಂದಿದೆ. ದಲಿತ ಸಿ.ಎಂ. ಆಗಲಿ, ಯಾರು ಬೇಡವೆನ್ನುತ್ತಾರೆ ಎಂದು ಶಾಸಕರಾದ ರಮೇಶ್ ಕುಮಾರ್‌ರವರೂ ಹೇಳಿದರು. ಅಂದರೆ, ಇವತ್ತು ಏನು ನಡೆಯುತ್ತಿದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಈಗಾಗಲೇ ಒಬ್ಬರು ಮುಖ್ಯಮಂತ್ರಿ ಇದ್ದಾರೆ, ಆ ಹುದ್ದೆ ಖಾಲಿ ಇಲ್ಲ.

ಶ್ರೀ ರಾಮಲಿಂಗಾರೆಡ್ಡಿ:- 2018ರವರೆಗೂ ಅವರೇ ಇರುತ್ತಾರೆ. 2018ರ ನಂತರ ಎಂದು ನಾನು ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್:- ನಾನೂ ಅದನ್ನೇ ಹೇಳುತ್ತಿದ್ದೇನೆ. ಆಯಿತು, ನೀವು ಒಪ್ಪಿಕೊಂಡಿರಲ್ಲ. ಆದರೆ ಶ್ರೀನಿವಾಸ್ ಪ್ರಸಾದ್‌ರವರು ಆ ರೀತಿ ಹೇಳಿರಲಿಲ್ಲ, ಅವರು ಜನರಲ್ಲಾಗಿ ಹೇಳಿದ್ದರು. ಯಾವ period, ಎಲ್ಲಿಯವರೆಗೆ ಎನ್ನುವುದ್ಯಾವುದನ್ನೂ ಅವರು ಹೇಳಿಲ್ಲ. ಅದಕ್ಕೆ ಆಂಜನೇಯರವರು ಸ್ಪಷ್ಟೀಕರಣ ಕೊಟ್ಟರು. ಮುಂದಿನ ಅವಧಿಗೆ ಅಂದರೆ 2018ಕ್ಕೆ ಎಂದು ನೀವೂ ಸ್ಪಷ್ಟೀಕರಣ ಕೊಟ್ಟಿರಿ. ಹೀಗಾಗಿ ದಲಿತ ಸಿ.ಎಂ. ಬೇಕು ಎನ್ನುವ ಚರ್ಚೆ ಈಗ ಏಕೆ ಬಂತು ಎಂದು ನನಗೆ ಅರ್ಥವಾಗುತ್ತಿಲ್ಲ. ಈಗಾಗಲೇ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿದ್ದಾರೆ.

(ಈ ಹಂತದಲ್ಲಿ ಸದಸ್ಯರಾದ ಶ್ರೀ ಪಿ.ಎಂ. ನರೇಂದ್ರಸ್ವಾಮಿಯವರು ಮಾತನಾಡಲು ಪ್ರಯತ್ನಪಟ್ಟರು)

ನಾನು ಯೀಲ್ಡ್ ಆಗಿಲ್ಲ. ಆಮೇಲೆ ಅವರು ಉತ್ತರ ಕೊಡಲಿ. ಅವರು ಇದನ್ನೂ deny ಮಾಡುತ್ತಾರೇನೋ ನನಗೆ ಗೊತ್ತಿಲ್ಲ. ಯಾರೋ ಜವಾಬ್ದಾರಿ ಇಲ್ಲದಂಥ ವ್ಯಕ್ತಿಗಳು ಹೇಳಿದರೆ ಅದು ಬೇರೆ ವಿಷಯ. ಆದರೆ ಜವಾಬ್ದಾರಿ ಇದ್ದಂಥ ಮಂತ್ರಿಗಳು, ಅದೂ ಸಹ ಸಿದ್ದರಾಮಯ್ಯನವರ ಕ್ಯಾಬಿನೆಟ್‌ನಲ್ಲಿರುವಂಥ ಮಂತ್ರಿಗಳು ಈ ರೀತಿ ಡಿಬೇಟ್ ಪ್ರಾರಂಭ ಮಾಡಿದರೆ, ಆಡಳಿತ ವ್ಯವಸ್ಥೆ ಹೇಗೆ ಆಗುತ್ತದೆ ಎನ್ನುವುದನ್ನು ನಾನು ಹೇಳುತ್ತಿದ್ದೇನೆ. ಈಗಾಗಲೇ ಒಬ್ಬ ಮುಖ್ಯಮಂತ್ರಿ ಇದ್ದಾಗ, ಆ ಹುದ್ದೆ ಈಗ ಖಾಲಿ ಇಲ್ಲ, ಅವರು ಬಂದು ಇನ್ನೂ ಎರಡು ವರ್ಷ ಪೂರ್ಣವಾಗಿಲ್ಲ, ಈಗ ಒಂದು ವರ್ಷ, ಒಂಭತ್ತು ತಿಂಗಳಾಯಿತು, ಎರಡು ವರ್ಷವಾಗಲು ಇನ್ನೂ ಮೂರು ತಿಂಗಳು ಇದೆ, ಅದರ ಜೊತೆಗೆ ಇನ್ನೂ ಮೂರು ವರ್ಷದ ಅವಧಿಯಿದೆ. ಎಲೆಕ್ಷನ್ ಆರು ತಿಂಗಳು ಅಥವಾ ಒಂದು ವರ್ಷವಿದ್ದಾಗ ಇಂಥ ಡಿಬೇಟ್ ಪ್ರಾರಂಭ ಮಾಡಿದರೆ ಸರಿ ಎನ್ನಬಹುದು. ಆದರೆ ಎರಡು ವರ್ಷ ಮುಗಿಯುವ ಮುಂಚೆಯೇ ದಲಿತ ಸಿ.ಎಂ. ಬೇಕು ಎನ್ನುವ ಚರ್ಚೆ ಏಕೆ ಬಂತು?

(ಗೊಂದಲ)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಮಾನ್ಯ ಜಗದೀಶ್ ಶೆಟ್ಟರ್‌ರವರೇ, ನಿಮಗೆ support ಮಾಡುವ ಸಲುವಾಗಿ ಮಾತನಾಡುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:- ಬೇಡ, ನಾನು ಯೀಲ್ಡ್ ಆಗಿಲ್ಲ. 2018ಕ್ಕೆ ಎಂದು ರಾಮಲಿಂಗಾರೆಡ್ಡಿಯವರು ಸ್ಪಷ್ಟೀಕರಣ ಕೊಟ್ಟರು. ಒಂದಂತೂ ಗ್ಯಾರಂಟಿಯಾಯಿತು. ಏನೆಂದರೆ, ಶ್ರೀನಿವಾಸ್ ಪ್ರಸಾದ್‌ರವರ ಹೇಳಿಕೆಯ ಪ್ರಕಾರ ನೋಡುವುದಾದರೆ, ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಐದು ವರ್ಷ ಇರಲಿ ಎಂದು ನಾವು ಹೇಳುತ್ತೇವೆ, ಆದರೆ ಅವರ ಪಕ್ಷದಲ್ಲೇ, ಇವರ ಅವಧಿಯನ್ನು ಕಟ್ ಮಾಡಿ, ಆದಷ್ಟು ಬೇಗನೆ ಇವರ ನಾಯಕತ್ವ ಬದಲಾವಣೆ ಮಾಡಿ ಒಬ್ಬ ದಲಿತರನ್ನು ಮುಖ್ಯಮಂತ್ರಿ ಮಾಡಲು ಏನೋ ಒಂದು

ನಡೆಯುತ್ತಿದೆ ಎನ್ನುವುದರ ಮೇಲೆ ಸಾರ್ವಜನಿಕವಾಗಿ ಚರ್ಚೆಯಾಗುತ್ತಿದೆ. ಅದಕ್ಕೆ ಅವರೇ ಸ್ಪಷ್ಟೀಕರಣ ಕೊಡಲಿ, ಮುಖ್ಯಮಂತ್ರಿಗಳು ಕೊಡಲಿ ಅಥವಾ ರಾಮಲಿಂಗಾರೆಡ್ಡಿಯವರು ಕೊಡಲಿ ಅಥವಾ ಆಂಜನೇಯರವರು ಕೊಡಲಿ ಅಥವಾ ಶ್ರೀನಿವಾಸ ಪ್ರಸಾದ್‌ರವರು ಕೊಡಲಿ. ಒಟ್ಟಿನಲ್ಲಿ ಏನೋ ಒಂದು ನಡೆಯುತ್ತಿದೆ.

ಶ್ರೀ ಮಾಲಿಕಯ್ಯ ವಿ. ಗುತ್ತೇದಾರ್:– ಜಗದೀಶ್ ಶೆಟ್ಟರ್‌ರವರೇ, ಇದರಲ್ಲಿ ಸಾಮಾಜಿಕ ನ್ಯಾಯ ಇದೆ ಎಂದು ಹೇಳಿದ್ದು.

ಶ್ರೀ ಜಗದೀಶ್ ಶೆಟ್ಟರ್:– ಅಂದರೆ ಸಿದ್ದರಾಮಯ್ಯನವರ ಸೇವೆ ಸಿಗುವುದಿಲ್ಲ, ಯವಾಗಲಾದರೂ leadership change ಆಗಬಹುದು, ಆಗ ಏನಾಗುತ್ತದೆಂದರೆ ಆಡಳಿತ ವ್ಯವಸ್ಥೆಯಲ್ಲಿ ಬಹಳಷ್ಟು ಕುಸಿತಗಳಾಗುತ್ತವೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:– ನಿಮ್ಮ ಕನಸು ಯಾವುದೇ ಕಾರಣಕ್ಕೂ ನಡೆಯುವುದಿಲ್ಲ.

(ಗೊಂದಲ)

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:– ಇದರಲ್ಲಿ ಸಾಮಾಜಿಕ ನ್ಯಾಯವಿದೆ. ನಮ್ಮ ಪಕ್ಷದವರು ಎಲ್ಲ ಜಾತಿಯವರಿಗೂ ಕೊಡುತ್ತಾರೆ. ಮುಂದೆ ಕಾರಜೋಳರವರನ್ನು ಮಾಡುತ್ತೇವೆ ಎಂದು ನೀವು ಸ್ಟೇಟ್‌ಮೆಂಟ್ ಕೊಡಿ ನೋಡೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮೊನ್ನೆ ನಿಮ್ಮ ಮಲ್ಲಿಕಾರ್ಜುನ ಖರ್ಗೆಯವರು ಏನು ಹೇಳಿದರು? ನಿಮ್ಮ ಕಾಂಗ್ರೆಸ್ ಪಕ್ಷದವರು ಈ ದೇಶದಲ್ಲಿ ಹಿಂದುಳಿದ ವರ್ಗದ ಜನರನ್ನು ಯಾವಾಗಲೂ ಪ್ರಧಾನ ಮಂತ್ರಿಯನ್ನಾಗಿ ಮಾಡಲಿಲ್ಲ. ಭಾರತೀಯ ಜನತಾ ಪಕ್ಷ ಮಾತ್ರ ಹಿಂದುಳಿದ ವರ್ಗದವರಾದ ನರೇಂದ್ರ ಮೋದಿಯವರನ್ನು ಪ್ರಧಾನ ಮಂತ್ರಿಯನ್ನಾಗಿ

ಮಾಡಿದ್ದೇವೆ. ಇಲ್ಲಿಯವರೆಗೆ ನೀವು ಯಾರನ್ನು ಮಾಡಿದ್ದೀರಿ? ನೀವು ಲಿಸ್ಟ್ ತೆಗೆದು ನೋಡಿ. ಯಾರಾದರೂ ಹಿಂದುಳಿದ ವರ್ಗದ ಒಬ್ಬರನ್ನು ಪ್ರಧಾನ ಮಂತ್ರಿಯನ್ನಾಗಿ ಮಾಡಿದ್ದೀರೇನು? ನಿಮ್ಮಲ್ಲಿ ಯಾರು ಆಗಿದ್ದಾರೆ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಮನಮೋಹನ್ ಸಿಂಗ್‌ರವರು ಅಲ್ಪಸಂಖ್ಯಾತರು. ಅವರನ್ನು ಮಾಡಲಿಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ಅವರು ಹಿಂದುಳಿದ ವರ್ಗದವರಲ್ಲ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಒಬ್ಬ ಅಲ್ಪಸಂಖ್ಯಾತರನ್ನು ನಾವು ಪ್ರಧಾನಿಯನ್ನಾಗಿ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಅದು ಬಿಡಿ, ನಾನು ಹೇಳುತ್ತಿರುವುದು ಹಿಂದುಳಿದ ವರ್ಗದ ಬಗ್ಗೆ. ಹಿಂದುಳಿದ ವರ್ಗದವರು ಯಾರನ್ನಾದರೂ ನೀವು ಮಾಡಿರುವಿರೇನು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸಾಮಾಜಿಕ ನ್ಯಾಯಕ್ಕಾಗಿ ದಲಿತರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದರೆ ನಮಗೂ ಖುಷಿ.

ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:- ಬಾಬು ಜಗಜೀವನರಾಂರವರಿಗೆ ಕೊಡಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಅವರನ್ನೂ ನಾವು Prime Minister candidate ಆಗಿ declare ಮಾಡಿದ್ದೆವು. ಆದರೆ ಆಗ ನೀವ್ಯಾರೂ support ಕೊಡಲಿಲ್ಲ. ಅದನ್ನೆಲ್ಲ ಬಿಡಿ. ಆ ಸಂದರ್ಭದಲ್ಲಿ ಅವರನ್ನು ನಾವು ಪ್ರಧಾನ ಮಂತ್ರಿ ಮಾಡಲೂ ತಯಾರಿದ್ದೆವು. ಮಲ್ಲಿಕಾರ್ಜುನ ಖರ್ಗೆಯವರೂ ಹೇಳಿದರು, ಈಗ ಹುದ್ದೆ ಖಾಲಿಯೇ ಇಲ್ಲ, ಈಗೇಕೆ ಡಿಬೇಟ್ ಮಾಡುತ್ತೀರಿ, ಹಿಂದೆ ನನ್ನನ್ನು ಪ್ರೊಜೆಕ್ಟ್ ಮಾಡಿ ಎಂದರೆ ಆಗ ಮಾಡಲಿಲ್ಲ, ಮಾಡುವ ಸಮಯದಲ್ಲಿ ಮಾಡಲಿಲ್ಲ, ಈಗ ಏಕೆ ಹೇಳಿಕೆಗಳನ್ನು ಕೊಡುತ್ತೀರಿ ಎಂದು ಅವರೇ ಒಂದು open ಆಗಿ ಹೇಳಿಕೆ ಕೊಟ್ಟರು.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:– ...ಮುಸ್ಲಿಂರನ್ನಂತೂ ಮುಟ್ಟುವುದೇ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾನು yield ಆಗಿಲ್ಲ. ಏನೇನೋ ಮಾತನಾಡಿದರೆ ನಾನು ಏನು ಮಾಡಲಿ.

ಶ್ರೀ ಬಸವರಾಜ ರಾಯರೆಡ್ಡಿ:– ನಾನೊಂದು correction ಮಾಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಅಬ್ದುಲ್ ಕಲಾಂರವರನ್ನು ಮಾಡಿದವರು ನಾವಲ್ಲವೇ? ಮಾನ್ಯ ವಾಜಪೇಯಿಯವರ ಕಾಲದಲ್ಲಿ ಅಬ್ದುಲ್ ಕಲಾಂರವರು ಆದರಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾನು yield ಆಗಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ನಾನೊಂದು correction ಮಾಡುತ್ತೇನೆಂದು ಹೇಳಿದೆ. Correction ಏನೆಂದರೆ ಬಾಬು ಜಗಜೀವನ್‌ರಾಂ ರವರು ಪ್ರಧಾನ ಮಮತ್ರಿ ಆಗಬೇಕೆನ್ನುವ ಸಂದಂರ್ಭದಲ್ಲಿ ಭಾರತೀಯ ಜನತಾ ಪಕ್ಷ ಇನ್ನೂ ಹುಟ್ಟಿರಲಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾನು yield ಆಗಿಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೆ, ನಾನು ಹೇಳುವುದೇನೆಂದರೆ, ಇನ್ನೂ ಕೂಡ ಮಾನ್ಯ ಸಿದ್ದರಾಮಯ್ಯನವರ 2 ವರ್ಷ

period ಮುಗಿದಿಲ್ಲ. ಈಗ ಈ ರೀತಿ debate ಏಕೆ start ಮಾಡಿತು ಎಂದು ಸಂಶಯಕ್ಕೆ ಚಾಲೂ ಆಗುತ್ತದೆ. ಸಾರ್ವಜನಿಕರಲ್ಲಿ ಚರ್ಚೆ ಚಾಲೂ ಆಗಿದೆ. ಆಗ ಆಡಳಿತ ವ್ಯವಸ್ಥೆ ಕುಸಿದು ಹೋಗುತ್ತದೆ. ಹಾಗಾದರೆ ಸಿದ್ದರಾಮಯ್ಯನವರು ಬಹಳಷ್ಟು ದಿವಸ ಅಧಿಕಾರದಲ್ಲಿರುವುದಿಲ್ಲ, ಆದಷ್ಟು ಬೇಗನೆ leadership change ಆಗುತ್ತದೆ ಎಂದು ಅಧಿಕಾರಿಗಳು ಮಾತು ಕೇಳುವುದಿಲ್ಲ. ಇದರಿಂದ Administration collapse ಆಗುತ್ತದೆ. ನಾನು ಇದನ್ನೇ ಹೇಳುತ್ತಿದ್ದೇನೆ. ಮಾಡುವುದಾದರೆ open ಆಗಿ ಹೇಳಿ, ಮಾಡಿ. ಇದರಲ್ಲಿ ಇನ್ನೊಂದು ಖಾತ್ರಿಯಾಗಿರುವುದು ಏನೆಂದರೆ, ಸಿದ್ದರಾಮಯ್ಯನವರದು ಐದೇ ವರ್ಷ ಎಂದು ಖಾತರಿ ಆಯಿತು. ಇದು clear ಆಯಿತು. ಏಕೆಂದರೆ, ಈಗ ರಾಮಲಿಂಗಾ ರೆಡ್ಡಿಯವರು ಹೇಳಿದರು ಮತ್ತು ಆಂಜನೇಯರವರು 2018ಕ್ಕೆ ಎಂದು ಹೇಳಿಬಿಟ್ಟಿದ್ದಾರೆ. ನಾಳೆ ಸಿದ್ದರಾಮಯ್ಯನವರ ನೇತೃತ್ವದಲ್ಲಿ ಇವರು ಚುನಾವಣೆಗೆ ಹೋದರೆ ಗೆದ್ದರೂ ಸಹಿತ ನಾವು ದಲಿತ ಸಿ.ಎಂ. ಮಾಡುತ್ತೇವೆಂದು ಅವರು ಹೇಳಿಬಿಟ್ಟರು. ಅಲ್ಲಿ ದೆಹಲಿಯಲ್ಲಿ ಶೀಲಾ ದೀಕ್ಷಿತ್‌ರವರನ್ನು 3–3 ಬಾರಿ ಮುಖ್ಯಮಂತ್ರಿಯನ್ನಾಗಿ ಮಾಡಿದರು.

ಶ್ರೀ ರಾಮಲಿಂಗಾರೆಡ್ಡಿ:– ನಾವು 2018ರವರೆಗೆ ಖಾಲಿ ಇಲ್ಲ ಎಂದು ಹೇಳಿರುವುದು.

ಶ್ರೀ ಜಗದೀಶ್ ಶೆಟ್ಟರ್:– ನಿಮ್ಮ period ಇಷ್ಟೇ ಇದೆಯಪ್ಪ ಎನ್ನುವುದು fix ಆಗಿದೆ. ಆಯಿತು, ಅದು ನಿಮಗೆ ಬಿಟ್ಟಂಥ ವಿಚಾರ. ಆದರೆ, ಒಂದು ಮಾತನ್ನು ಹೇಳುತ್ತೇನೆ. ಇವತ್ತು ನಡೆಯುವಂಥ ನಿಮ್ಮ ಆಡಳಿತ ವೈಖರಿ, ಇವತ್ತು ಸರ್ಕಾರದಲ್ಲಿ ನಡೆಯುತ್ತಿರುವಂಥ ಭ್ರಷ್ಟಾಚಾರ, ಆಡಳಿತ ವ್ಯವಸ್ಥೆ ಕುಸಿದುಹೋಗಿದೆ. Law and order problem ಸಿಕ್ಕಾಪಟ್ಟೆ ಆಗಿದೆ. ಇದನ್ನೆಲ್ಲ ನೋಡಿದಾಗ 2018ಕ್ಕೆ ನೀವು ಮತ್ತೊಮ್ಮೆ ಅಧಿಕಾರಕ್ಕೆ ಬರುವುದು ಅದು ಬರೀ ಕನಸು. ಮತ್ತೆ ಕಾಂಗ್ರೆಸ್‌ಮುಕ್ತವಾದಂಥ ಸರ್ಕಾರ ಇಲ್ಲಿ ಬರುತ್ತದೆ. ಕಾಂಗ್ರೆಸ್‌ಮುಕ್ತವಾದಂಥ ಬಿಜೆಪಿ ಸರ್ಕಾರ 2018ರಲ್ಲಿ ಬರುತ್ತದೆ. ಇದನ್ನು ಬೇಕಾದರೆ ಬರೆದಿಟ್ಟುಕೊಳ್ಳಿ.

(ಗೊಂದಲ)

ಶ್ರೀ ರಾಮಲಿಂಗಾರೆಡ್ಡಿ:- ಅದನ್ನು ನಿವು ಹೇಳುವುದಲ್ಲ. ಜನರು ಹೇಳುತ್ತಾರೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸುಮ್ಮನೆ ಇದು ಆ ದಲಿತರ ಮೂಗಿಗೆ ಬೆಣ್ಣೆ, ತುಪ್ಪ ಹಚ್ಚುವ ಕೆಲಸ ಮಾಡುತ್ತಿದ್ದೀರಿ ಹೊರತು ಬೇರೆ ಏನೂ ನಿಮ್ಮ ಉದ್ದೇಶವಿಲ್ಲ.

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ಜಗದೀಶ್ ಶೆಟ್ಟರ್, ಕಾಂಗ್ರೆಸ್ಸಿಗೆ ಸಾವೇ ಇಲ್ಲ. (ಗೊಂದಲ). .

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:- ನಿಮ್ಮ ಸಚಿವ ಸಂಪುಟದಲ್ಲಿ ಎಷ್ಟು ದಲಿತ ಮಂತ್ರಿಗಳು ಇದ್ದರು?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಉಪಾಧ್ಯಕ್ಷರೆ, ಈ ರೀತಿ debate ಮಾಡುವುದು ಅವರಿಗೆ (ಮಂತ್ರಿಗಳಿಗೆ) ಬಿಟ್ಟಂತಹ ವಿಚಾರ. ನಾನು ಹೇಳುವುದೇನೆಂದರೆ, ಇದರ replication ಏನಾಗುತ್ತದೆಂಬುದು ನಿಮ್ಮ ಗಮನಕ್ಕೆ ತಂದಿದ್ದೇನೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:- ...ನಿಮ್ಮ ಅವಧಿಯಲ್ಲಿ ಭ್ರಷ್ಟಾಚಾರ ಎಷ್ಟು ನಡೆಯಿತು? ಎಷ್ಟು ಮುಖ್ಯಮಂತ್ರಿಗಳು ಬಂದರು? ಎಷ್ಟು ಸಚಿವರು ಜೈಲಿಗೆ ಹೋದರು? ಇವನ್ನೆಲ್ಲ ನಾವೂ ನೋಡಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾನು yield ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ವಿರೋಧ ಪಕ್ಷದ ನಾಯಕರು yield ಆಗಿಲ್ಲ. ತಾವೆಲ್ಲ ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:- ಅದು ತಪ್ಪು ಇದ್ದರೆ ಹೇಳಿ. ಇದು ಪತ್ರಿಕೆಯಲ್ಲಿ ಹೇಳಿಕೆ ಬಂದಿರುವಂಥದ್ದು. ಅದನ್ನು ನಾನು ಉಲ್ಲೇಖ ಮಾಡಿದೆ. ಅದರಲ್ಲಿ ತಪ್ಪು ಇದ್ದರೆ ಅವರು ಹೇಳಲಿ. ಅದು ಈ ಪತ್ರಿಕೆಯಲ್ಲಿ ಬಂದಿರುವುದು ತಪ್ಪು ಎಂದು ಅವರು ಹೇಳಲಿ.

(ಗೊಂದಲ)

ಉಪಾಧ್ಯಕ್ಷರು:- ಶಿವಮೂರ್ತಿಯವರೆ ಕುಳಿತುಕೊಳ್ಳಿ.

ಶ್ರೀ ಕೆ. ಶಿವಮೂರ್ತಿ:- ಕಾಂಗ್ರೆಸ್ ಬಗ್ಗೆ ಅವರಿಗೆ ಅಷ್ಟೇಕ ಅವರಿಗೆ allergy?

(ಗೊಂದಲ)

ಶ್ರೀ ಕೆ. ಶಿವಮೂರ್ತಿ:- ಕಾಂಗ್ರೆಸ್ ಎನ್ನುವ ಪದಕ್ಕೆ ಸಾವೇ ಇಲ್ಲ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ಮುಖ್ಯಮಂತ್ರಿ ಬಗ್ಗೆ ಪತ್ರಿಕೆಯಲ್ಲಿ ಮಾತನಾಡುವುದಕ್ಕೆ ಹೊರಟಿದ್ದಿರಲ್ಲ.

(ಗೊಂದಲ)

SRI K. SHIVAMURTHY:- ಕಾಂಗ್ರೆಸ್ ಪದವನ್ನು ತಾವು ಏಕೆ ಬಳಸುತ್ತೀರ? Why you repeat Congress?

ಶ್ರೀ ಜಗದೀಶ್ ಶೆಟ್ಟರ್:- ಒಬ್ಬ ಮುಖ್ಯಮಂತ್ರಿ ಇದ್ದಾಗ ಮುಖ್ಯಮಂತ್ರಿ ಸ್ಥಾನದ ಬಗ್ಗೆ ಚರ್ಚೆ ಮಾಡುವುದಕ್ಕೆ ಹೊರಟಿರುವುದು ನಿಮ್ಮ party ಯವರು, ನಾವಲ್ಲ. ನೀವು ಮಾತನಾಡುವುದಕ್ಕೆ ಹೊರಟಿದ್ದೀರಿ. ಇದು ಏಕೆ ಬೇಕಿತ್ತು ಎಂದು ನಾನು ಕೇಳುತ್ತಿದ್ದೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಏನು ನಡೆಯುತ್ತಿದೆ ಎನ್ನುವುದು ಗೊತ್ತಾಗುತ್ತಿಲ್ಲ.

(ಗೊಂದಲ)

SRI K. SHIVAMURTHY:- Nobody can stay, Congress is permanent.

(ಗೊಂದಲ)

SRI K. SHIVAMURTHY:- Sir, I am a secular person. I am a democratic. I have faith in the Constitution. That is a Congress party.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ, ಪಾಪ ನಿಮ್ಮ ಕಡೆಯ ಆ ಸದಸ್ಯರು ಬಹಳ exercise ಮಾಡುತ್ತಿದ್ದಾರೆ. ಅವರ ಕಡೆ ನಿಮ್ಮ ಗಮನ ಸ್ವಲ್ಪ ಇರಲಿ. ನಾಳೆ ಏನಾದರೂ ಅವಕಾಶ ಕೊಡುವುದಕ್ಕೆ ಆದರೆ ಕೊಡಿ. ಅವರು ಎಷ್ಟೊಂದು defend ಮಾಡಿ ಮಾತನಾಡುತ್ತಾರೆ ನೋಡಿ. ನಮ್ಮನ್ನು ನೋಡಿದರೆ ಹೇಗೆ, ಸ್ವಲ್ಪ ಅವರ ಕಡೆಗೆ ನೋಡಿ.

ಶ್ರೀ ಪಿ.ಎಂ. ನರೇಂದ್ರ ಸ್ವಾಮಿ:- ಅಂದರೆ ಲಕ್ಷ್ಮಣಸಂಗಪ್ಪ ಸವದಿಯವರನ್ನು ನೋಡಬೇಕಾಗಿದೆ. ಅವರು ಕೂಡ ಈ ಕಡೆ ಬರುವುದಕ್ಕೆ ತಯಾರಿದ್ದಾರೆಂದು ಅನಿಸುತ್ತದೆ.

(ಗೊಂದಲ)

ಶ್ರೀ ಸಿ.ಟಿ. ರವಿ:- ಮಾನ್ಯ ಮುಖ್ಯಮಂತ್ರಿಯವರೆ, ನಿಮ್ಮ ಗಮನ ಸೆಳೆಯುವುದಕ್ಕೆ ಅವರು ಅಷ್ಟೊಂದು ಕಸರತ್ತು ಮಾಡುತ್ತಿರುವುದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಸನ್ಮಾನ್ಯ ಉಪಾಧ್ಯಕ್ಷರೆ, ಆಡಳಿತ ಯಂತ್ರ ಕುಸಿದು ಹೋಗಲಿಕ್ಕೆ ಇವೆಲ್ಲ ಕಾರಣವಾಗುತ್ತವೆ. ಜೊತೆಗೆ ಕಳೆದ ಎರಡು ವರ್ಷಗಳಿಂದ ಚರ್ಚೆ ನಡೆಯುತ್ತಿದೆ. ಬಹುಶಃ cabinet ದರ್ಜೆಯ 4 ಸಚಿವರ ಸ್ಥಾನಗಳು ಖಾಲಿ ಇವೆ. ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ವಿನಂತಿ ಮಾಡುತ್ತೇನೆ. ಆದಷ್ಟು ಬೇಗನೆ ಅದನ್ನು fill up ಮಾಡಿ. ಯಾರನ್ನು ಬಿಡುತ್ತೀರೋ, ತೆಗೆದುಕೊಳ್ಳುತ್ತೀರೋ ಅದು ನಿಮಗೆ ಬಿಟ್ಟಿದ್ದು. ಕೆಲವರನ್ನು ತೆಗೆಯುತ್ತೀರೋ ಅಥವಾ ಕೇವಲ 4 ಸೀಟು ಅನ್ನು fill up ಮಾಡುತ್ತೀರೋ, ಒಟ್ಟಿನಲ್ಲಿ ತುಂಬಿಬಿಡಿ. ಬರೀ discussion ಮಾಡುವುದು, ಪತ್ರಿಕೆಗಳಲ್ಲಿ ಹೇಳಿಕೆಗಳು, ಕೆಲವರು ದೆಹಲಿಗೆ ಹೋಗಿ lobby ಮಾಡಿದರು, ಕೆಲವರು ಮುಖ್ಯಮಂತ್ರಿಗಳ ಮೇಲೆ ಒತ್ತಡ ತಂದರು, ಅದು High Command ಗೆ ಬಿಟ್ಟಂಥ ವಿಚಾರ, ಇದೆಲ್ಲ ಏನು? 4 ಸೀಟು ಅನ್ನು ಬೇಗನೆ ಮಾಡಿ ಮುಗಿಸಿಬಿಡಿ. ಈಗಾಗಲೇ ಎರಡು ವರ್ಷ ಕಳೆದಿದೆ. ಈ 4 cabinet ದರ್ಜೆಯ ಸಚಿವ ಸ್ಥಾನವನ್ನು fill up ಮಾಡಲಿಲ್ಲವೆಂದರೆ ನಿಮಗೆ ಕೊನೆ ತನಕ ಕಾದಾಟ ಇರುವಂಥದ್ದೇ. ಅವರನ್ನು ಮಾಡಿ, ಇವರನ್ನು ಮಾಡಿ ಎಂದು pressure ಇರುವುದೇ ಇದು. ಒಂದು ಮಾಡಿ ಒಗೆದುಬಿಡಿ. ಏನೂ ಆಗುವುದಿಲ್ಲ. ನಾನು ಮುಖ್ಯ ಮಂತ್ರಿಯಾಗಿದ್ದಾಗ 10 ತಿಂಗಳೇ ಇತ್ತು ಎಂದು ನನಗೆ ಗುರುತು ಇತ್ತು, 33-44 ಜನ Ministers ಅನ್ನು ಒಂದೇ ಪ್ರಮಾಣವಚನದಲ್ಲಿ ತೆಗೆದುಕೊಂಡೆ. ನಮ್ಮ ಕಡೆ ಮತ್ತೊಬ್ಬರು ಯಾರೂ ಕೇಳುವುದಕ್ಕೇ ಬರಲಿಲ್ಲ. ಒಂದು ಸಲ bold ಆಗಿ decision ತೆಗೆದುಕೊಂಡುಬಿಡಿ. ನೀವು bold ಆಗಿ decision ತೆಗೆದುಕೊಳ್ಳಿ. ಅಂದರೆ ಇದು ಆಡಳಿತ ಸರಳವಾಗಿ ನಡೆಯಲಿಕ್ಕೆ ಸಾಧ್ಯವಿದೆ. ಇಲ್ಲವೆಂದರೆ, there is no end at all in the administration. ಆಮೇಲೆ, DCM ಮಾಡಬೇಕೋ, ಬೇಡವೋ? ಒಂದು ಸಲ ಇಲ್ಲವೆಂದು ಸ್ಪಷ್ಟವಾಗಿ ಹೇಳಿಬಿಡಿ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಕಳೆದ ಸರ್ಕಾರದಲ್ಲಿ ನಾನೂ ಇದ್ದೆ.

ಶ್ರೀ ಜಗದೀಶ್ ಶೆಟ್ಟರ್:- ಡಾ|| ಪರಮೇಶ್ವರ್‌ರವರನ್ನು DCM ಮಾಡಬೇಕೋ, ಬೇಡವೋ? ಅದೂ ಒಂದು discussion. ನಾವು ಅಶೋಕ್, ಈಶ್ವರಪ್ಪನವರನ್ನು ಒಂದೇ ಟೈಂನಲ್ಲಿ DCM ಮಾಡಿದೆವು.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಸಾರ್, ಒಂದು ವಿಚಾರ, ಕಳೆದ ಸರಿ ನಾವು ಆ ದಿಕ್ಕಿನಲ್ಲಿ ಕುಳಿತಿದ್ದೆವು, ಆಗಲೇ ಬಂಡಾಯ ಎದ್ದಿದ್ದು.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಆಗಲೇ ಜನಾರ್ದನ ರೆಡ್ಡಿಯವರು ಬಂಡಾಯ ಎದ್ದಿದ್ದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇದು ಎರಡು ವರ್ಷಗಳಿಂದ debate ಆಗುತ್ತಿದೆ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಅಂದು ನೀವು ಗ್ರಾಮೀಣಾಭಿವೃದ್ಧಿ ಸಚಿವರಾಗಿದ್ದು ಆಗಲೇ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಹೀಗಾದರೆ ನಾನು ಮಾತನಾಡಲಿಕ್ಕೆ ತಯಾರಿಲ್ಲ. ನರೇಂದ್ರಸ್ವಾಮಿಯವರ, ನೀವು ಆಮೇಲೆ ಮಾತನಾಡಿ. ನೀವು Governor's address ಮೇಲೆ ಮಾತನಾಡಿ. ಯಾರು ಬೇಡವೆನ್ನುತ್ತಾರೆ? ಮಾತನಾಡುವಾಗ ನಡುವೆ ದಯವಿಟ್ಟು intervene ಮಾಡುವುದಕ್ಕೆ ಬರಬೇಡಿ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಬಂಡಾಯದ ವಿಚಾರದಲ್ಲಿ ಅಂದು ನೀವೂ ಭಾಗವಾಗಿದ್ದಿರಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- You are not a Minister. ನೀವು ಮುಖ್ಯಮಂತ್ರಿಗಳಲ್ಲ. ಉತ್ತರ ಕೊಡುವುದಕ್ಕೆ ಮುಖ್ಯಮಂತ್ರಿ, Minister ಇದ್ದಾರೆ. ಈ ರೀತಿ ಪ್ರತಿ ಸಲ intervene ಮಾಡಿದರೆ ನಮಗೆ ಮಾತನಾಡಲಿಕ್ಕಾಗುವುದಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ನರೇಂದ್ರಸ್ವಾಮಿಯವರೆ, ಅವರು yield ಆಗಿಲ್ಲ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಬಂಡಾಯ ಆಗ ನಿಮ್ಮಲ್ಲೂ ಇತ್ತು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಈ ರೀತಿ intervene ಮಾಡುವುದಕ್ಕೆ ಹೋಗಬೇಡಿ.

(ಗೊಂದಲ)

SRI K. SHIVAMURTHY:- Constitution of India, Supreme Court of India has upheld it. They all belong to independents. They are partners of your Government. You have disqualified them unceremoniously.

ಶ್ರೀ ಜಗದೀಶ್ ಶೆಟ್ಟರ್:- ಬಿಡಿ, ನಾನು ಹೇಳುತ್ತೇನೆ. ನೀವು ಆಮೇಲೆ ಉತ್ತರ ಕೊಡಿ. Are you a Minister? You can answer later. ಆಮೇಲೆ ನೀವು ಉತ್ತರ ಹೇಳಿ.

(ಗೊಂದಲ)

ಉಪಾಧ್ಯಕ್ಷರು:- ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಆರ್. ಅಶೋಕ್:- ನೀವೇ ಹೇಳಿರುವುದು. ಕಣ್ಣು, ಕಿವಿ ಇಲ್ಲದವರು ಬೇಕಾದಷ್ಟು ಮಂತ್ರಿಗಳಿದ್ದಾರೆ. ಕೆಲವರಿಗೆ ಕಣ್ಣೇ ಕಾಣಿಸುವುದಿಲ್ಲ. ಕಿವಿಯೇ ಕೇಳಿಸುವುದಿಲ್ಲ. ಆರೋಗ್ಯ ಸರಿ ಇಲ್ಲ. ತೆಗೆದು ಹಾಕಿ ಎಂದು ನೀವೇ ಹೇಳಿರುವುದು. ನಾವು ಹೇಳಿಲ್ಲ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ನೀವು ವಿಧಾನ ಸಭಾಧ್ಯಕ್ಷ ಪೀಠದಲ್ಲಿ ಕುಳಿತಿದ್ದವರು.

(ಗೊಂದಲ)

ಶ್ರೀ ಆರ್. ಅಶೋಕ್:- 5 ವರ್ಷ ನಡೆಯಲಿ, ಮಾನ್ಯ ಮುಖ್ಯಮಂತ್ರಿಯವರು 5 ವರ್ಷ ಇರಲಿ ಎಂದು ಹೇಳುತ್ತಿದ್ದೇವೆ. ನೀವೇ ಹೇಳುತ್ತಿರುವುದು. ನಾವು ಮುಖ್ಯಮಂತ್ರಿಯವರನ್ನು ತೆಗೆಯಿರಿ ಎಂದು ಹೇಳಲಿಲ್ಲ. ದಲಿತ ಸಿಎಂ ಮಾಡುತ್ತೇವೆಂದು ನೀವೇ ಹೇಳಿದಿರಿ. ಈಗ ಮಾಡುವುದಿಲ್ಲವೆಂದು ಮತ್ತೆ 18ನೇ ಇಸವಿಗೆ, ಮತ್ತೆ 24ನೇ ಇಸವಿಗೆ ಮತ್ತೆ 30ನೇ ಇಸವಿಗೆ ಎಲ್ಲಾ ಇವತ್ತೇ announce ಮಾಡಿ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಅದು ನಮ್ಮ ಪಕ್ಷದ ಆಂತರಿಕ ವಿಚಾರ.

(ಗೊಂದಲ)

ಶ್ರೀ ಆರ್. ಅಶೋಕ್:- ಜನ vote ಹಾಕುತ್ತಾರೆನ್ನುವ guarantee ಇಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್:- ದೇಶ ಪೂರ್ತಿ ಖಾಲಿ. ದೆಹಲಿ ಖಾಲಿಯಾಗುತ್ತಿದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇವರು ಟೀಕೆಗಳನ್ನು ಸಹಿಸಿಕೊಳ್ಳಬೇಕು. ಇವರಿಗೆ ಟೀಕೆಗಳನ್ನು ಸಹಿಸಿಕೊಳ್ಳುವುದಕ್ಕೇ ಆಗುವುದಿಲ್ಲ. ನೀವು ಏನು ಮಾಡುತ್ತಿದ್ದೀರಿ ಎಂದರೆ ಅವರಿಗೆ ಸಹಿಸಿಕೊಳ್ಳುವುದಕ್ಕೇ ಆಗುತ್ತಿಲ್ಲ. ಇದ್ದ ಪರಿಸ್ಥಿತಿ ಹೇಳುತ್ತಿದ್ದೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇವರಿಗೆ ಸಮಾಧಾನವಿಲ್ಲ.

ಉಪಾಧ್ಯಕ್ಷರು:- ಕುಳಿತುಕೊಳ್ಳಿ.

ಶ್ರೀ ಜಗದೀಶ್ ಶೆಟ್ಟರ್:- ಅವರನ್ನು ಬಹಳ ಹೊಗಳಬೇಕು. ನೀವು ಚಂದ ಇದ್ದೀರಿ, ಇಂದ್ರ ಇದ್ದೀರಿ, ನಿಮ್ಮ ಆಡಳಿತ ಚಲೋ ಇದೆ ಎಂದರೆ ಬಹಳ ಖುಷಿಯಾಗುತ್ತದೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಬಿಡಿ, ಆಮೇಲೆ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ಮಂತ್ರಿಗಳು ಉತ್ತರ ಕೊಡುತ್ತಾರೆ. ನಾವು ಹೇಳಿದ್ದು ತಪ್ಪಿದ್ದರೆ ಅವರು ಉತ್ತರ ಕೊಡುತ್ತಾರೆ. ಏಕೆ ನೀವು ಬಡಬಡಿಸುತ್ತಿದ್ದೀರಿ? ಮಂತ್ರಿಯಾಗುವುದಿದ್ದರೆ ಅಲ್ಲಿ ಹೋಗಿ ವಸೂಲಿ ಹಚ್ಚಿ. Delhi ಗೆ ಹೋಗಿ Lobby ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನೀವಂತೂ ಮಂತ್ರಿಗಳಾಗುವುದಿಲ್ಲ.

(ಗೊಂದಲ)

ಶ್ರೀ ಪಿ.ಎಂ. ನರೇಂದ್ರಸ್ವಾಮಿ:- ಬಳಿಗಾರ್‌ರವರನ್ನು ಮುಖ್ಯಮಂತ್ರಿಯವರ ಕಾರ್ಯದರ್ಶಿ ಹುದ್ದೆಯಿಂದ ಕಿತ್ತು ಹಾಕಿದ್ದು ಯಾವಾಗ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಉಪಾಧ್ಯಕ್ಷರೆ, ನಾನು ಮಾತನಾಡುವುದಿಲ್ಲ.

ಶ್ರೀ ಪಿ.ಎಂ. ನರೇಂದ್ರಸ್ವಾಮಿ:– ಶೋಭಾ ಕರಂದ್ಲಾಜೆಯವರನ್ನು ಕಿತ್ತು ಹಾಕಿದ್ದು ಯಾವಾಗ?

ಉಪಾಧ್ಯಕ್ಷರು:– Opposition Leader ಮಾತನಾಡುವಾಗ ಪದೇ ಪದೇ ಏಳಬಾರದು? Yield ಆದರೆ ಮಾತನಾಡಬೇಕು. ಶೆಟ್ಟರ್‌ರವರೆ, ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:– ಬಹುಶಃ ಇದೊಂದು 'U' turn ಸರ್ಕಾರವೆಂದು ನನಗನಿಸುತ್ತದೆ. ಏಕೆಂದರೆ, ಕೆಲವು ನಿರ್ಧಾರಗಳನ್ನು ಕೈಗೊಳ್ಳುತ್ತಾರೆ. ಮತ್ತೆ ಸ್ವಲ್ಪ ಹಿಂದೆ ಸರಿದುಬಿಡುವುದು. ಹಿಂದೆ ಅಹಿಂದ ವಿದ್ಯಾರ್ಥಿಗಳ ಪ್ರವಾಸ ಎಂದ ಯೋಜನೆ declare ಮಾಡಿದ್ದರು. ಅದೂ ಬಹಳ debate ಆಯಿತು. ವಿದ್ಯಾರ್ಥಿಗಳಲ್ಲಿ ತಾರತಮ್ಯ ಮಾಡುತ್ತೀರೇನೋ, ಸರಿ ಅಲ್ಲವೆಂದು ಬಹಳ discussion ಆಯಿತು. ಹಾಗಾದರೆ, ನೀವು ಅದನ್ನು ಅದೇ ಉದ್ದೇಶ ನಿಮಗಿತ್ತೇ? ಆ ಯೋಜನೆಯಲ್ಲಿದ್ದಿರಾ? ಅಹಿಂದ ವಿದ್ಯಾಥಿಗಳಿಗೇನಾದರೂ priority ಕೊಡುವುದಿದ್ದರೆ implement ಮಾಡಬೇಕಾಗಿತ್ತು. ಸಾರ್ವಜನಿಕ ಅಭಿಪ್ರಾಯ ನೋಡಿದಿರಿ, ಒತ್ತಡ ನೋಡಿದಿರಿ ಪ್ರತಿಭಟನೆ ನೋಡಿ ಆ ಯೋಜನೆಯನ್ನೂ ಹಿಂದೆ ತೆಗೆದುಕೊಂಡಿರಿ. U turn. ಆಮೇಲೆ, ಮೂಢ ನಂಬಿಕೆ ಪ್ರತಿಬಂಧಕ ವಿಧೇಯಕ. ಜಯಚಂದ್ರರವರಂತೂ debate ಮಾಡಿದ್ದೇ ಮಾಡಿದ್ದು. ಪತ್ರಿಕಾಗೋಷ್ಠಿಯಲ್ಲಿ ಹೇಳಿದ್ದೇ ಹೇಳಿದ್ದು. ಮಾಡುತ್ತೇನೆ. ಬಿಡುವುದಿಲ್ಲವೆಂದು ಹೇಳಿಯೇ ಹೇಳಿದರು. ಅದರ ಬಗ್ಗೆ ಸಾರ್ವಜನಿಕವಾಗಿ debate ನಡೆಯಿತು. ಸಾರ್ವಜನಿಕ ಪ್ರತಿಭಟನೆ, ಹೋರಾಟ, ಮಠಾಧೀಶರ ಹೋರಾಟ ಎಲ್ಲಾ ಆಯಿತು. ಆದಮೇಲೆ ಇಲ್ಲ, ನಾವು ಅದನ್ನು ಮಾಡುವುದಿಲ್ಲ ಮಂಡನೆ ಮಾಡುವುದಿಲ್ಲ, ವಾಪಸ್ ತೆಗೆದುಕೊಳ್ಳುತ್ತೇವೆಂದು ಅದನ್ನು ವಾಪಸ್ ತೆಗೆದುಕೊಂಡರು. Open ಆಗಿ ನಾವು ಮಾಡುವುದಿಲ್ಲ ಎಂದು ಹೇಳಿಬಿಟ್ಟರು. ಆಮೇಲೆ, ಕೆಲವು ಮಠಾಧೀಶರು ಅದರ ಪರವಾಗಿ ಹೋರಾಟ ಮಾಡಿದರು, ಸತ್ಯಾಗ್ರಹ ಕುಳಿತರು. ಜಯಚಂದ್ರರವರು ಅಲ್ಲಿಗೆ

ಹೋಗಿ ಬಂದರು. ಜಯಚಂದ್ರ ಹೋದರೋ, ಮತ್ತೊಬ್ಬ Minister ಹೋದರೋ ನನಗೆ ಗುರುತು ಇಲ್ಲ. ಅಲ್ಲಿ ಸಮಾಧಾನ ಮಾಡಿ ಬಂದರು. ಮುಂದಿನ ಅಧಿವೇಶನದಲ್ಲಿ ಮೂಢನಂಬಿಕೆ ಪ್ರತಿಬಂಧಕ ಕಾಯ್ದೆ ತರುತ್ತೇವೆ ಎಂದು ಭರವಸೆ ಕೊಟ್ಟರು. ಅವರದ್ದೂ ಹೀಗಾಯಿತು. ಇದೂ ಹೀಗಾಯಿತು. ಇಲ್ಲಿಯವರೆಗೆ ತರಲಿಲ್ಲ. ಅದು ನಿಮಗೆ ಬಿಟ್ಟಂಥ ವಿಚಾರ. ಅಂದರೆ, 'U turn. ಅದರ ಜೊತೆಗೆ, ಏಕೆ ಜಯಚಂದ್ರರವರು ಮಾಡುತ್ತಿದ್ದಾರೆಂದು ನನಗೆ ಅರ್ಥವಾಗುತ್ತಿಲ್ಲ. ವೈಭವದ ವಿವಾಹ ನಿಯಂತ್ರಣದ ಪ್ರಸ್ತಾಪ. ಮದುವೆಗಳು. ಅದರದ್ದೂ ಜೋರು debate ನಡೆಯಿತು. ಏಕೆ ಹೀಗೆ ಮಾಡುತ್ತಾರೆ? Congress party ಯೊಳಗೇ ಚಾಲು ಆಯಿತು. ಎಷ್ಟೋ ಜನ ವೈಭವದ ಮದುವೆ ಮಾಡುವವರಿದ್ದಾರೆ. ಹೀಗಾಗಿ, ಅದಕ್ಕೂ ಒಂದು ಪ್ರತಿಭಟನೆ start ಆಯಿತು. ಜಯಚಂದ್ರರವರು ಅದನ್ನೂ ವಾಪಸ್ ತೆಗೆದುಕೊಂಡರು. ಮುಂದೆ ಮಠ ಮಾನ್ಯಗಳ ನಿಯಂತ್ರಣ ವಿಧೇಯಕವನ್ನು ಕಳೆದ ಅಧಿವೇಶನದಲ್ಲಿ, ಇನ್ನೇನು ಒಂದು ದಿವಸ ಉಳಿದಿದೆ, last day, ನಾವು well ನಲ್ಲಿದ್ದೆವು, ಧರಣಿ ಸತ್ಯಾಗ್ರಹ ನಡೆಯುತ್ತಿದೆ, ತರಾತುರಿಯಿಂದ ಬೆಳಗಿನ agenda ದಲ್ಲಿ ತಂದರು. ಮಠಗಳ ಮೇಲೆ ನಿಯಂತ್ರಣ ಹೇರುವಂಥ ಕಾನೂನು ತಂದರು. ಆಮೇಲೆ, ಪ್ರತಿಭಟನೆ ಜೋರಾಯಿತು. ನೀವು debate ಮಾಡಬೇಕು. ಮೂಢ ನಂಬಿಕೆ ನಿಷೇಧ ಕಾನೂನನ್ನು ನಾನು ತರುತ್ತೇನೆ, O.K. ನಾನು ಗಟ್ಟಿ ಇದ್ದೇನೆ, ವೈಭವದ ಮದುವೆಗಳ ನಿಷೇಧ, O.K. ನಮ್ಮ ಸರ್ಕಾರದ ಪಾಲಿಸಿ ಇದೆ, ಇಲ್ಲ ಮಠಗಳ ಮೇಲೆ ನಿಯಂತ್ರಣ ಮಾಡುತ್ತೇನೆ, O.K., ನಾವು ಗಟ್ಟಿ ಇದ್ದೇವೆ, ನಾವು cabinet ನಲ್ಲಿ decision ತೆಗೆದುಕೊಂಡಿದ್ದೇವೆ, ನಾವು ತಂದೇ ತರುತ್ತೇವೆ, implement ಮಾಡೇ ಮಾಡುತ್ತೇವೆ, ಅಹಿಂದ ಬಿದ್ಯಾರ್ಥಿಗಳಿಗೆ ವಿಶೇಷವಾದಂಥ ಪ್ರವಾಸ ನಾವು ಮಾಡೇ ಮಾಡುತ್ತೇವೆ, ಏನಿಲ್ಲ, ಎಲ್ಲಾ ವಾಪಸ್ ತೆಗೆದುಕೊಂಡರು. ಈ ಮಠದ ವಿಧೇಯಕವನ್ನು ಯಾವಾಗ ವಾಪಸ್ ತೆಗೆದುಕೊಳ್ಳುತ್ತೀರಿ? ಇದೇ ಅಧಿವೇಶನದಲ್ಲಿ ವಾಪಸ್ ತೆಗೆದುಕೊಳ್ಳುತ್ತೀರಲ್ಲ? ಏಕೆಂದರೆ, ಈಗ ಅದು ಮಂಡನೆಯಾಗಿಬಿಟ್ಟಿದೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಪಶು ಸಂಗೋಪನಾ ಸಚಿವರು):– ಯಾವ ಸಂದರ್ಭದಲ್ಲಿ ತರುವುದಕ್ಕೆ

ಪ್ರಯತ್ನಪಟ್ಟೆವು, ಅದು ಯಾರ ಪಾಪದ ಕೃತ್ಯ ಎನ್ನತಕ್ಕಂಥದ್ದನ್ನು ನಾನು ಆಗ ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಈ ಮಧ್ಯದಲ್ಲಿ ಮಾತನಾಡುವುದು ಸರಿಯಾಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಮತ್ತೆ ಏಕೆ ತಂದಿರಿ? ಮೂಢನಂಬಿಕೆ ಯಾರ ಪಾಪದ ಕೂಸು? ವೈಭವದ ಮದುವೆ ಯಾರ ಪಾಪದ ಕೂಸು?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನೀವು ಹೇಳತಕ್ಕಂಥದ್ದು ಯಾವುದೂ ನಾವು. . . .

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ತರುವುದಕ್ಕೆ ಹೋಗಬೇಡಿ.

ಶ್ರೀ ಟಿ.ಬಿ. ಜಯಚಂದ್ರ:– ಅದು ಚರ್ಚೆಗೆ ಬಿಟ್ಟಿರತಕ್ಕಂಥದ್ದು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಪಾಪ ಆದರೆ ತರುವುದಕ್ಕೇ ಹೋಗಬಾರದು. ಏಕೆ ತರುತ್ತೀರಿ?

(ಗೊಂದಲ)

ಶ್ರೀ ಆರ್. ಅಶೋಕ್:– ನಮ್ಮ ಪಾಪದ ಕೂಸು ಆದರೆ ತನ್ನಿ ನೀವು.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಪಾಪದ ಕೂಸು ಆದರೆ ತರಲೇಬೇಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಅದು ಸರ್ಕಾರದ ಮುಂದಿರುವ ಪ್ರಸ್ತಾಪ. ಅದು ಇನ್ನೂ ಚರ್ಚೆಯ ಹಂತದಲ್ಲಿದೆ.

(ಗೊಂದಲ)

ಶ್ರೀ ಆರ್. ಅಶೋಕ್:- ಧೈರ್ಯವಾಗಿ ತನ್ನಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಿಮಗೇನು ತೊಂದರೆ? ಹಾಗಾದರೆ ತನ್ನಿ. ತರುವುದಕ್ಕೂ capacity ಇಲ್ಲ, ಅದೂ ಇಲ್ಲ.

ಶ್ರೀ ಟಿ.ಬಿ. ಜಯಚಂದ್ರ:- ನಾವು ಯಾವಾಗ ಎಂದು ಹೇಳಿದರೆ,...

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾವು well ನಲ್ಲಿದ್ದಾಗ ಮಂಡನೆ ಮಾಡಿಬಿಟ್ಟರು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ನಾವು ಸಚಿವ ಸಂಪುಟದ ಅನುಮೋದನೆ ಪಡೆದು . . . .

(ಗೋಂದಲ)

ಶ್ರೀ ಜಗದೀಶ್ ಶೆಟ್ಟರ್:- ಆಮೇಲೆ ಸಾರ್ವಜನಿಕ ಅಭಿಪ್ರಾಯ ಎಲ್ಲಾ ನೋಡಿ ವಾಪಸ್.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಮಸೂದೆ ಮಂಡನೆ ಮಾಡುವ ಮಟ್ಟಕ್ಕೆ ನಾವಿನ್ನೂ ಹೋಗಿಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- ಅಂದರೆ ಇದು ಚರ್ಚೆಯಾಗುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್:– 'U' turn. ಇದೂ ಚರ್ಚೆಯಾಗುತ್ತಿದೆ. 'U' turn ಸರ್ಕಾರ, 'U' turn ಜಯಚಂದ್ರರವರು. 'U' turn ಸರ್ಕಾರ ಎಂದು ನನಗನಿಸುತ್ತದೆ ಎಂದರೆ, ಜಯಚಂದ್ರರವರು, cabinet ಗೆ ತರುವುದಿಲ್ಲ, ಇಲ್ಲಿ ಮಂಡನೆ ಮಾಡುತ್ತಾರೆ, ಬಹುಶಃ ಅಲ್ಲಿ ಏನೋ ಒಳಗೆ ನಡೆದಿದೆ, ಇಲ್ಲೇನೋ ನಡೆಯುತ್ತಿದೆ, ಸರ್ಕಾರಕ್ಕೆ ಕೆಟ್ಟ ಹೆಸರು ತರುವುದಕ್ಕೆ ಏನೋ ಒಂದು ಪ್ರಯತ್ನ ನಡೆಯುತ್ತಿದೆ ಎಂದು ನನಗನಿಸುತ್ತದೆ. ಏನೋ ಒಂದು ನಡೆಯುತ್ತಿದೆ. ಅದು ಅವರಿಗೇ ಬಿಟ್ಟಂಥ ವಿಚಾರ. ಅವರು ಅದನ್ನು ಆತ್ಮಾವಲೋಕನ ಮಾಡಿಕೊಳ್ಳಲಿ. ಏನು ನಡೆದಿದೆ ಎನ್ನುವುದು ಅವರಿಗೆ ಬಿಟ್ಟಂಥ ವಿಚಾರ. ಏಕೆಂದರೆ, ಇಷ್ಟೊಂದು, ಒಂದೇ ಆದ ಪ್ರಕರಣವಾದರೆ ಅಡ್ಡಿ ಇಲ್ಲ, ಏನೋ ಸ್ವಲ್ಪ mistake ಆಗಿದೆ ಎನ್ನಬಹುದು.

ಶ್ರೀ ಆರ್. ಅಶೋಕ್:– ಶೆಟ್ಟರ್‌ರವರೆ, ನನಗೆ ತಿಳಿದ ಪ್ರಕಾರ, ಯಾವುದೋ ಪತ್ರಿಕೆಯಲ್ಲಿ ಬಂದಿತ್ತು. ನೀವೂ ಉಪಮುಖ್ಯಮಂತ್ರಿಯಾಗಬೇಕೆಂದು try ಮಾಡುತ್ತಿದ್ದೀರಿ ಎಂದು. ಕೆಲವು ಪತ್ರಿಕೆಗಳಲ್ಲಿ, ತುಮಕೂರು ಪತ್ರಿಕೆಯಲ್ಲಿ ಬಂದಿತ್ತು.

ಶ್ರೀ ಟಿ.ಬಿ. ಜಯಚಂದ್ರ:– ವಾಸ್ತವವಾಗಿ ಏನಿದೆ ಎಂದು ನೋಡಬೇಕು. ಕೇವಲ ಪತ್ರಿಕೆಯಲ್ಲಿ ಬಂದದ್ದನ್ನು ಆಧರಿಸಿ ಮಾತನಾಡುತ್ತಾ ಹೊಗಿಬಿಟ್ಟರೆ . . . .

(ಗೊಂದಲ)

ಶ್ರೀ ಆರ್. ಅಶೋಕ್:– ಆ ತರಹ ಇಲ್ಲವೆಂದು ಹೇಳಿ.

ಶ್ರೀ ಟಿ.ಬಿ. ಜಯಚಂದ್ರ:– ಪತ್ರಿಕೆಯಲ್ಲಿ ಬರುವುದೇ ಎಲ್ಲದಕ್ಕೂ basis?

ಶ್ರೀ ಆರ್. ಅಶೋಕ್:– ಇವತ್ತು ನಿಮಗಿಂತ, ಸರ್ಕಾರಕ್ಕಿಂತ ಚೆನ್ನಾಗಿ ಜನರು ಪತ್ರಿಕೆಗಳನ್ನೇ ನಂಬುತ್ತಾರೆ. ಏನು ಮಾಡುವುದು? ಏನು ಮಾಡುತ್ತಾರೆ? ಏಕೆಂದರೆ, ನೀವು 'U' turn ಆಗುತ್ತೀರಲ್ಲ. ಪತ್ರಿಕೆಯಲ್ಲಿ

ಬರುವುದು ನಿಜ ಎಂದು ತಿಳಿದುಕೊಳ್ಳುತ್ತಾರೆ. ನೀವು straight ಆದರೆ ನಿಮ್ಮನ್ನು ನಂಬುತ್ತಾರೆ.

ಶ್ರೀ ಟಿ.ಬಿ. ಜಯಚಂದ್ರ:– ನಾವು ಯಾವುದೂ 'U' turn ಆಗಿಲ್ಲ.

ಶ್ರೀ ಆರ್. ಅಶೋಕ್:– ಎಲ್ಲಾ 'U' turn. ಈಗ ಶೆಟ್ಟರ್‌ರವರು ಹೇಳಿದರಲ್ಲ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನಾವು ಉತ್ತರ ಕೊಡುವಾಗ ಹೇಳುತ್ತೇವೆ.

(ಗೊಂದಲ)

ಶ್ರೀ ಆರ್. ಅಶೋಕ್:– 5 ವಿಚಾರ, ಶಾಸಕಾಂಗ ಪಕ್ಷದಲ್ಲಿ ಚರ್ಚೆಯಾಯಿತೆ? Cabinet ನಲ್ಲಿ ಚರ್ಚೆಯಾಯಿತೆ?

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ಪ್ರಜಾಪ್ರಭುತ್ವದಲ್ಲಿ ಅದು ಚರ್ಚೆಯಾಗಬೇಕು.

ಶ್ರೀ ಆರ್. ಅಶೋಕ್:– ಅದು implement ಆಗಬೇಕಾಗಿತ್ತು. ಮತ್ತೆ ಏಕೆ ಹಿಂದೆ ಹೋದಿರಿ?

ಶ್ರೀ ಟಿ.ಬಿ. ಜಯಚಂದ್ರ:– ಚರ್ಚೆಯಾಗಿ ಅಂತಿಮವಾಗಿ ಒಂದು conscious opinion ಬಂದಾಗ ಅದು ಮಸೂದೆ ಆಗುತ್ತದೆ.

ಶ್ರೀ ಆರ್. ಅಶೋಕ್:– ಶಾಸಕರೆಲ್ಲ ಮಠ ಮಂದಿರ Act ಗೆ ಒಪ್ಪಿಗೆ ಕೊಟ್ಟಿದ್ದರೆ ನೀವೇಕೆ ಈಗ ಹಿಂದೆ ಹೋಗುತ್ತಿದ್ದೀರಿ?

ಶ್ರೀ ಟಿ.ಬಿ. ಜಯಚಂದ್ರ:– ಅದು ಯಾವ ಹಿನ್ನೆಲೆಯಲ್ಲಿ ಆಯಿತು....

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನೀವು explain ಮಾಡಿ.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:– ನೀವು ಮಾಡಿದ್ದು. 20–20....

(ಗೊಂದಲ)

ಶ್ರೀ ಆರ್. ಅಶೋಕ್:– ಬಿಜೆಪಿಯವರು ಮಾಡಿದ್ದು ಅದಕ್ಕೇ ತರುತ್ತಿದ್ದೇನೆಂದು ಹೇಳಿ Act ಅನ್ನು ತನ್ನಿ.

ಶ್ರೀ ಟಿ.ಬಿ. ಜಯಚಂದ್ರ:– ಆಗ ನಾನು ಹೇಳುತ್ತೇನೆ. ಅದರ ಪರಿಣಾಮ ಏನಾಗುತ್ತದೆಂದು ಹೇಳುತ್ತೇನೆ.

ಶ್ರೀ ಜಗದೀಶ್ ಶೆಟ್ಟರ್:– ಮಠ ಮಾನ್ಯಗಳ ವಿಧೇಯಕ ಏನಿದೆ, ಅದನ್ನು ಯಾವಾಗ ವಾಪಸ್ ತೆಗೆದುಕೊಳ್ಳುತ್ತೀರಿ? ಇದೇ ಅಧಿವೇಶನದಲ್ಲಿ ತೆಗೆದುಕೊಳ್ಳುತ್ತೀರಲ್ಲ? O.K. 'ಮೌನಂ ಸಮ್ಮತಿ ಲಕ್ಷ್ಮಣಂ.' ಏಕೆಂದರೆ ನೀವು ಹೇಳುವುದಿಲ್ಲ. ನಾವು ಅಷ್ಟೇ ಹೇಳಬೇಕಾಗಿದೆ. ಇವತ್ತು ಆಡಳಿತ ಹೇಗೆ ನಡೆಯುತ್ತಿದೆ ಎಂದರೆ ಸರ್ಕಾರದಲ್ಲಿ ಗಾಂಭೀರ್ಯತೆ ಇಲ್ಲ. ಮತ್ತೊಂದಿಲ್ಲ. ಮಂತ್ರಿಗಳು ತಮ್ಮ ಕಡೆ file ಏನು ಬರುತ್ತದೆ, ಅದನ್ನು ಸರಿಯಾಗಿ ನೋಡುವುದಿಲ್ಲ. ಇವತ್ತು ಒಂದು ಚುಕ್ಕೆ ಗುರುತಿಲ್ಲದ ಪ್ರಶ್ನೆ ಬಂದಿದೆ. ಪ್ರಶ್ನೆ ಸಂ.267. ಅರಬೈಲ್ ಶಿವರಾಂ ಹೆಬ್ಬಾರ್‌ರವರು ಪ್ರಶ್ನೆ ಕೇಳಿದ್ದಾರೆ. ಹಕ್ಕುಪತ್ರ ವಿತರಣೆ. ಅರಣ್ಯ ಹಕ್ಕು ಕಾನೂನು 2006 ಜಾರಿಗೆ ಬಂದ ಮೇಲೆ ರಾಜ್ಯದಲ್ಲಿ ಎಷ್ಟು ಜನರಿಗೆ ಹಕ್ಕು ಪತ್ರ ನೀಡಲಾಗಿದೆ? ಇದು ಅರಣ್ಯ ವಿಷಯದಲ್ಲಿ ಬರಬೇಕು. ರಾಜ್ಯದಲ್ಲಿ ಇದುವರೆಗೆ 7700 ಜನರಿಗೆ ಹಕ್ಕುಪತ್ರ ನೀಡಲಾಗಿದೆ. ಇದಕ್ಕೆ ಉತ್ತರ ಯಾರು ಕೊಡುತ್ತಾರೆಂದರೆ. ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಇಲಾಖೆಯ ಸಚಿವರು. ಕೆಳಗೆ ಯಾರು ಸಹಿ ಮಾಡಿದ್ದಾರೆಂದರೆ, ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಮಂತ್ರಿಯಾದ ಆಂಜನೇಯರವರು. ಇದು un-starred question. Starred question ಇದ್ದರೆ ಮತ್ತೆ ಇಲ್ಲಿಯೇ discussion ಆಗುತ್ತಿತ್ತು. ಇದಕ್ಕೆ ಅರಣ್ಯ ಹಕ್ಕು ಕಾನೂನು, ಇದರ ಪ್ರಕಾರ ಹಕ್ಕುಪತ್ರ, ಪಾರಂಪರಿಕ ಅರಣ್ಯ ಅತಿಕ್ರಮಣಕಾರರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ. ಇಲ್ಲಿಯವರೆಗೆ

ಅರಣ್ಯ ಅತಿಕ್ರಮಣಕ್ಕೆ ರಾಜ್ಯದ ಎಷ್ಟು ಜನ ಎಂದು ಪಟ್ಟಿ ನೀಡಲಾಗಿದೆ? ಇದರಲ್ಲಿ ಇದೆಲ್ಲ ಇದೆ. ಅದಕ್ಕೆ ಉತ್ತರ ಕೊಟ್ಟಿದ್ದಾರೆ. ಅದಕ್ಕೆ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿ ಉತ್ತರ ಕೊಟ್ಟಿದ್ದಾರೆ.

ಶ್ರೀ ಟಿ.ಬಿ. ಜಯಚಂದ್ರ:- ಅದು ಅವರಿಗೇ ಇರತಕ್ಕಂಥದ್ದು. ಸಮಾಜ ಕಲ್ಯಾಣ ಇಲಾಖೆಗೇ ಇರತಕ್ಕಂಥದ್ದು.

(ಗೊಂದಲ)

ಶ್ರೀ ಟಿ.ಬಿ. ಜಯಚಂದ್ರ:- Forest Rights Act ಪ್ರಕಾರ ನಾವು ಕೊಟ್ಟಿರತಕ್ಕಂಥದ್ದು Social Welfare Department ಗೆ,

ಶ್ರೀ ಜಗದೀಶ್ ಶೆಟ್ಟರ್:- ಆಯಿತು, ನೀವು defend ಮಾಡಿ.

ಶ್ರೀ ಟಿ.ಬಿ. ಜಯಚಂದ್ರ:- ಅವರೇ ಜಾರಿ ಮಾಡತಕ್ಕಂಥದ್ದು.

ಶ್ರೀ ಜಗದೀಶ್ ಶೆಟ್ಟರ್:- ಆಯಿತು. ಇವತ್ತು ಪ್ರತಿಯೊಂದು ಜಿಲ್ಲೆಯಲ್ಲಿ DC ಗಳು ಹೇಗೆ ನಡೆದುಕೊಳ್ಳುತ್ತಿದ್ದಾರೆ? ಜನಸಾಮಾನ್ಯರ ಜೊತೆ ಬೆರೆತು ಅವರ ಸಮಸ್ಯೆಗಳನ್ನು ತಿಳಿದುಕೊಳ್ಳಲು ಪುರುಸೊತ್ತು ಇಲ್ಲ. ಸ್ಪಂದನೆ ಮಾಡಲಿಕ್ಕೆ ತಯಾರಿಲ್ಲ. ಯಾವುದೋ ಒಂದು agitation ನಡೆಯುತ್ತದೆ, ಏನೋ ಒಂದು ನಿಯೋಗ ತರುತ್ತಾರೆ, ಅದಕ್ಕೂ ಸಹ ಸ್ಪಂದನೆ ಮಾಡಲಿಕ್ಕೆ ತಯಾರಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಜನಸಂಪರ್ಕ ಸಭೆಯನ್ನು ಇಲ್ಲಿ ಮಾಡಿದರು. ವಾರಕ್ಕೆ ಒಮ್ಮೆ, 15 ದಿವಸಗಳಿಗೊಮ್ಮೆ ಮಾಡುತ್ತಾರೆ. ಸಾವಿರಾರು ಸಂಖ್ಯೆಯಲ್ಲಿ, ಹತ್ತಾರು ಸಾವಿರ ಜನರು ಬರುತ್ತಾರೆ. ಅದಕ್ಕೆ ಕಾರಣವೇನೆಂದರೆ, ಅವರು ಸಣ್ಣಪುಟ್ಟ ಕೆಲಸ ಹೇಳಿಕೊಂಡು ಬರುತ್ತಾರೆ. ಅದು ಯಾರೋ DC ಕಡೆ ಆಗುವಂಥದ್ದು, Assistant Commissioner ಕಡೆ ಆಗುವಂಥದ್ದು, ತಹಶೀಲ್ದಾರ್ ಕಡೆ ಆಗುವಂಥದ್ದು. ಅವರೆಲ್ಲ ಮಾನ್ಯ ಮುಖ್ಯಮಂತ್ರಿಯವರ ಕಛೇರಿಗೆ ಬಂದು ಮಾನ್ಯ ಮುಖ್ಯಮಂತ್ರಿಯವರ ಜನತಾ ದರ್ಶನದಲ್ಲಿಯೇ ಬಂದು ಅವರು ಅರ್ಜಿ ಕೊಡಬೇಕೆಂದರೆ, ನಿಮ್ಮ ಆಡಳಿತ ವಿಕೇಂದ್ರೀಕರಣ, ಅಲ್ಲಿ DC, AC, ಅಲ್ಲಿಯ ತಹಶೀಲ್ದಾರ್, ಅಲ್ಲಿಯ CEO ಅಲ್ಲಿಯೇ disposal ಮಾಡಿದ್ದರೆ ಬಹುಶಃ ಇಲ್ಲಿ ಮಾನ್ಯ ಮುಖ್ಯಮಂತ್ರಿಯವರ ಮನೆವರೆಗೆ ಬರುವ

ಅವಶ್ಯಕತೆಯೇ ಇರಲಿಲ್ಲ. ಅಂದರೆ ಆಡಳಿತ ವ್ಯವಸ್ಥೆ ಕೆಟ್ಟುಹೋದಾಗ ಬೆಂಗಳೂರಿನವರೆಗೆ ಬರಬೇಕಾಯಿತು. ಇದು ಇವತ್ತು ರಾಜ್ಯದಲ್ಲಿ ನಡೆಯುತ್ತಿರುವುದು. ಮತ್ತೆ ಎಲ್ಲಿಯವರೆಗೆ ಎಂದರೆ, ಬೀದರ್ ಡಿ.ಸಿ.ಯ ಉದಾಹರಣೆ ಕೊಡುತ್ತೇನೆ. ಎಲ್ಲಿಯವರೆಗೆ ಎಂದರೆ ಅವರ ಕಛೇರಿಗೆ ಜನರು ಯಾರೂ ಬರುವುದು ಬೇಡ ಎನ್ನುವ ರೀತಿಯಲ್ಲಿ ಒಂದು circulation ಹೊರಡಿಸಿದ್ದಾರೆ. ಯಾರೂ ಜನರೇ ಬರುವುದು ಬೇಡ. Delegation, agitation ಬಹಳ ಆಗುತ್ತಿವೆ, ಗದ್ದಲ ಮಾಡುತ್ತಾರೆ, ಅದಕ್ಕೆ ಎಲ್ಲಿಯವರೆಗೆ ಎಂದರೆ, ಬೀದರ್ ಡಿ.ಸಿ. ಪ್ರತಿಬಂಧಕಾಜ್ಞೆ ಮಾಡಿಬಿಟ್ಟಿದ್ದಾರೆ. Section 144 ಹಾಕಿದ್ದಾರೆ. ಜನವರಿ 30ನೇ ತಾರೀಖಿಗೆ ಅಲ್ಲಿಯ ಡಿ.ಸಿ. ಒಂದು order ಮಾಡಿದ್ದಾರೆ. ಅದನ್ನು ಓದುತ್ತೇನೆ. "Dr. P.C. Jaffar, IAS, Deputy Commissioner and District Magistrate, Bidar. In exercising the powers vested with me under Section 144 of Criminal Procedure Code hereby prohibits any form of protest or demonstration in front of the office of the Deputy Commissioner that results in blocking the entry of the people and vehicles to the office of the Deputy Commissioner." ನಾನು 1994 ರಿಂದ ಸದನದಲ್ಲಿದ್ದೇನೆ. ಈ ರೀತಿ ತಮ್ಮ ಕಛೇರಿಗೆ ಎನ್ನುವುದು ನೆಪ. Protest, delegation ಬರಬಾರದು, ಹೋರಾಟ ನಡೆಯಬಾರದು ಈ ಕಾರಣದಿಂದ Section 144 ಹಾಕಿ, ಬಡ ಜನರಿಗೆ ಹೆದರಿಕೆಯಾಗುತ್ತದೆ. ಅಲ್ಲಿಗೆ ಹೋದರೆ Section 144 ಹಾಕಿದ್ದಾರಂತೆ ಎನ್ನುತ್ತಾರೆ. 4 ಜನರಿಗಿಂತ ಜಾಸ್ತಿ ಜನರು ಹೋದರೆ Section 144 ಇದೆ. ನೀವು protest ಮಾಡಿ ಬಿಡಿ, ಆ ನೆಪದ ಮೇಲೆ ಎಲ್ಲರೂ ಹೊರಗೆ ಹಾಕುವುದು. ಜನರು ಹೆದರಿ ಅಲ್ಲಿಗೆ ಯಾರೂ ಹೋಗುವ ಹಾಗೇ ಇಲ್ಲ. ಯಾರೂ ಹೋಗುವ ಹಾಗೇ ಇಲ್ಲ. ಈ ರೀತಿಯಾದ DC order ಹೊರಡಿಸಿ, ತಮ್ಮ ಕಛೇರಿ ಸುತ್ತಮುತ್ತಲೂ ಬರಬಾರದೆಂದು ಮಾಡಿದ್ದಾರೆ. ವಿಧಾನಸಭೆ ಅಧಿವೇಶನ ನಡೆಯುತ್ತಿದೆ, ಬೇರೆ ಟೈಂನಲ್ಲಿ ನೀವು Section 144 ಹಾಕುವುದಿಲ್ಲ, ಅಧಿವೇಶನ ನಡೆದಾಗ 144 Section ಹಾಕುತ್ತೀರಿ. ಯಾರ್ಯಾರೋ ಬಂದು ಇಲ್ಲಿ ಗದ್ದಲ ಮಾಡಬಾರದು, agitation ಇಲ್ಲಿಯವರೆಗೆ ಬರಬಾರದೆಂದು ಹಾಕುತ್ತೀರಿ. O.K. ಅಲ್ಲಿ ಒಂದು

Freedom Park ಅನ್ನು agitation ಮಾಡುವವರಿಗೆ ಮಾಡಿದ್ದೀರಿ. ಬೆಳಗಾವಿಯ ಸುವರ್ಣಸೌಧದಲ್ಲಿ ಅಧಿವೇಶನ ನಡೆಯುವಾಗ ಅಲ್ಲಿ 1 ಕಿ.ಮೀ. Section 144 ಹಾಕಿದ್ದಿರಿ. ಹೊರಗಡೆ ಪ್ರತಿಭಟನೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದಿರಿ. ಹಾಗಾದರೆ, ಈ ಡಿ.ಸಿ. ಬೀದರ್‌ನಲ್ಲಿ alternative ವ್ಯವಸ್ಥೆ ಮಾಡಿದ್ದಾರೆಯೇ? ಏನೂ alternative ಇಲ್ಲ. ನಿಮಗೊಂದು forum ಕೊಡುತ್ತೇನೆ, ಏನೇ ಇದ್ದರೂ ಅಲ್ಲಿಗೇ ತರುತ್ತೇವೆ, ಕಛೇರಿಗೆ ಬರಬೇಡಿ ಎಂದು ಇದೊಂದು ವ್ಯವಸ್ಥೆ ಮಾಡಿ ಮಾಡಿದ್ದರೆ O.K. ನೋಡಿ ಇದರ ಪರಿಣಾಮ ಏನಾಗುತ್ತದೆಂದರೆ ನಾಳೆ ಯಾರೂ ಆ ಡಿ.ಸಿ. ಕಡೆ ಹೋಗುವುದಿಲ್ಲ. ಹೆದರಿಕೆ. ಒಂದು ರೀತಿಯ ಹೆದರಿಕೆ, ಒಂದು ಭೂತ ಬಿಟ್ಟುಬಿಡುವುದು, ಅಂದರೆ ಯಾರೂ ನನ್ನ ಕಡೆ ಬರಬಾರದು. ಈ ರೀತಿಯಾದ ಆಡಳಿತ ನಡೆಯುತ್ತಿದೆ. ಮಾನ್ಯ ಮುಖ್ಯಮಂತ್ರಿಯವರೂ ಇಲ್ಲಿ ಇದ್ದಾರೆ. Immediately ಈ order ಅನ್ನು withdraw ಮಾಡುವುದಕ್ಕೆ ಅವರಿಗೆ direction ಕೊಡಿ. ಇಲ್ಲದಿದ್ದರೆ, ನಾಳೆ ಇದನ್ನೇ follow ಮಾಡಿ ಪ್ರತಿಯೊಂದು ಜಿಲ್ಲೆಯಲ್ಲಿ ಇದೇ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಪ್ರತಿಯೊಬ್ಬ ಡಿ.ಸಿ.ಯೂ ತಮ್ಮ ಆಫೀಸ್‌ಗೆ ಪ್ರತಿಬಂಧಕ ಆಜ್ಞೆ ಇಟ್ಟುಕೊಂಡು ಬರುತ್ತಾರೆ. ತಹಶೀಲ್ದಾರ್ ಹಾಕಿಕೊಳ್ಳುತ್ತಾರೆ. A.C ಹಾಕಿಕೊಳ್ಳುತ್ತಾರೆ. ಇದೊಂದು ಹೊಸ ಸಂಪ್ರದಾಯ ಚಾಲೂ ಆಗಿದೆ. ಇಂಥದ್ದನ್ನು ನಾನು ಎಲ್ಲಿಯೂ ನೋಡಿಲ್ಲ. 1994ರಿಂದ ನಾನು ಶಾಸಕನಾಗಿ ಕೆಲಸ ಮಾಡಿದ್ದೇನೆ. ಮಂತ್ರಿಯಾಗಿ, ಮುಖ್ಯಮಂತ್ರಿಯಾಗಿಯೂ ಕೆಲಸ ಮಾಡಿದ್ದೇನೆ. ಇಂಥ ಡಿ.ಸಿ. ಈ ರೀತಿ Section 144 ಹಾಕಿಕೊಂಡಂಥದ್ದು ನಾನು ನನ್ನ life ನಲ್ಲಿ ನೋಡಿಲ್ಲ. ಇಂಥದ್ದು ನಿಮ್ಮ ಕಾಲದಲ್ಲಿ ನಡೆಯುತ್ತಿದೆ ಎಂದರೆ, ಆಡಳಿತ ವ್ಯವಸ್ಥೆ ಹೇಗಿದೆ, ಯಾವ ರೀತಿ ಕುಸಿದು ಹೋಗಿದೆ ಎಂದು ನೀವು ಅರ್ಥ ಮಾಡಿಕೊಳ್ಳಬೇಕಾಗಿದೆ. ತಕ್ಷಣ ಈ ಆಜ್ಞೆಯನ್ನು....

ಶ್ರೀ ಸಿ.ಟಿ. ರವಿ:- ಶೆಟ್ಟರ್‌ರವರೆ, ಅವರು ಯಾರೂ DC ಗಳಾಗಿಲ್ಲ. District Collector ಗಳಾಗಿದ್ದಾರೆ. ಬ್ರಿಟಿಷರ ಕಾಲದ Collector ಗಳಾಗಿದ್ದಾರೆ. ಆ Collector ಗಳೂ ಹಾಗೇ ಮಾಡುತ್ತಿದ್ದರು. ಯಾರೂ ಚಳವಳಿ ಮಾಡುವ ಹಾಗಿಲ್ಲ ಎನ್ನುತ್ತಿದ್ದರು. ಇವರೂ ಹಾಗೆಯೇ. ಯಾರೂ memorandum ಕೊಡುವ ಹಾಗಿಲ್ಲ, ಚಳವಳಿ ಮಾಡುವ ಹಾಗಿಲ್ಲ.

ಶ್ರೀ ಬಸವರಾಜ ರಾಯರೆಡ್ಡಿ:– ಶೆಟ್ಟರ್‌ರವರೆ, ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಮಾತನಾಡಿ ಎಂದರೆ ಹೀಗೆ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಹೇಳುತ್ತೇನೆ ಸ್ವಲ್ಪ ತಾಳಿ. ರಾಜ್ಯಪಾಲರ ಭಾಷಣದಲ್ಲಿ ಆಡಳಿತ ಸುಧಾರಣೆಯ ಬಗ್ಗೆನೂ ಇದೆ ಅಲ್ಲವೆ?

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಒಳ್ಳೆಯ ಸಲಹೆ ಕೊಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಿಮ್ಮ ಆಡಳಿತ ಸುಧಾರಣೆ ಹೇಗೆ ಇದೆ ಎಂದು ನಾನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಸರ್ಕಾರದ ವೈಫಲ್ಯ ಏನೀದೆ? ಇದರ ಬಗ್ಗೆ ಮಾತನಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ನಾನು ಹೇಳುತ್ತೇನೆ ಬಿಡಿ ನನಗೆ ನೀವು ಕಲಿಸಿ ಕೊಡುವುದು ಬೇಡ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:– ಇದು ಯಾವುದು ಡಿಸಿ ಆಫೀಸ್ ಬಗ್ಗೆ ಹೇಳಿದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಡಿಸಿ ಆಫೀಸ್ ಎಂದರೆ ನಿಮಗೆ ಕಿಮ್ಮತ್ತು ಇಲ್ಲವೆ? ಮುಂಜಾನೆಯಿಂದ ಸಂಜೆಯ ತನಕ ಜನರ problem solve

ಮಾಡುವವರೆ ಡಿಸಿ. ಅದನ್ನು ಬಿಡಿ ನಾನೇನು ಮಾತನಾಡಬೇಕೋ ಅದು ನನಗೆ ಬಿಟ್ಟ ವಿಚಾರ.

(ಗೊಂದಲ)

SRI BASAVARAJ RAYAREDDY:- As the Leader of the Opposition, you are disappointing me.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನೋಡಿ ರಾಯರೆಡ್ಡಿಯವರೆ, ನಾನು ಏನು ಮಾತನಾಡಬೇಕೆಂಬುದು ಅದು ನನಗೆ ಬಿಟ್ಟ ವಿಚಾರ. ನೀವೇನು dictate ಮಾಡುವುದಕ್ಕೆ ಹೋಗಬೇಡಿ. ನಾನು ಏನು ಮಾತನಾಡಬೇಕೆಂಬುದು ನನಗೆ ಗೊತ್ತಿದೆ, ಅರ್ಥವಾಗಿದೆ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ನಾವು ಕೇಳಬೇಕಲ್ಲವೆ? ಸರಕಾರ ರಚನಾತ್ಮಕವಾಗಿ ಕೆಲಸ ಮಾಡಿದೆ. ಇದರಲ್ಲಿ ಈಗ ಆಗಿರುವುದು ಹೇಳಿ ಎಂದರೆ ಯಾವುದೋ ಸಣ್ಣ ಕಾಗೆ, ಗುಬ್ಬಿ ಕಥೆ ಹೇಳಿಕೊಂಡು ಹೋದರೆ ಹೇಗೆ?

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾನು yield ಆಗಿಲ್ಲವೆಂದರೂ ಇವರು ಮಾತನಾಡುತ್ತಾರೆ.

(ಗೊಂದಲ)

ಉಪಾಧ್ಯಕ್ಷರು:- ರಾಯರೆಡ್ಡಿಯವರೆ,

(ಗೊಂದಲ)

SRI BASAVARAJ RAYAREDDY:- No, I am serious.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾನು ಏನು ಮಾತನಾಡಬೇಕೆಂಬುದು ನನಗೆ ಬಿಡಿ. I have not yielded. ನಾನು yield ಆಗಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ರಾಯರೆಡ್ಡಿಯವರೆ, ಹೀಗೆ ಮಾತನಾಡಿ ಎಂದು ಹೇಳಲಿಕ್ಕೆ ಬರುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ನಾನು ಇಲ್ಲವೆಂದು ಹೇಳುವುದಿಲ್ಲ. I am expecting much more. ನಾನು ನಿಮ್ಮಿಂದ ಹೆಚ್ಚು ನಿರೀಕ್ಷೆ ಮಾಡುತ್ತೇನೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ನಾನು yield ಆಗಿಲ್ಲ. ಕೆಟ್ಟ ವಿಚಾರ ನಿಮಗೆ ಬೇಡ, ಒಳ್ಳೆಯ ವಿಚಾರದ ಬಗ್ಗೆಯೂ ಹೇಳುತ್ತೇನೆ. ಏಕೆಂದರೆ, ನಿಮಗೆ ಟೀಕೆ ಮಾಡುವುದಕ್ಕೆ ಸಹಿಸಿಕೊಳ್ಳುವುದಕ್ಕೆ ಆಗುವುದಿಲ್ಲ.

(ಗೊಂದಲ)

ಶ್ರೀ ಸಿ.ಟಿ. ರವಿ:- ಅವರಿಗೆ ಇಷ್ಟವಾಗುವ ಒಳ್ಳೆಯ ವಿಚಾರ ಹೇಳಿ. ರಾಯರೆಡ್ಡಿಯವರನ್ನು ಜಲ್ದಿ ಮಂತ್ರಿಗಳನ್ನಾಗಿ ಮಾಡಿ. ಅವರಿಗೆ ಖುಷಿಯಾಗುವ ವಿಚಾರ. ಅವರನ್ನು ಮಂತ್ರಿಯನ್ನಾಗಿ ಮಾಡದೆ ಮುಖ್ಯಮಂತ್ರಿಗಳು ಅವರಿಗೆ ಪರಮ ಅನ್ಯಾಯ ಮಾಡಿದ್ದೀರಿ, ಹೀಗಾಗಿ ಅವರಿಗೆ ಬೇಗ ಮಂತ್ರಿಯನ್ನಾಗಿ ಮಾಡಿ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ನಾನು ಅದನ್ನು ಕೇಳುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ:- ರಾಯರೆಡ್ಡಿಯವರೆ, ಅವರು ರಾಜ್ಯಪಾಲರ ಭಾಷಣದ ಅನುಗುಣವಾಗಿಯೇ ಮಾತನಾಡುತ್ತಿದ್ದಾರೆ. ಅವರು

ಇಲ್ಲಿ ಏನು ಹೇಳಿದ್ದಾರೆಂದರೆ, "ರಾಜ್ಯದ ಸಮಸ್ತ ನಾಗರೀಕರ ಸರ್ವಾಂಗೀಣ ಅಭಿವೃದ್ಧಿಯನ್ನು ಖಚಿತಪಡಿಸಿಕೊಳ್ಳಲು ಜನಪರ" ಒಂದು ಡಿಸಿ ಆಫೀಸ್‌ನಲ್ಲಿ ಜನರ ಸಮಸ್ಯೆಯನ್ನು ಹೇಳಿಕೊಳ್ಳಲು ಸಾಧ್ಯವಿಲ್ಲವೆಂದರೆ ಜನಪರ ಆಡಳಿತ ಹೇಗೆ ಆಗುತ್ತದೆ? ನಿಮ್ಮ ರಾಜ್ಯಪಾಲರ ಭಾಷಣವನ್ನೇ ಅವರು ಹೇಳುತ್ತಿರುವುದು, ಅದು ಬಿಟ್ಟು ಅವರು ಬೇರೆ ಹೇಳುತ್ತಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಸರಿಯಾಗಿ ಹೇಳಲಿ ಎಂದು ಹೇಳುತ್ತಿದ್ದೇನೆ. ಇದು ಯಾವುದೋ ಸಣ್ಣದು ಕಾಗೆ, ಗುಬ್ಬಿ ಕಥೆ ಹೇಳಿಕೊಂಡು ಹೋದರೆ ಹೇಗೆಂದು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ:- ಇಲ್ಲಿ ಜನಪರ ಎಂದು ಹೇಳುತ್ತೀರಿ, ಇದು ಜನಪರವೇ? ಡಿಸಿ ಯವರು ಜನರನ್ನು ಆಫೀಸ್‌ಗೆ ಬರಲಿಕ್ಕೆ ನಿರ್ಬಂಧ ಹಾಕಿರುವುದು ಜನಪರವೆ? ನೀವೇ ಹೇಳಿ. ನಿಮ್ಮ ರಾಜ್ಯಪಾಲರ ಭಾಷಣವನ್ನು ಉಲ್ಲೇಖಿಸಿಯೇ ಅವರು ಹೇಳುತ್ತಿರುವುದು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ನೋಡಿ, Leader of the Opposition ನಿಂದ ನಾನು ಹೆಚ್ಚಿನ ನಿರೀಕ್ಷೆ ಮಾಡುತ್ತೇನೆ.

(ಗೊಂದಲ)

ಶ್ರೀ ಬಸವರಾಜ ಎಸ್. ಬೊಮ್ಮಾಯಿ:- ರಾಜ್ಯಪಾಲರ ಭಾಷಣದಲ್ಲಿ ನೀವು ಜನಪರ ಎಂದು ಹೇಳಿದಿರಿ. ಇದು ಜನ ವಿರೋಧಿ ಎಂದು ಅವರು ಹೇಳುತ್ತಿರುವುದು.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಇದು ಯಾವುದೋ ಸಣ್ಣದು ಹೇಳಿದರೆ ಆಗುತ್ತದೆಯೇ? ಅವರಿಂದ ಒಳ್ಳೆಯ ಭಾಷಣ ನಿರೀಕ್ಷೆ ಮಾಡುತ್ತೇನೆ.

(ಗೊಂದಲ)

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ರಾಯರೆಡ್ಡಿಯವರೆ, ಈಗೇನು ತಾವು ನಮ್ಮ ವಿರೋಧ ಪಕ್ಷದ ನಾಯಕರಿಗೆ ಒಳ್ಳೆಯ ಸಲಹೆ ಕೊಡಿ, ಹೀಗೆ ಮಾತನಾಡಿ ಎಂದು ಹೇಳುತ್ತಿದ್ದೀರಲ್ಲ, ನಾನು ನಿಮಗೊಂದು ಸಲಹೆ ಕೊಡುತ್ತೇನೆ. ನೀವು ಈ ತರಹ ಹೇಳಿದರೆ ನಿವು ಮಂತ್ರಿಯಾಗುವುದಿಲ್ಲ. ಜಾರಕಿಹೊಳಿಯವರು ಮಾತನಾಡಿದರಲ್ಲ, ಆ ತರಹ ಮಾತನಾಡಿ ಆಗ ನೀವು ಮಂತ್ರಿಯಾಗುತ್ತೀರಿ. ಅಲ್ಲಿಯ ತನಕ ಆಗುವುದಿಲ್ಲ.

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ಮಂತ್ರಿಯ ಬಗ್ಗೆ ನಾನು ಮಾತನಾಡಿಲ್ಲ.

(ಗೊಂದಲ)

ಉಪಾಧ್ಯಕ್ಷರು:- ಆಯಿತು ಬಿಡಿ, ನೀವು ಮಾತನಾಡಿ.

ಶ್ರೀ ಜಗದೀಶ್ ಶೆಟ್ಟರ್:- ಇಂದು ಅಧಿಕಾರಿಗಳು ಯಾವ ರೀತಿ ಕೆಲಸ ಮಾಡುತ್ತಿದ್ದಾರೆ, ಇಂದು ಯಾವ ರೀತಿಯಾಗಿ administration ನಡೆಯುತ್ತಿದೆ ಎನ್ನುವುದು ಇನ್ನೊಂದು ಉದಾಹರಣೆ ತಮಗೆ ಹೇಳಬಯಸುತ್ತೇನೆ. ಉಡುಪಿಯಲ್ಲಿ ಏನಾಗಿದೆ ಎಂದರೆ, ಉಡುಪಿಯ ಶಾಸಕರು ಇಲ್ಲಿ ಇದ್ದಾರೆ. ಉಡುಪಿಯಲ್ಲಿ ಕಳೆದ ಒಂದೂವರೆ ವರ್ಷದಿಂದ 6 ಜನ DC ಗಳು ಬದಲಾಗಿದ್ದಾರೆ. ಹೀಗಾದರೆ ಆಡಳಿತ ಹೇಗೆ ನಡೆಯುವುದು? ಆಡಳಿತ ನಡೆಯುವುದಕ್ಕೆ ಸಾಧ್ಯವೆ ಇಲ್ಲ. 6 ಜನ ಡಿಸಿ ಬದಲಾವಣೆಯಾಗಿರುವ list ಇದೆ. 6 ಜನ DC ಗಳು within one and half year. How the administration will go? Administration ನಡೆಸುವುದಕ್ಕೆ ಸಾಧ್ಯವೇ ಇಲ್ಲ. ಒಬ್ಬ ಡಿಸಿ ಅಲ್ಲಿಗೆ ಹೋಗಿ ನೋಡುವುದರೊಳಗೆ ಮತ್ತೆ ಮೂರು ತಿಂಗಳೊಳಗೆ ಆತನನ್ನು transfer ಮಾಡುತ್ತಾರೆ, ಇನ್ನೊಬ್ಬ ಡಿಸಿ ಹೋದರೂ ಅವರು transfer. ಏಕೆ ಈ ರೀತಿಯಾಗುತ್ತದೆಂದು ನನಗೆ ಅರ್ಥವಾಗುತ್ತಿಲ್ಲ. ಏಕೆ ಈ ರೀತಿಯಾಗಿ administration collapse ಆಗುತ್ತದೆಂದು ನನಗೆ ಅರ್ಥವಾಗುತ್ತಿಲ್ಲ. ಆಡಳಿತ ಬಿಗಿ ಇಲ್ಲವೆಂದರೆ ಮುಗಿದು ಹೋಯಿತು, ಅದು

collapse ಆಗುತ್ತದೆ. ನಿಮ್ಮ ಯಾವ programmes implement ಆಗುವುದಕ್ಕೆ ಸಾಧ್ಯವಿಲ್ಲ.

ಡಾ|| ಖಮರುಲ್ಲಾ ಇಸ್ಲಾಂ:- ತಮ್ಮ ಕಾಲದಲ್ಲಿ Gulbarga DC and Corporation Commissioner change ಆದರು.

ಶ್ರೀ ಜಗದೀಶ್ ಶೆಟ್ಟರ್:- ಗುಲ್ಬರ್ಗದ್ದು ಹೇಳುತ್ತಿಲ್ಲ ನಾನು ಉಡುಪಿಯ ಬಗ್ಗೆ ಹೇಳುತ್ತಿದ್ದೇನೆ. ಆಯಿತು ಆಗಿದ್ದರೆ ಒಳ್ಳೆಯದಾಗಲಿ, ಎಲ್ಲಿ ಆಗಿಲ್ಲ ಅದನ್ನು ನಾನು ಹೇಳುತ್ತಿದ್ದೇನೆ. ಆಮೇಲೆ corruption ಹೇಗೆ ನಡೆಯುತ್ತಿದೆ ಎಂದರೆ rampant, ಎಲ್ಲಾ ಇಲಾಖೆಗಳಲ್ಲಿ rampant. ಪ್ರತಿಯೊಂದು ತಹಶೀಲ್ದಾರ್ ಕಛೇರಿಯಲ್ಲಿ ಏನು ನಡೆಯುತ್ತಿದೆ ಎನ್ನುವುದಕ್ಕೆ ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. Revenue Minister ಇರಬೇಕಾಗಿತ್ತು. ಇಂದು ನಮ್ಮ ರೈತರಿಗೆ ಸರಳವಾಗಿ Record of Rights ಸಿಕ್ಕುತ್ತಿಲ್ಲ. ನಾನು ಈ ಹಿಂದೆಯೂ ಒಂದು case refer ಮಾಡಿ ಹೇಳಿದ್ದೇನೆ. Record of rights ಸರಿಯಿಲ್ಲ. ಎಲ್ಲಿಯವರೆಗೆ ಎಂದರೆ, ಕೆಲವೊಂದು Record of Rights ನಲ್ಲಿ correction ಇವೆ. ಸೋಮಪ್ಪ ಮಲ್ಲಪ್ಪ ಎಂಬುದು ಮಲ್ಲಣ್ಣ ಆಗಿದೆ, ಅದನ್ನು correction ಮಾಡಲಿಕ್ಕೆ ಅರ್ಜಿ ಕೊಟ್ಟು 6 ತಿಂಗಳಿನಿಂದ ಹಿಡಿದು ಒಂದೊಂದು ವರ್ಷವಾದರೂ ಇನ್ನೂ ಅದು correction ಆಗಲಿಲ್ಲ, ಆ ಅರ್ಜಿಗಳು dispose ಆಗಲಿಲ್ಲ. ಹಿಂದಿನ ಅಧಿವೇಶನದಲ್ಲಿಯೂ ನಾವು ಇದನ್ನು ಪ್ರಸ್ತಾಪಿಸಿದೆವು. Revenue Minister ರವರು ಉತ್ತರ ಕೊಟ್ಟು ಈ ಬಗ್ಗೆ ಅದಾಲತ್ ಮಾಡುತ್ತೇವೆಂದು ಹೇಳಿದರು. ಇನ್ನುವರೆಗೂ ಅದನ್ನು ಸರಿಪಡಿಸಲಿಕ್ಕಾಗಿಲ್ಲ. ಕಂದಾಯ ಇಲಾಖೆಯ ತಹಶೀಲ್ದಾರ್ ಕಛೇರಿಗೆ ಜನ ಅಡ್ಡಾಡಿ ಅಡ್ಡಾಡಿ ಸುಸ್ತಾಗಿ ಹೋಗಿದ್ದಾರೆ, ನಿಮಗೆ ಇಡಿ ಶಾಪ ಹಾಕುತ್ತಿದ್ದಾರೆ. ಅದನ್ನು ಸರಿ ಮಾಡಿ ಉತಾರ ಸಿಗುತ್ತಿಲ್ಲ ಇದು ಜನರಿಗೆ ತೊಂದರೆಯಾಗಿರುವುದು. ಇನ್ನು corruption ಎಷ್ಟು rampant ಆಗಿದೆ ಎಂದರೆ ಇತ್ತೀಚಿಗೆ The Hindu ಪತ್ರಿಕೆಯಲ್ಲಿ front page ನಲ್ಲಿ ಯಾವ ರೀತಿಯಾಗಿ corruption ಆಗುತ್ತದೆ ಎನ್ನುವುದರ ಬಗ್ಗೆ ಬಂದಿರುವ ಉದಾಹರಣೆ ಕೊಡುತ್ತೇನೆ. ಒಬ್ಬ ಮಹಾಂತ ಒಕ್ಕುಂಡ ಎನ್ನುವವರು ಆತ

ಅಲ್ಲಿನ Development Authority ಗೆ 675/– ರೂಪಾಯಿ tax ತುಂಬಬೇಕು. ಅಧಿಕಾರಿಗಳು ಸರಕಾರದ ಕೆಲಸ ಮಾಡಿಕೊಡುವುದಕ್ಕೆ ರೊಕ್ಕ ತೆಗೆದುಕೊಳ್ಳುತ್ತಾರೆ. ಸರಕಾರದಿಂದ ಉತಾರ ತೆಗೆದುಕೊಳ್ಳುವುದಕ್ಕೆ, caste certificate ತೆಗೆದುಕೊಳ್ಳುವುದಕ್ಕೆ, ಮತ್ತೊಂದಕ್ಕೆ ಲಂಚ ತೆಗೆದುಕೊಳ್ಳುತ್ತಾರೆ. ಇದು ಉಲ್ಟಾ ಆಗಿದೆ. ಒಕ್ಕುಂಡ ಎನ್ನುವವರೊಬ್ಬರು ಸರಕಾರಕ್ಕೆ ನಾನು ನನ್ನ site ನ tax 675/– ರೂಪಾಯಿ ಹಣ ತುಂಬುತ್ತೇನೆ ಅದಕ್ಕೆ ರಶೀದಿ ಕೊಡಿ ಎಂದು ಹೋಗಿದ್ದಾರೆ. ಅಲ್ಲಿದ್ದಂಥ ಒಬ್ಬ SDC ಅಥವಾ ಯಾರೋ ಒಬ್ಬ ಅಧಿಕಾರಿ 675/– ರೂಪಾಯಿ tax ತುಂಬಿಸಿಕೊಳ್ಳುವುದಕ್ಕೆ 3 ಸಾವಿರ ಲಂಚ ಕೇಳುತ್ತಾನೆ. ನಂತರ ಇದು ಇನ್ನೊಬ್ಬ officer ಗಮನಕ್ಕೆ ಬಂದು, ಆತನ ಕಡೆಗೆ ಹೋದಾಗ ಇದು ಯಾವ ದೊಡ್ಡ ಕೆಲಸ ಬಾ ಎಂದು ಆ tax ತುಂಬಿಸಿಕೊಂಡಿದ್ದಕ್ಕೆ, ಕೆಲವು ಯುವಕರು ಹೋಗಿ ಆ ಅಧಿಕಾರಿಗೆ salute ಹೊಡೆದು ಸನ್ಮಾನಿಸಿರುವ ಬಗ್ಗೆ report ಬಂದಿದೆ. "Fighting corruption the officer in way. ಇಲ್ಲಿ ಇದನ್ನು ಹೇಳಿ ಬಿಡುತ್ತೇನೆ. "It so happened that Mahant okkund frequented the MUDA office to pay property tax of Rs.675/-. He said that almost every officer asked bribe and one of them had even sought Rs.3,000/- to accept the tax and issue a receipt. But when he approached Mr. Talwar and offered Rs.500/- in the belief that his tax will be accepted, Mr. Talwar politely declined saying that Sir, I am not here for this kind of work. Please do not pay me this. I do not do my work for such money" ಎಂದು ಆತ ಹೇಳಿ ಆ ಹಣವನ್ನು ತುಂಬಿಸಿಕೊಳ್ಳುತ್ತಾನೆ. ಆಗ ಕೆಲವು ಯುವಕರು ಹೋಗಿ ಆತನಿಗೆ ಸನ್ಮಾನ ಮಾಡಿರುವುದರ ಬಗ್ಗೆ ಇಲ್ಲಿ ಹೇಳಿದ್ದಾರೆ. ಅಂದರೆ, ಸರಕಾರಕ್ಕೆ tax ರೂಪದ ಹಣ ತುಂಬಿಸಿಕೊಳ್ಳುವುದಕ್ಕೂ corruption. ಇದೊಂದು ಹೊಸ ಪದ್ಧತಿ start ಆಗಿದೆ. ಇದನ್ನು ನೀವು correction ಮಾಡಿ. ಇದೊಂದು ಸಣ್ಣ example ಕೊಟ್ಟೆ. ಇದು ಎಲ್ಲಾ ಕಡೆ ನಡೆಯುತ್ತಿದೆ. ಯಾವುದೇ Corporation ಇರಲಿ, ಅಲ್ಲಿ Corporation tax, ನಮ್ಮ ಹುಬ್ಬಳ್ಳಿ–ಧಾರವಾಡ ಹಿಡಿದುಕೊಂಡು ಎಲ್ಲೆಲ್ಲಿ Corporations ಇವೆ, ಎಲ್ಲಾ ಕಡೆಯೂ ಹೇಳುತ್ತೇನೆ. ಇಂದು ನೀವು tax

ತುಂಬುವುದಕ್ಕೆ ಹೋದರೆ ಒಂದು ವಾರಗಟ್ಟಲೆ ಆಡ್ಡಾಡಬೇಕಾಗುತ್ತದೆ. ಅವರು tax ನ್ನು ಲಘೂನ ತುಂಬಿಸಿಕೊಳ್ಳುವುದಿಲ್ಲ. ಹೀಗಾಗಿ ಇಂದು ಸ್ಥಳೀಯ ಸಂಸ್ಥೆಗಳಲ್ಲಿ revenue ಏಕೆ collect ಆಗುತ್ತಿಲ್ಲ? ಅಧಿಕಾರಿಗಳು tax ತುಂಬಿಸಿಕೊಳ್ಳುವುದಕ್ಕೆ ತಯಾರಿಲ್ಲ. ಅದಕ್ಕೂ they accept bribe. This is failure of the administration. ಇದನ್ನು ನೀವು ಅರ್ಥ ಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಇನ್ನೊಂದು ವಿಚಾರ ಹೇಳುವುದಾದರೆ, ಇದೇ ರೀತಿಯಾಗಿ ಹಲವಾರು incidents ಇವೆ. ಅವುಗಳನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಈ ರೀತಿಯಾಗಿ administration collapse ಆಗಿರುವುದನ್ನು ನಾವು ನೋಡುತ್ತಿದ್ದೇವೆ. ಮತ್ತೊಂದು ವಿಷಯ ಏನೆಂದರೆ, ಇಲ್ಲಿ ಬೆಂಗಳೂರು ದಕ್ಷಿಣ ತಾಲ್ಲೂಕಿನ ತಹಶೀಲ್ದಾರ್ ಲೋಕಾಯುಕ್ತಕ್ಕೆ ಸಿಕ್ಕಿ case ಆಗಿ ಅವನನ್ನು suspend ಮಾಡಿದ್ದರು, ಅವನು jail ಗೆ ಹೋಗಿದ್ದ. ಅವನು suspend ಆಗಿದ್ದು ಇನ್ನು ಅದು final ಆಗಿಲ್ಲ. ಅದು ಇನ್ನು ನಿಖಾಲೆ ಆಗಿಲ್ಲ, ಅದು ಇನ್ನು clear ಆಗಿಲ್ಲ, ಆತನನ್ನು ಮತ್ತೆ ಬೆಂಗಳೂರು ಉತ್ತರ ತಾಲ್ಲೂಕಿನ ತಹಶೀಲ್ದಾರ್ ಆಗಿ ನೇಮಿಸುತ್ತಾರೆ. ಮತ್ತೆ ಇಲ್ಲಿ ಬೆಂಗಳೂರಿಗೆ ಹಾಕುತ್ತಾರೆ, ಆತನನ್ನು ಎಲ್ಲೋ ಒಂದು ಕಡೆಗೆ posting ಮಾಡಬೇಕಾಗಿತ್ತು. Non-executive post ಗೆ ಹಾಕಬಹುದಾಗಿತ್ತು. ಅದು ಬಿಟ್ಟು ಯಾರು corruption ಮಾಡಿ ಲೋಕಾಯುಕ್ತಕ್ಕೆ ಸಿಕ್ಕು ಜೈಲಿಗೆ ಹೋಗಿ suspend ಆಗಿದ್ದಾನೆ, ಅಂಥವನನ್ನು ಮತ್ತೆ revoke ಮಾಡುತ್ತಾರೆ. ಮೊದಲು ಬೆಂಗಳೂರು ದಕ್ಷಿಣ ತಾಲ್ಲೂಕಿಗೆ ಇದ್ದವನನ್ನು ಬೆಂಗಳೂರು ಉತ್ತರ ತಾಲ್ಲೂಕಿಗೆ ತಹಶೀಲ್ದಾರ್ ಆಗಿ ಬಂದಿದ್ದಾನೆ. This is the fate of your Government. ಈ ರೀತಿಯಾಗಿ ಸರಕಾರ ನಡೆಸಿದರೆ ನೀವು ಯಾವ ರೀತಿಯಾಗಿ ಸರಕಾರ ನಡೆಸುತ್ತೀರಿ ಎನ್ನುವುದನ್ನು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇಂಥ ಪರಿಸ್ಥಿತಿ ಇದೆ. ಅವರು ಮತ್ತೊಂದು ಅಂಶ ಹೇಳಿದರು. ಇತ್ತೀಚೆಗೆ ಇ–ಆಡಳಿತ ಕೇಂದ್ರದ ಕರ್ನಾಟಕದ Mobile-one ಎಂದು ತಂದರು. ಸಕಾಲ ಯೋಜನೆ ನಮ್ಮ ಸರಕಾರದ ಅವಧಿಯಲ್ಲಿ ತೆಗೆದುಕೊಂಡು ಬಂದಂಥ ಯೋಜನೆ. ಆ ಸಕಾಲ ಯೋಜನೆಯನ್ನು ತಾವು ಮುಂದುವರಿಸಿದಿರಿ. I appreciate you. ಯಾವುದೇ

ಸರಕಾರ ಒಳ್ಳೆಯ ಯೋಜನೆಯನ್ನು ತಂದಾಗ ಅದನ್ನು ಮುಂದುವರಿಸುವುದು ಮುಂದಿನ ಸರ್ಕಾರದ ಕರ್ತವ್ಯ. ತಾವು ಮಾಡಿದಿರಿ. I appreciate it. ಅದರೊಳಗೆ ಇತ್ತೀಚೆಗೆ ತಾವು 3,572 ಸೇವೆಗಳನ್ನು ಅದರಲ್ಲಿ add ಮಾಡಿದಿರಿ. ಮೊಬೈಲ್ ದೂರವಾಣಿಯ ಮೂಲಕ 4,000 ಕ್ಕೂ ಹೆಚ್ಚು ಸೇವೆಗಳನ್ನು ನೀಡುವುದಾಗಿ ಇ–ಆಡಳಿತ ಕೇಂದ್ರ ಎಂದು ನೀವು ಹೇಳಿಕೊಂಡಿದ್ದೀರಿ. ಅದರ ಪ್ರಕಾರ ಇಲ್ಲಿಯವರೆಗೆ ಬಂದಿರುವುದು, Mobile-one app ನಲ್ಲಿ ಎಲ್ಲಿ ಹುಡುಕಿದರೂ 4,000 ಸೇವೆಗಳ ಮಾಹಿತಿ ಸಿಕ್ಕುವುದಿಲ್ಲ. ಆ app ನಲ್ಲಿ 4,000 services ಎಲ್ಲಿವೆ ಎಂದು ಸಿಗುವುದಿಲ್ಲ. ಇಲ್ಲಿಯವರೆಗೆ ಅದರ ಮೂಲಕ payment ಆಗಿದ್ದು ವಿದ್ಯುತ್ ಮತ್ತು ನೀರಿನ ಬಿಲ್ ಮಾತ್ರ. ನೀವು start ಮಾಡಿದ ಮೇಲೆ 74 ಲಕ್ಷ ಮಾತ್ರ payment ಆಗಿದೆ. ಅಂದರೆ, ಇದರ ಬಗ್ಗೆ ಜನರಲ್ಲಿ ಜಾಗ್ರತೆ ಮೂಡಿಸಬೇಕು ಮತ್ತು ಜನರಲ್ಲಿ awareness ಮೂಡಿಸಬೇಕು. ಈ ಯೋಜನೆ ಸರಿಯಾಗಿ ಅನುಷ್ಠಾನಗೊಂಡರೆ ಮಾತ್ರ ಜನ ಇದನ್ನು ಬಳಕೆ ಮಾಡುವುದಕ್ಕೆ ಸಾಧ್ಯವಿದೆ, ಇದು ಆಗುತ್ತಿಲ್ಲ. ಇವತ್ತಿನ ದಿವಸ focus ಮಾಡುತ್ತೀರಿ. ಹಾಗೆಯೇ ಜಾಹಿರಾತು ಸಹ ಕೊಡುತ್ತೀರಿ. ಆದರೆ, ಅದು ಅನುಷ್ಠಾನವಾಗುತ್ತಿಲ್ಲವೆಂಬುದು ಈ ಸಂದರ್ಭದಲ್ಲಿ ನಾನು ಹೇಳುವುದಕ್ಕೆ ಬಯಸುತ್ತಿದ್ದೇನೆ. ಮತ್ತೆ ನಿಮ್ಮ performance ಬಗ್ಗೆ ಹೇಳುತ್ತೇನೆ. ಆ ಇಲಾಖೆಯಲ್ಲಿ ಈ ರೀತಿಯಾಗಿವೆ ಈ ಇಲಾಖೆಗಳಲ್ಲಿ ಆ ರೀತಿಯಾಗಿವೆ ಎಂದು ಬಹಳಷ್ಟು ವಿಚಾರಗಳನ್ನು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದೀರಿ, ಕೆಲವೊಂದು ವಿಷಯವನ್ನು ನಾನು reference ಮಾಡುತ್ತೇನೆ. ಆಗ ನಿಮಗೊಂದು idea ಬರುತ್ತದೆ. ನಿಮ್ಮ ಸರ್ಕಾರ ಯಾವ ರೀತಿ ನಡೆಯುತ್ತಿದೆ ಎಂದರೆ, ಒಂದು ಕಡೆ administration ಸಹ ಇಲ್ಲ. ಮತ್ತೊಂದು ಕಡೆ ಕಾನೂನು ಸುವ್ಯವಸ್ಥೆ ಕೂಡ ಹದಗೆಟ್ಟಿದೆ. ಆಡಳಿತ ಕುಸಿದು ಹೋಗಿದೆ ಮತ್ತೆ ಇದರ ಜೊತೆಗೆ ಮಂತ್ರಿಗಳು ಕೆಲಸ ಮಾಡುತ್ತಿಲ್ಲವೆಂಬ ಮಾತು ಹಿಂದೆ ಹೇಳಿದ್ದಕ್ಕೆ ನಿಮಗೆ ಬೇಜಾರು ಆಯಿತು. ಎಲ್ಲಾ ಮಂತ್ರಿಗಳು ಎಂದು ನಾನು ಹೇಳುವುದಿಲ್ಲ. ಆದರೆ, ಕೆಲವು ಮಂತ್ರಿಗಳು ಕೆಲಸ ಮಾಡುತ್ತಿಲ್ಲ, performance ಇಲ್ಲ, ಅಸಡ್ಡೆಯಿಂದ ಕೆಲಸ ಮಾಡುತ್ತಿದ್ದಾರೆಂದು ನಿಮ್ಮ ಶಾಸಕರು ಹೇಳಿರುವುದು ಪತ್ರಿಕೆಯಲ್ಲಿ ಬಂದಿರುವುದು record ಇದೆ.

ಆದರೆ, ಅದು ಸುಳ್ಳು ಎಂದು ಹೇಳುತ್ತೀರಿ. ಅದನ್ನು ಒಪ್ಪಿಕೊಳ್ಳಿ. ಆದರೆ, ನಿಜ ಸ್ಥಿತಿ ಏನೆಂಬುದನ್ನು ನಿಮ್ಮ ನಿಮ್ಮ ಇಲಾಖೆಗೆ ಹೋಗಿ ನೋಡಿದಾಗ ಗೊತ್ತಾಗುತ್ತದೆ. ಹಿಂದೆ ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್‌ನಲ್ಲಿ ಘೋಷಣೆ ಮಾಡಿರುವುದು ಎಷ್ಟು implement ಆಗಿದೆ ಎಂದು ಮತ್ತು ಅದಕ್ಕೆ ಎಷ್ಟು ಹಣ ಬಿಡುಗಡೆ ಆಗಿದೆ ಎಂದು ಹಾಗೆಯೇ ಎಷ್ಟು performance ಆಗಿದೆ ಎಂಬುದನ್ನು ನೋಡಿದಾಗ ನಿಮಗೆ ಅದು ಅರ್ಥವಾಗುವುದಕ್ಕೆ ಸಾಧ್ಯವಿದೆ. ರೇಷ್ಮೆ ಇಲಾಖೆಯ ವಿಷಯ ಹೇಳುವುದಕ್ಕೆ ಬಯಸುತ್ತೇನೆ. 1982–95ನೇ ಸಾಲಿನಲ್ಲಿ Indo-Dutch ಯೋಜನೆಯಲ್ಲಿ 1027 ರೇಷ್ಮೆ ಬೆಳೆಗಾರರು ಮತ್ತು 100 ಬಿಚ್ಚಣಿಕೆದಾರರು ಪಡೆದಿರುವ ಸಾಲವನ್ನು ಮನ್ನಾ ಮಾಡುವುದಕ್ಕಾಗಿ 5 ಕೋಟಿ ರೂಪಾಯಿ ಮೀಸಲಾಗಿದೆ ಎಂದು ಹೇಳಿದ್ದೀರಿ. ಆದರೆ, ಇದುವರೆಗೂ ಸಾಲ ಮನ್ನಾ ಆಗಿಲ್ಲ. ರೇಷ್ಮೆ ಉತ್ಪಾದಕತೆ ಮತ್ತು ಉತ್ಪಾದನೆ ಹೆಚ್ಚಿಸುವ ಉದ್ದೇಶಕ್ಕಾಗಿ ಉದ್ದಿಮೆಶೀಲರನ್ನು ತೊಡಗಿಸಲು 100 ಗ್ರಾಹಕರ ಸೇವಾ ಕೇಂದ್ರಗಳನ್ನು ಆಯೋಜಿಸಲು ಉದ್ದೇಶಿಸಿ ಅದಕ್ಕಾಗಿ ಶೇಕಡ 90ರಷ್ಟು ಸಹಾಯಧನವನ್ನು ಒದಗಿಸಲು 1 ಕೋಟಿ ನೀಡಲಾಗುವುದೆಂದು ಹೇಳಲಾಗಿತ್ತು. ಆದರೆ, ಆ ಕಾರ್ಯಕ್ರಮ ಕೂಡ ಅನುಷ್ಠಾನ ಆಗಲಿಲ್ಲ. ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಮಾರಾಟದಲ್ಲಿ ಪಾರದರ್ಶಕ ತರಲು ಇ–ಹರಾಜು ಪದ್ಧತಿಯನ್ನು ಅಳವಡಿಸುವುದಾಗಿ ಹೇಳಿದ್ದೀರಿ. ಆದರೆ, ಅದೂ ಸಹ ಅನುಷ್ಠಾನಕ್ಕೆ ಬರಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ಬೆಳಗಾವಿ ಅಧಿವೇಶನದಲ್ಲಿ ಒಂದು ವಿಷಯ ಹೇಳಿದರು. ಅದೇನೆಂದರೆ, 5 ವರ್ಷದ ಅವಧಿ ಮುಗಿದಿರುವುದರಿಂದ ಡಾ॥ ನಂಜುಂಡಪ್ಪ ವರದಿ ಸರಿಯಾಗಿ ಅನುಷ್ಠಾನ ಆಗಿದೆಯೋ ಅಥರ ಇಲ್ಲವೋ ಎಂದು ಮತ್ತು ಅದಕ್ಕೆ ಎಷ್ಟು ಖರ್ಚು ಆಗಿದೆ ಎಂಬ ಬಗ್ಗೆ review ಮಾಡಿ ಧಾರವಾಡದ CMDR ಗೆ ಕಳುಹಿಸುತ್ತೇವೆಂದು ಹೇಳಿದರು. ಆದರೆ, ಇದುವರೆಗೂ ಕಳುಹಿಸಿಲ್ಲ. ಇದರ ಬಗ್ಗೆ CMDR ನವರು study ಯನ್ನು ಸಹ ಪ್ರಾರಂಭ ಮಾಡಿಲ್ಲ. ಆದ್ದರಿಂದ, ಈ ಭರವಸೆ ಹಾಗೆಯೇ ಉಳಿದಿದೆ. ಈ ರೀತಿಯಾಗಿ ಎಲ್ಲಾ ಭರವಸೆಗಳು ಹಾಗೆಯೇ ಉಳಿದುಕೊಂಡಿವೆ. 371(ಜೆ) ಗೆ ಸಂಬಂಧಪಟ್ಟಂತೆ ಹೈದರಾಬಾದ್–ಕರ್ನಾಟಕ ಪ್ರಾಧಿಕಾರಕ್ಕೆ ಮಾನ್ಯ ಖಮರುಲ್ ಇಸ್ಲಾಂನವರು

ಅಧ್ಯಕ್ಷರಾಗಿದ್ದಾರೆ. 600 ಕೋಟಿ ರೂಪಾಯಿಯನ್ನು ಅದಕ್ಕಾಗಿ ಒದಗಿಸಿದ್ದೇವೆಂದು ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದಾರೆ. ಆದರೆ, ಇಲ್ಲಿಯವರೆಗೆ ಕೇವಲ 300 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಆಗಿದೆ. ಅದರಲ್ಲಿ 116 ಕೋಟಿ ರೂಪಾಯಿ ಮಾತ್ರ. ಇಲ್ಲಿಯವರೆಗೆ ಖರ್ಚು ಮಾಡಲಾಗಿದೆ. ಇನ್ನೇನು 2–3 ಮೂರು ತಿಂಗಳು ಮಾತ್ರ ಉಳಿದುಕೊಂಡಿದೆ. ಮಾರ್ಚ್ ತಿಂಗಳಲ್ಲಿ ಮುಂದಿನ ಬಜೆಟ್ ಮಂಡನೆ ಮಾಡಬೇಕು. ಆದ್ದರಿಂದ, ಉಳಿದ ಹಣವನ್ನು ಖರ್ಚು ಮಾಡುವುದಕ್ಕೆ ಆಗುತ್ತದೆಯೇ ಎಂದು ಮಾನ್ಯ ಖಮರುಲ್ ಇಸ್ಲಾಂನವರನ್ನು ಕೇಳುವುದಕ್ಕೆ ಬಯಸುತ್ತೇನೆ. ಹೈದರಾಬಾದ್–ಕರ್ನಾಟಕ ಮೊದಲೇ ಹಿಂದುಳಿದಿದೆ. 600 ಕೋಟಿ ರೂಪಾಯಿ ಬಂದಿರುವುದನ್ನು ನಿಮಗೆ ಖರ್ಚು ಮಾಡುವುದಕ್ಕೆ ಆಗಿಲ್ಲವೆಂದರೆ ನಿಮ್ಮದು ಏನು administration ಎಂದು ಹೇಳಬೇಕು? ಕೇವಲ 116 ಕೋಟಿ ಖರ್ಚು ಮಾಡಿ ಉಳಿದ ಹಣವನ್ನು ಖರ್ಚು ಮಾಡುವುದಕ್ಕೆ ಆಗಿಲ್ಲವೆಂದರೆ Article 371(ಜೆ) ಏತಕ್ಕೆ ಬೇಕು? ಅದನ್ನು ಅನುಷ್ಠಾನ ಮಾಡುವುದಕ್ಕೆ ಆಗಿಲ್ಲ. This is the administration. ಮಾನ್ಯ ಖಮರುಲ್ ಇಸ್ಲಾಂನವರೆ, ತಾವು ಆಮೇಲೆ ಹೇಳಿ. ನಿಮ್ಮ administration lapses ಆಗಿದೆಯೋ ಅಥವಾ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. At any cost ನೀವು ಖರ್ಚು ಮಾಡಬೇಕು. 300 ಕೋಟಿ ರೂಪಾಯಿ ಬಂದಾಗ ನೀವು ಖರ್ಚು ಮಾಡಬೇಕಾಗಿತ್ತು. Whatever may be there. ಮಾನ್ಯ ರಾಜ್ಯಪಾಲರು ಒಪ್ಪಿಗೆ ಕೊಟ್ಟಿದ್ದಾರೆಯೋ ಅಥವಾ ಇಲ್ಲವೋ, file ಅಡ್ಡಾಡುತ್ತಿದೆಯೋ ಎಂಬ ಬಗ್ಗೆ ಗೊತ್ತಿಲ್ಲ. ಇವತ್ತಿನ ದಿವಸ file ವರ್ಷಗಟ್ಟಲೆ ಅಡ್ಡಾಡಿಕೊಂಡು ಇರುತ್ತವೆ. ಈ ರೀತಿ ಮಾಡಿಕೊಂಡು ಕುಳಿತರೆ ಖರ್ಚು ಮಾಡುವುದಕ್ಕೆ ನಿಮಗೆ ಆಗುವುದಿಲ್ಲ. ರಾಜ್ಯಪಾಲರ ಭವನಕ್ಕೆ ಹೋಗಿ ಕುಳಿತುಕೊಂಡು ಮಾಡಿಸಿ. ಈ ಕೆಲಸವನ್ನು ಏತಕ್ಕೆ ಮಾಡುವುದಿಲ್ಲ? Administration ಕೆಲಸ ಅಂದರೆ ಈ ಕೆಲಸವೆಲ್ಲವನ್ನು ಮಾಡಬೇಕು. ಕೇವಲ 116 ಕೋಟಿ ರೂಪಾಯಿ ಖರ್ಚು ಮಾಡಿದರೆ ಹೇಗೆ? ಈ ರೀತಿಯಾದರೆ ಹೈದರಾಬಾದ್–ಕರ್ನಾಟಕ ಯಾವಾಗ ಉದ್ದಾರವಾಗಬೇಕು? ಈ ರೀತಿಯಾದರೆ ಸಾಧ್ಯವೇ ಇಲ್ಲ. ಮಲೆನಾಡು ಪ್ರದೇಶ ಅಭಿವೃದ್ಧಿಗೆ 38 ಕೋಟಿ ರೂಪಾಯಿ ಮೀಸಲಾಗಿಟ್ಟಿದ್ದೀರಿ. ಆದರೆ, ಇಲ್ಲಿಯವರೆಗೆ ಕೇವಲ 19 ಕೋಟಿ

ರೂಪಾಯಿ ಮಾತ್ರ ಬಿಡುಗಡೆ ಆಗಿದೆ. ಅದರಲ್ಲಿ ಕೇವಲ 10 ಕೋಟಿ ರೂಪಾಯಿ ಮಾತ್ರ ಖರ್ಚು ಮಾಡಿದ್ದೀರಿ. ಅಂದರೆ, ಕೇವಲ 36% ಪರ್ಸೆಂಟ್ ಮಾತ್ರ ಖರ್ಚು ಮಾಡಿದ್ದೀರಿ. ಈಗ ನಾವು ಫೆಬ್ರವರಿ ತಿಂಗಳಲ್ಲಿ ಇದ್ದೇವೆ. ಮಾರ್ಚ್-ಏಪ್ರಿಲ್ ತಿಂಗಳು ಬಂದರೆ ಆನಂತರ ಉಳಿದ ಹಣವನ್ನು ಎಲ್ಲಿ ಖರ್ಚು ಮಾಡುತ್ತೀರಿ. ನಿಮ್ಮ ಹಣೆಬರಹ ಏನಾಗಿದೆ ಎಂದು ನಿಮ್ಮ performance ಅನ್ನು ಹೇಳುತ್ತಿದ್ದೇನೆ. ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಬಜೆಟ್‌ನಲ್ಲಿ 20 ಕೋಟಿ ರೂಪಾಯಿ ಕೊಟ್ಟಿದ್ದೀರಿ. ಈಗ 10 ಕೋಟಿ ಬಿಡುಗಡೆ ಮಾಡಿದ್ದೀರಿ. ಇದರಲ್ಲಿ ಎಷ್ಟು ಖರ್ಚು ಆಗಿದೆ ಎಂದು ಗೊತ್ತಿಲ್ಲ. ಯೋಜನಾ ಇಲಾಖೆಯ ಒಟ್ಟು ಖರ್ಚು ಕೇವಲ 31% ಮಾತ್ರ ಆಗಿದೆ. ಈ ರೀತಿಯಾಗಿ ಇನ್ನೂ ಕೆಲವು ಇಲಾಖೆಗಳ ಬಗ್ಗೆ ಹೇಳುತ್ತೇನೆ. ನೀರಾವರಿ ಯೋಜನೆಗೋಸ್ಕರ ಜಲಸಂಪನ್ಮೂಲ ಇಲಾಖೆಗೆ 10,000 ಕೋಟಿ ರೂಪಾಯಿಯನ್ನು ಮಾನ್ಯ ಮುಖ್ಯ ಮಂತ್ರಿಗಳು ಕೊಟ್ಟಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಗೆ 10,000 ಕೋಟಿ ರೂಪಾಯಿ ಕೊಡುತ್ತೇನೆಂದು ಹಿಂದೆ ತಾವು ಭರವಸೆ ಕೊಟ್ಟಿದ್ದೀರಿ ಎಂದು ಹೇಳಿದ್ದೇವೆ. ಆದರೆ, ಇಡೀ ರಾಜ್ಯಕ್ಕೆ 10,000 ಕೋಟಿ ರೂಪಾಯಿ ಎಂದು ಅವರು ಹೇಳಿದರು. ನಾವು "ಕಾಂಗ್ರೆಸ್ ನಡಿಗೆ ಕೃಷ್ಣಾ ಕಡೆಗೆ" ಎಂದು ಹಿಂದೆ ಪಾದಯಾತ್ರೆ ಮಾಡಿದಾಗ 10,000 ಕೋಟಿ ರೂಪಾಯಿ ಎಂದು ಹೇಳಿಲ್ಲ, ಇಡೀ ರಾಜ್ಯಕ್ಕೆ ಎಂದು ಹೇಳಿದ್ದೀರಿ. ಆ ದಿನ ತಾವು ಹೇಳಿರುವಂತಹ ಹೇಳಿಕೆಗಳು ಎಲ್ಲಾ ಪತ್ರಿಕೆಗಳಲ್ಲಿ ಬಂದಿವೆ. ಆದರೂ ಸಹ ನೀವು deny ಮಾಡುತ್ತಿದ್ದೀರಿ. ಆದ್ದರಿಂದ, ನಾವೇನು ಮಾಡುವುದಕ್ಕೆ ಆಗುವುದಿಲ್ಲ. ಆದರೆ, ಈಗ ನೀರಾವರಿ ಇಲಾಖೆಗೆ 10,000 ಕೋಟಿ ರೂಪಾಯಿ ಬಜೆಟ್‌ನಲ್ಲಿ ನಿಗದಿಯಾಗಿತ್ತು. ಆದರೆ, 4,917 ಕೋಟಿ ರೂಪಾಯಿ ಮಾತ್ರ ಬಿಡುಗಡೆ ಆಗಿದೆ. ಇದರಲ್ಲಿ ಎಷ್ಟು ಖರ್ಚು ಆಗಿದೆ ಎಂದು ಉತ್ತರ ಹೇಳುವಂಥ ಸಂದರ್ಭದಲ್ಲಿ ಮಾನ್ಯ ಎಂ.ಬಿ. ಪಾಟೀಲ್‌ರವರು ಹೇಳಬೇಕು. ಇವತ್ತಿನ ದಿವಸ 50% ಸಹ ಖರ್ಚಾಗಿಲ್ಲ. ಹಾಗಾದರೆ, ಯಾವಾಗ ಕೆಲಸ ಮಾಡುತ್ತೀರಿ? ಇನ್ನು ಎರಡು ತಿಂಗಳಲ್ಲಿ ಉಳಿದ 50% ಖರ್ಚು ಮಾಡುತ್ತೀರಾ? ಈ ರೀತಿಯಾದರೆ ಜನರಿಗೆ ನೀರಾವರಿ ಸೌಲಭ್ಯ ಕೊಡುವುದಕ್ಕೆ ಸಾಧ್ಯವಿದೆಯೇ? ಕೆರೆಗಳಿಗೆ ನೀರು ತುಂಬುವಂಥ

ಕೆಲಸ ಕೂಡ ಇನ್ನೂ ಪ್ರಾರಂಭವಾಗಲಿಲ್ಲ, nonstarter. ಮತ್ತೆ ಧಾರವಾಡ ಜಿಲ್ಲೆಯ ಬೇಡ್ತಿ ನದಿಯಿಂದ ಕೆರೆ ತುಂಬಿಸುವಂಥ ಯೋಜನೆಗೆ ಇನ್ನೂ ಡಿಪಿಆರ್ ತಯಾರು ಮಾಡುತ್ತಿದ್ದಾರೆ. ಕೃಷ್ಣಾ ಮೇಲ್ದಂಡೆ ಯೋಜನೆಯ 3rd phase ನ ಕಾಮಗಾರಿ ಇನ್ನೂ ಪ್ರಾರಂಭವಾಗಿಲ್ಲ. ಮಲಪ್ರಭಾ ನದಿಗೆ ಅಡ್ಡಲಾಗಿ ಕೂಡಲಸಂಗಮ ಅಡವಿ ಹಾಳ ಸೇತುವೆ ಕೆಲಸಗಳು ಇನ್ನೂ ಪ್ರಾರಂಭವಾಗಿಲ್ಲ, nonstarter. ಇದರಲ್ಲಿ ಯಾವುದು cancel ಆಗುತ್ತವೆಯೋ ಎಂಬ ವಿಚಾರ ಗೊತ್ತಿಲ್ಲ. ಈ ರೀತಿಯಾಗಿ ಯಾವುದೇ development works ಆಗಿಲ್ಲ. This is the position ಇಂಧನ ಇಲಾಖೆಯಲ್ಲಿ ಸೌರಶಕ್ತಿ ಯೋಜನೆಗೆ 20 ಕೋಟಿ ರೂಪಾಯಿ ಒದಗಿಸಲಾಗಿದೆ ಎಂದು ಹೇಳಿದರು. ಅದಕ್ಕೆ ತೆಗೆದುಕೊಂಡಿರುವ ಕ್ರಮ ಏನೆಂದರೆ, ಸೌರಶಕ್ತಿ ಯೋಜನೆಗೆ ಮೀಸಲಿರಿಸಿದ್ದ ಅನುದಾನದಲ್ಲಿ ಸೌರಶಕ್ತಿ ಆಧಾರಿತ ನೀರಾವರಿ ಪಂಪ್‌ಸೆಟ್‌ಗಳನ್ನು ಒದಗಿಸುವ ಕುರಿತು ಸರ್ಕಾರದ ಆದೇಶವನ್ನು ಸಧ್ಯದಲ್ಲಿಯೇ ಹೊರಡಿಸಲಾಗುವುದೆಂದು ಹೇಳಿದ್ದಾರೆ. ಇವರು ಆದೇಶವನ್ನು ಇನ್ನೂ ಹೊರಡಿಸುವುದರಲ್ಲಿಯೇ ಇದ್ದಾರೆ. 20 ಕೋಟಿ ರೂಪಾಯಿಯನ್ನು ಖರ್ಚು ಮಾಡುವುದಕ್ಕೆ ಇವರಿಗೆ ಆಗಿಲ್ಲ. ಇನ್ನೊಂದು ವಿಷಯ ಏನೆಂದರೆ, ರಾಜ್ಯದ 10 ಮಹಾನಗರ ಪಾಲಿಕೆ ಪ್ರದೇಶಗಳಲ್ಲಿ 50 ಕೋಟಿ ರೂಪಾಯಿ ವೆಚ್ಚಗಳಲ್ಲಿ ವಿತರಣಾ ಮೂಲಸೌಕರ್ಯಗಳ ಉನ್ನತೀಕರಣ ಎಂದು ಹೇಳಿದ್ದಾರೆ. ಇದಕ್ಕೆ ಇವರು ಏನು ಉತ್ತರ ಹೇಳುತ್ತಾರೆಂದರೆ, ಈ ಒಂದು ಉನ್ನತೀಕರಣ ಯೋಜನೆಯ ಅನುಷ್ಠಾನಕ್ಕೆ ವಿದ್ಯುತ್ ಸರಬರಾಜು ಕಂಪನಿಯ ಕಾರ್ಯಸೂಚಿ ಯೋಜನೆ ಸಿದ್ಧಪಡಿಸುವಂತೆ ತಿಳಿಸಲಾಗಿದೆ ಎಂದು ಹೇಳಿದ್ದಾರೆ. ಅಂದರೆ, ಇನ್ನೂ ತಿಳಿಸುವುದರಲ್ಲಿಯೇ ಇವರು ಇದ್ದಾರೆ. ಇವರು ತಿಳಿಸಿ ಅವರು ಯಾವಾಗ ಕೆಲಸ ಪ್ರಾರಂಭ ಮಾಡಿ ಅದನ್ನು ಯಾವಾಗ implement ಮಾಡುತ್ತಾರೆಯೋ ಗೊತ್ತಿಲ್ಲ. This is the position. ಇನ್ನೂ ಕೈಗಾರಿಕೆ ಬಗ್ಗೆ ಹೇಳುವುದಾದರೆ, ಕರ್ನಾಟಕ ರಾಜ್ಯದಲ್ಲಿ ಕೈಗಾರಿಕೆಯ ಗತಿ ಮುಗಿದು ಹೋಗಿದೆ. ಮಾನ್ಯ ಮುಖ್ಯ ಮಂತ್ರಿಗಳು ಅದರ ಬಗ್ಗೆ ಏಕೆ ಆಸಕ್ತಿ ತೆಗೆದುಕೊಳ್ಳುತ್ತಿಲ್ಲವೆಂಬುದು ಗೊತ್ತಿಲ್ಲ. GIM ಮಾಡುವುದಕ್ಕೆ ಬಿಟ್ಟು ಬಿಟ್ಟರು. ಇದನ್ನು ಬಿಜೆಪಿ ಪಕ್ಷದವರು ಪ್ರಾರಂಭ ಮಾಡಿದರು ಎಂಬ ಉದ್ದೇಶದಿಂದ ಬಿಟ್ಟರೊ ಏನೋ ಗೊತ್ತಿಲ್ಲ.

2010ರಲ್ಲಿ ಒಂದು Global Invertors Meet (GIM) ಮಾಡಿದೆವು, ಮತ್ತೆ 2012 ರಲ್ಲಿ ಸಹ ಮಾಡಿದೆವು. ಇದಾದ ಮೇಲೆ 2014ರಲ್ಲಿ declare ಮಾಡಿದೆವು. 2014 ರಲ್ಲಿ ನಾವು GIM ಅನ್ನು ಖಂಡಿತ ಮಾಡಿ ನಾವು ಕೈಗಾರಿಕೆಯನ್ನು offer ಮಾಡುತ್ತೇವೆಂದು ಹಿಂದಿನ ರಾಜ್ಯಪಾಲರ ಭಾಷಣದಲ್ಲಿ ಹೇಳಿದ್ದರು. ಆದರೆ, ಇದರ ಸುದ್ಧಿಯೇ ಇಲ್ಲ. ಈಗ 2015ನೇ ಇಸವಿ ಪ್ರಾರಂಭವಾಯಿತು. ಇದನ್ನು 2015 ರಲ್ಲಿ ಮಾಡುತ್ತಾರೆಯೋ ಅಥವಾ 2016 ರಲ್ಲಿ ಮಾಡುತ್ತಾರೆಯೋ ಗೊತ್ತಿಲ್ಲ. ಒಟ್ಟಿನಲ್ಲಿ ಇದರ ಸುದ್ದಿಯೇ ಇಲ್ಲ. ಸರ್ಕಾರ ಬಂದ ಮೇಲೆ ನಮ್ಮ ರಾಜ್ಯಕ್ಕೆ ಯಾವುದೇ ಕೈಗಾರಿಕೆಗಳು ಬರುವುದು ಬೇಡ ಎಂದು ತೀರ್ಮಾನ ಮಾಡಿರಬೇಕು. ಏಕೆಂದರೆ, ಇದಕ್ಕಾಗಿ ಅವರಿಗೆ ಭೂಮಿಯನ್ನು ಕೊಡಬೇಕಾಗುತ್ತದೆ, ಇದೆಲ್ಲ ಸಮಸ್ಯೆ ಆಗುತ್ತದೆ. ಆದ್ದರಿಂದ, ಕೈಗಾರಿಕೆ ಕೂಡ ಬರುವುದು ಬೇಡ, ಉದ್ಯೋಗವಕಾಶ ಬೇಡ ಎಂದು ನಮ್ಮ ರಾಜ್ಯ ಸರ್ಕಾರ ತೀರ್ಮಾನ ಮಾಡಿರಬೇಕೆಂದು ನನಗೆ ಅನಿಸುತ್ತದೆ. ಏಕೆಂದರೆ, ಅವರ performance ನೋಡಿದರೆ ನನಗೆ ಆ ರೀತಿ ಅನಿಸುತ್ತಿದೆ. ಈ ಸಂದರ್ಭದಲ್ಲಿ ಒಂದು extract ಕೊಡುವುದಕ್ಕೆ ಬಯಸುತ್ತೇನೆ. 2013–14ನೇ ಸಾಲಿನಲ್ಲಿ 46 ಕೈಗಾರಿಕೆಗಳ ಸ್ಥಾಪನೆಗೆ ಅನುಮೋದನೆಯನ್ನು ಕೊಟ್ಟರು. ಅನುಮೋದನೆಗೊಂಡ 46 ಕೈಗಾರಿಕೆ ಸ್ಥಾಪನೆ ವಿಷಯದಲ್ಲಿ ಒಂದು ಯೋಜನೆ ಮಾತ್ರ ಅನುಷ್ಠಾನಗೊಳಿಸಿದರು. ಇಡೀ ರಾಜ್ಯದಲ್ಲಿ ಅಂದರೆ, ಉತ್ತರ ಕರ್ನಾಟಕ ಇರಬಹುದು ಅಥವಾ ದಕ್ಷಿಣ ಕರ್ನಾಟಕ ಇರಬಹುದು. ಕೇವಲ ಒಂದು ಯೋಜನೆ ಮಾತ್ರ ಅನುಷ್ಠಾನವಾಗಿದೆ. 2014–15ನೇ ಸಾಲಿನಲ್ಲಿ 16 ಕೈಗಾರಿಕೆಗಳ ವಿಷಯಗಳಿಗೆ ಸಂಬಂಧಪಟ್ಟಂತೆ ಅನುಮೋದನೆ ನೀಡಿದೆ. ಅನುಮೋದನೆಗೊಂಡ 16 ಕೈಗಾರಿಕೆಗಳ ವಿಷಯಗಳ ಪೈಕಿ ಒಂದು ಯೋಜನೆ ಮಾತ್ರ ಅನುಷ್ಠಾನಗೊಂಡಿದೆ. ಈ ರೀತಿಯಾದ performance ಇವತ್ತಿನ ದಿವಸ ಇಲ್ಲಿದೆ. ಹಿಂದೆ 2010 ರಲ್ಲಿ GIM–1 ರಲ್ಲಿ 389 ಕೈಗಾರಿಕೆಗಳ ಪ್ರಸ್ತಾವನೆಗೆ ಅನುಮೋದನೆ ಕೊಟ್ಟು ಅದರಲ್ಲಿ 83 ಪ್ರಸ್ತಾವನೆಗೆ ಅನುಷ್ಠಾನ ಆಯಿತು. ಮುಂದೆ 2012 ರಲ್ಲಿ 751 ಕೈಗಾರಿಕೆಗಳ ಪ್ರಸ್ತಾವನೆಗೆ ಅನುಮೋದನೆ ದೊರೆತು 59 ಪ್ರಸ್ತಾವನೆಗಳು ಅನುಷ್ಠಾನವಾಯಿತು. ಈ ರೀತಿ performance ಇದ್ದಾಗ ಆ ರೀತಿ ಕಾರ್ಯಕ್ರಮಗಳನ್ನು ಮಾಡಿದಾಗ ಇಷ್ಟು ದೊಡ್ಡ

performance ಆದಾಗ ಎಷ್ಟು ಸಲ ಮಾನ್ಯ ಮುಖ್ಯಮಂತ್ರಿಗಳು High Level Committee meeting 2–3 ಸಲ ಮಾಡಿದ್ದಾರಾ ನನಗೆ ಗೊತ್ತಿಲ್ಲ. ಎಷ್ಟಕ್ಕೆ approval ಆಗಿದೆ ಎನ್ನುವುದು ಇವತ್ತಿಗೂ ಗೊತ್ತಾಗುತ್ತಿಲ್ಲ. ಬಂಡವಾಳ ಎಷ್ಟು ಎಂದು ಅವರು ಹೇಳಿದಾಗ ಇಲ್ಲಿ ಗೊತ್ತಾಗುತ್ತದೆ. 2013–14 ರಲ್ಲಿ ಒಟ್ಟು ಈಗಾಗಲೇ ಹೇಳಿದಂತೆ 38653 investment offer ಬಂತು. ಅದರಲ್ಲಿ ಒಂದೇ implement ಆಗಿದ್ದು. 335 ಕೋಟಿ ರೂ.ಗಳು ಮಾತ್ರ investment, 1100 employment generation ಆಗಿರುವುದು. 2014–15 ಇವರ ಸರ್ಕಾರ ಬಂದ ಮೇಲೆ 16 project ಗಳಿಗೆ approval ಕೊಟ್ಟರು 10750 ಕೋಟಿ ರೂ.ಗಳಿಗೆ investment ಅದರಲ್ಲಿ 8000 employment ಆಗಿರುವುದು. ಆಗ ಏನು implement ಆಗಲಿಲ್ಲ. ಒಟ್ಟು 1100 employment generation ಆಗಿರುವುದು. ಎರಡು ವರ್ಷದಲ್ಲಿ 335 ಕೋಟಿ ರೂ.ಗಳು investment. ಇದಕ್ಕೆ ವ್ಯತಿರಿಕ್ತ ರೆಕಾರ್ಡ್‌ಗಳು ಇದ್ದರೆ ಅವರು ಹೇಳಲಿ. ಸರ್ಕಾರದ ದಾಖಲೆಗಳನ್ನು ತೆಗೆದುಕೊಂಡೇ ನಾನು ಇವತ್ತು ಹೇಳುತ್ತಿದ್ದೇನೆ. Global Investors Meeting ಯಾವಾಗ ಮಾಡುತ್ತಾರೆನ್ನುವುದನ್ನು ಅವರು ಹೇಳಬೇಕಾಗುತ್ತದೆ. ಇವರ ನಿರ್ಲಕ್ಷ್ಯದಿಂದ ಧಾರವಾಡಕ್ಕೆ ಬರುವಂಥ ಹೀರೋ ಮೋಟಾರ್ಸ್ ಹೋಗಿ ಬಿಟ್ಟಿತು. ಅದರಿಂದ ಇವತ್ತು 2000 ಕೋಟಿ ರೂ.ಗಳ investment ಬರುತ್ತಿತ್ತು. ಅದಕ್ಕೆ ಈಗ ಇವರು reason ಹೇಳುತ್ತಾರೆ. ಆಂಧ್ರಪ್ರದೇಶದವರು ಬಹಳಷ್ಟು facilities ಕೊಟ್ಟರು. ಅದರ ಸಲುವಾಗಿ ಅಲ್ಲಿ ಹೋಯಿತು. ಆಗ ಆಂಧ್ರಪ್ರದೇಶ divide ಆಗಿರಲಿಲ್ಲ. ಯಾವಾಗ ಅವರು ನಮಗೆ ಇಲ್ಲಿ approach ಆಗಿದ್ದರು ಆಗ ಒಂದೇ ರಾಜ್ಯ ಇತ್ತು. ಅವರು 6 ತಿಂಗಳ ಮುಂಚೆಯೇ ನಮಗೆ approach ಆಗಿದ್ದರು. ಆವತ್ತು ಆಗ ಅವರನ್ನು ಕೂಡಿಸಿ ಮಾತನಾಡಿದ್ದರೆ ಇವತ್ತು ಏನು facilities ಕೊಡುತ್ತೇನೆಂದು ಹೇಳುತ್ತಿದ್ದೀರಿ. ಆವತ್ತು ಕೊಟ್ಟು ಬಿಟ್ಟಿದ್ದರೆ ಅವರು ಧಾರವಾಡಕ್ಕೆ ಬಂದು ಬಿಡುತ್ತಿದ್ದರು. ಉತ್ತರ ಕರ್ನಾಟಕಕ್ಕೆ ಬರುವಂಥ ಒಂದು ಪ್ರಮುಖವಾದಂಥ ಉದ್ದಿಮೆ ಸಾವಿರಾರು ಕೋಟಿ ರೂ.ಗಳ investment, ಸಾವಿರಾರು ಜನರಿಗೆ ಉದ್ಯೋಗ ಕೊಡುವುದು ಹೋಯಿತು. ಆ ಒಂದು ಭಾಗದ ಬೆಳವಣಿಗೆಗೆ ಕುಂಠಿತವಾಯಿತು. ಅವರು ಹೆಚ್ಚಿನ facilities

ಕೊಟ್ಟಿದ್ದಾರೆ, tax concession ಕೊಟ್ಟರು ಎಂದು ಮುಖ್ಯಮಂತ್ರಿಗಳು ಇದನ್ನೇ ಹೇಳುತ್ತಾರೆ. ಆವತ್ತು ನಾನು repeatedly ಆಗಿ ಹೇಳಿದ್ದೆ. ದಿನೇಶ್ ಗುಂಡೂರಾವ್‌ರವರು ನಮ್ಮ ಜಿಲ್ಲೆಯ ಉಸ್ತುವಾರಿ ಮಂತ್ರಿಗಳು. ಅವರು ಆ ಸಭೆಗೆ ಬಂದಾಗ repeatedly ಹೇಳಿದೆ. ಇಲ್ಲಿ Assembly ಯಲ್ಲಿ ಹೇಳಿದೆ. ಯಾರೂ ಕಾಳಜಿ ತೆಗೆದುಕೊಳ್ಳಲಿಲ್ಲ. ಇದರಿಂದ ಒಂದು ದೊಡ್ಡ ಉದ್ದಿಮೆ ಕೈತಪ್ಪಿ ಹೋಯಿತು.

ಶ್ರೀ ಬಾಬುರಾವ್ ಚಿಂಚನಸೂರ:– ಹೈದರಾಬಾದ್–ಕರ್ನಾಟಕದಲ್ಲಿ 53 ಕೋಕಾಕೋಲಾ ಡ್ರಗ್ ಕಂಪನಿಗಳು ಬರುತ್ತಿವೆ.

ಶ್ರೀ ಜಗದೀಶ್ ಶೆಟ್ಟರ್:– Implement ಹೇಳಿ.

ಶ್ರೀ ಬಾಬುರಾವ್ ಚಿಂಚನಸೂರ:– Coca Cola Company ಯಾದಗಿರಿ ಜಿಲ್ಲೆಗೆ ಬಂದಿದೆ.

ಶ್ರೀ ಜಗದೀಶ್ ಶೆಟ್ಟರ್:– Implement ಎಷ್ಟು ಆಗಿದೆ ಹೇಳಿ. Offer ಬರಬಹುದು, ಆದರೆ ಬಂದು establish ಮಾಡಿ ಕಾರ್ಖಾನೆ ಪ್ರಾರಂಭ ಮಾಡಿದ್ದಾರಾ?

ಶ್ರೀ ಬಾಬುರಾವ್ ಚಿಂಚನಸೂರ್:– Land allot ಆಗಿದೆ, ಮುಂದಿನ ತಿಂಗಳು ಪ್ರಾರಂಭ ಮಾಡುತ್ತಾರೆ. 53 ಡ್ರಗ್ ಕಂಪನಿಗಳು ಬರುತ್ತಿವೆ.

ಶ್ರೀ ಜಗದೀಶ್ ಶೆಟ್ಟರ್:– ಮುಂದಿನ ತಿಂಗಳು ಮುಂದಿನ ತಿಂಗಳು ಎಂದು ನೋಡಿಕೊಂಡೇ ಇರಿ. ಈ ಕ್ಷಣಕ್ಕೆ ಏನಾಗಿದೆ ಎಂದು ಹೇಳಿ. ನಿಮ್ಮ ಸರ್ಕಾರ ಬಂದು ಎರಡು ವರ್ಷವಾಯಿತು. ಇಷ್ಟು ದಿವಸದ ನಿಮ್ಮ performance ಹೇಳಿ, ಒಂದೇ ಒಂದು ಕಾರ್ಖಾನೆ ಬಂದಿದ್ದು ಹೇಳಿ. ನಮ್ಮ ರಾಜ್ಯಕ್ಕೆ ಒಂದೇ ಒಂದು ಕಾರ್ಖಾನೆ ಬಂದಿದ್ದು. ಇಷ್ಟು proposal ಗಳು ಬಂದು ಒಂದು implement ಆಗಿದ್ದು.

ಶ್ರೀ ಬಾಬುರಾವ್ ಚಿಂಚನಸೂರ್:– ಸಾವಿರ ಕೋಟಿ ರೂ.ಗಳ ಕೋಕಾಕೋಲಾ ಕಂಪನಿ ಬರುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್:- ನೀವು ಹೇಳಿದ ಮೇಲೆ ನಾವು ನಂಬಬೇಕಾಗುತ್ತದೆ. ಸಹಕಾರ ಇಲಾಖೆಯಲ್ಲಿ ಪ್ರಿಯದರ್ಶಿನಿ ಮತ್ತು ಆಶಾಕಿರಣ ಎನ್ನುವ ಯೋಜನೆಗೆ ಒಂದು ಕೋಟಿ ರೂ.ಗಳನ್ನು ಇಟ್ಟು 25 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದಾರೆ. ಇನ್ನೊಂದು ಯಶಸ್ವಿನಿ ಯೋಜನೆ, ನಗರ ಪ್ರದೇಶಕ್ಕೆ ಕೊಡುತ್ತೇವೆಂದು ಹೇಳಿದರು ಅದಕ್ಕೆ 10 ಕೋಟಿ ರೂ.ಗಳು ಇಲ್ಲಿಯವರೆಗೆ ಬಿಡುಗಡೆಯಾಗಿದ್ದು 5 ಕೋಟಿ ರೂ.ಗಳು ಇದಕ್ಕೆ ಖರ್ಚಾಗಿರುವುದು ಏನೂ ಇಲ್ಲ. ಕೃಷಿ ಮಾರಾಟ ಇಲಾಖೆಯ ವಿವಿಧ ಯೋಜನೆಗೆ ಒಟ್ಟು 197 ಕೋಟಿ ರೂ.ಗಳು ಅದರಲ್ಲಿ ಖರ್ಚು ಮಾಡಿರುವುದು 40 ಕೋಟಿ ರೂ.ಗಳು ಮಾತ್ರ. ಶೇಕಡಾ 20% performance. ಕನಿಷ್ಠ ಬೆಂಬಲ ಬೆಲೆ ಮೆಕ್ಕೆಜೋಳ ಇರಬಹುದು, ತೊಗರಿ ಇರಬಹುದು, ಬೇರೆ ಬೇರೆ ಕೃಷಿ ಪದಾರ್ಥಗಳು ಏನಿವೆ, ಅವುಗಳಿಗೆ ಇವತ್ತು ಬೆಂಬಲ ಬೆಲೆ ಘೋಷಣೆ ಮಾಡಬೇಕು. ಅದಕ್ಕೆ 1000 ಕೋಟಿ ರೂ.ಗಳ ಆವರ್ತನಿಧಿ ಎಂದು ಏನು ಇಟ್ಟಿದ್ದರು, ಅದರಲ್ಲಿ 25 ಕೋಟಿ ರೂ.ಗಳು ಬಿಡುಗಡೆ ಆಗಿದೆ ಎನ್ನುವ ಒಂದು record ಇದೆ. ಆವರ್ತನಿಧಿ ಎಂದು ಇಡುವುದು ಹಣ ಮಾತ್ರ ಬಿಡುಗಡೆ ಮಾಡುವುದಿಲ್ಲ. ಮೆಕ್ಕೆಜೋಳದ ಬಗ್ಗೆ ಕೇಳಿದರೆ ಕೇಂದ್ರ ಸರ್ಕಾರ ಈಗ ಕೊಡುತ್ತಿಲ್ಲವೆಂದು ಕೃಷ್ಣ ಭೈರೇಗೌಡರು ಎದ್ದು ನಿಲ್ಲುತ್ತಾರೆ. ಕೇಂದ್ರ ಸರ್ಕಾರ ಕೊಟ್ಟಿಲ್ಲವೆಂದು 1100 ರೂ.ಗಳು ಎಂದು fix ಮಾಡಿದ್ದೀರಿ. ಈಗ ಖರೀದಿ ಕೇಂದ್ರದಲ್ಲಿ ಎಷ್ಟು ಆಗಿದೆ ಹೇಳಿ. ರೈತರು ಕೊಡುವುದಕ್ಕೆ ಬರುವುದಿಲ್ಲ. ಏಕೆಂದರೆ ರೈತರಿಗೆ ಆ ರೇಟ್ ಕೊಡುವುದಕ್ಕೆ ಆಗುವುದಿಲ್ಲ. ಮೆಕ್ಕೆಜೋಳ ಬೆಳೆಯುವಂಥ ಆ ರೈತರಿಗೆ ಬದುಕುವುದಕ್ಕೆ ಸಾಧ್ಯವಿಲ್ಲ. ಅವರು ಮಾರ್ಕೆಟ್‌ಗೆ ಹೋಗಬೇಕು. 1100 ರೂ.ಗಳಿಗೆ ಖರೀದಿ ಕೇಂದ್ರ ಎಂದು ಇಟ್ಟುಕೊಂಡು ಕುಳಿತರೆ ಯಾರು ಬರುತ್ತಾರೆ.?

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು):- ಮಾನ್ಯ ಉಪಾಧ್ಯಕ್ಷರೆ, ಅವರು ಕೇಂದ್ರ ಸರ್ಕಾರದ ನೀತಿಯಿಂದ ಬರುತ್ತಿಲ್ಲ. ನೀವು ಕೊಡದಿರುವ ಬೆಂಬಲ ಬೆಲೆಯಿಂದ ರೈತರು ಬರುತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ರೈತರ ಹಿತರಕ್ಷಣೆಯ ಸಲುವಾಗಿ ನೀವು ಏನು ಮಾಡಿದ್ದೀರೆಂದು ನಾನು ಕೇಳುತ್ತಿದ್ದೇನೆ. ಕೇಂದ್ರ ಸರ್ಕಾರಕ್ಕೆ ಹೋಗೋಣ ನಡೆಯಿರಿ.

ಶ್ರೀ ದಿನೇಶ್ ಗುಂಡೂರಾವ್:- ರೈತರಿಗೆ ಅನುಕೂಲವಾಗದ ಕೆಲಸವನ್ನು ಕೇಂದ್ರ ಸರ್ಕಾರ ಮಾಡುತ್ತಿದೆ.

ಶ್ರೀ ಜಗದೀಶ್ ಶೆಟ್ಟರ್:- ಕೇಂದ್ರ ಸರ್ಕಾರ ಕೊಡುವುದಿಲ್ಲವೆಂದು ನೀವು ಕುಳಿತುಕೊಳ್ಳಿ.

ಶ್ರೀ ದಿನೇಶ್ ಗುಂಡೂರಾವ್:- ರಾಜ್ಯ ಸರ್ಕಾರದಿಂದ ಏನು ಮಾಡುವುದಕ್ಕೆ ಸಾಧ್ಯವಿದೆ, ಅದನ್ನು ಮಾಡಿದೆ.

ಶ್ರೀ ಜಗದೀಶ್ ಶೆಟ್ಟರ್:- ಕರ್ನಾಟಕದ ರೈತರು ತೊಂದರೆಯನ್ನು ಅನುಭವಿಸಲಿ.

ಶ್ರೀ ದಿನೇಶ್ ಗುಂಡೂರಾವ್:- ಕೇಂದ್ರದಲ್ಲಿ ನಿಮ್ಮ ಸರ್ಕಾರದಿಂದ ಅದನ್ನು ಸರಿಪಡಿಸುವುದಕ್ಕೆ ಆಗಿರುವುದಿಲ್ಲ. ತಾವು ಇಲ್ಲಿ ಬಂದು ಭಾಷಣ ಮಾಡುತ್ತಿದ್ದೀರಿ.

ಶ್ರೀ ಜಗದೀಶ್ ಶೆಟ್ಟರ್:- ನಡೆಯಿರಿ, ಕೇಂದ್ರ ಸರ್ಕಾರಕ್ಕೆ ಹೋಗೋಣ.

ಶ್ರೀ ದಿನೇಶ್ ಗುಂಡೂರಾವ್:- ಹೋಗಿ ಆಯಿತು, ಬಂದು ಆಯಿತು, ಅವರು ಆಗುವುದಿಲ್ಲವೆಂದು ಹೇಳಿದರು. ನಿಮ್ಮ ಕೇಂದ್ರ ಸರ್ಕಾರ ರೈತರ ಬಡಜನರ ವಿರೋಧಿ ಸರ್ಕಾರ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:- ಇವರು ಕೇವಲ ಹೇಳಿಕೆಗಳನ್ನು ಕೊಡುವುದು. ರೈತರ ನೆರವಿಗೆ ಬರುವುದಿಲ್ಲ.

ಶ್ರೀ ದಿನೇಶ ಗುಂಡೂರಾವ್:- ಲಿಖಿತವಾಗಿ ವಿವರಣೆಯನ್ನು ಕೊಟ್ಟು ಬಂದಿದ್ದೇವೆ.

ಶ್ರೀ ಜಗದೀಶ ಶೆಟ್ಟರ್:- ಇವತ್ತು ಧಾರವಾಡ ಜಿಲ್ಲೆಯ ಹೆಬ್ಬಳ್ಳಿ, ಶಿವಳ್ಳಿ ಕೆಲವು ತಾಲ್ಲೂಕುಗಳಲ್ಲಿ ಅತಿವೃಷ್ಟಿ ಆಯಿತು ಇವತ್ತಿನವರೆಗೂ ಪರಿಹಾರದ ಹಣ ಕೊಡಲಿಲ್ಲ. ಈರುಳ್ಳಿಗೂ ಎಲ್ಲರಿಗೂ ಇವತ್ತು ಪರಿಹಾರ ಸಿಗಲಿಲ್ಲ. ಬೆಂಬಲ ಬೆಲೆಯಲ್ಲಿ ಅದನ್ನು ಖರೀದಿ ಮಾಡಿ ಎಂದರೆ ಮಾಡಿಲ್ಲ. ನಮ್ಮ ಸರ್ಕಾರ ಇದ್ದಾಗ 50-60 ಕೋಟಿ ರೂ.ಗಳಷ್ಟು ನಾವು ಖರೀದಿ ಮಾಡಿದ್ದೆವು. ಇವರು ಖರೀದಿ ಮಾಡುವುದಕ್ಕೂ ತಯಾರಿಲ್ಲ, ಎಲ್ಲವೂ loss ಆಗುತ್ತದೆ. Perishable ನಾಳೆ ಅದನ್ನು ನಾವು ಎಲ್ಲಿಯೂ ಮಾರಾಟ ಮಾಡುವುದಕ್ಕಾಗುವುದಿಲ್ಲ. ಎಲ್ಲರಿಗೂ ಅತಿವೃಷ್ಟಿಯ ಪರಿಹಾರದ ಹಣವು ಸಿಗಲಿಲ್ಲ. This is the fate of this Government. ತೆಂಗು ಸಂರಕ್ಷಣಾ ಘಟಕ 250 ಲಕ್ಷ ರೂ. ಗಳನ್ನು ಕೊಟ್ಟರು. ಯಾವುದೇ ಹಣ ಬಿಡುಗಡೆ ಆಗಲಿಲ್ಲ. ರಾಷ್ಟ್ರೀಯ ಕೃಷಿ ವಿಕಾಸ ಅಡಿಯಲ್ಲಿ 2530 ಲಕ್ಷ ರೂ.ಗಳು 8 ಕೃಷಿ ಉತ್ಪನ್ನ ಮಾರುಕಟ್ಟೆ 500 ಮೆಟ್ರಿಕ್ ಟನ್ ಸಾಮರ್ಥ್ಯದ ಗೋಡೌನ್ ಮಾಡುತ್ತೇವೆಂದು ಹೇಳಿದರು, ಆದರೆ ಇಲ್ಲಿಯವರೆಗೆ ಬಿಡುಗಡೆ ಆಗಿರುವ ಹಣ 574 ಲಕ್ಷ ರೂ.ಗಳು ಮಾತ್ರ. ಶೇಕಡಾ 22% ಮಾತ್ರ progress. ಲೊಕೋಪಯೋಗಿ ಇಲಾಖೆಯಲ್ಲಿ ಶೇಕಡಾ 41-36% performance ಹೀಗಾಗಿ ಎಲ್ಲಾ ಕಡೆ ಬೇಗ ರಸ್ತೆ ಆಗುತ್ತಿಲ್ಲ. Speed up ಮಾಡಿ. ಕೆ-ಶಿಪ್ ನಲ್ಲಿ 32% Performance. ಹಣ ಬಿಡುಗಡೆ ಆಗಿರುವುದು 32% ಖರ್ಚು ಮಾಡಿರುವುದು 17% ಯಾವಾಗ ಮುಗಿಯುವುದು ಇನ್ನು ಎರಡು ತಿಂಗಳಲ್ಲಿ ಏನು ಖರ್ಚು ಮಾಡುತ್ತೀರಿ. ಏಕೆ ಇದು performance ಆಗಲಿಲ್ಲ. ನಿಮ್ಮಲ್ಲಿ efficiency ಇಲ್ಲ ಏಕೆ. administration ದಲ್ಲಿ efficient ಆಗಿ ಕೆಲಸ ಮಾಡುವುದಕ್ಕಾಗುತ್ತಿಲ್ಲ. ನಾನು ಇತ್ತೀಚೆಗೆ ಬಾದಾಮಿ, ರಾಮದುರ್ಗಕ್ಕೆ ಹೋಗಿದ್ದೆ. ಅಲ್ಲಿಯ ರಸ್ತೆಗಳನ್ನು ನೋಡಿ ಬಿಟ್ಟರೆ ಬಹಳ ಬೇಜಾರಾಗುತ್ತದೆ. ಬಾದಾಮಿ ಇವತ್ತು ವಿದೇಶಿಗರು ದೊಡ್ಡ ಪ್ರಮಾಣದಲ್ಲಿ ಬರುವಂಥ ಪ್ರವಾಸಿಸ್ಥಾನ. ಬಾದಾಮಿಗೆ ಹೋಗುವುದಕ್ಕೆ ಸರಿಯಾದಂಥ ರಸ್ತೆ ಇಲ್ಲ. ಬಾದಾಮಿ ಊರಲ್ಲಿ ಹೋದರೆ ಸ್ಮಶಾನವಾದಂತೆ ಆಗಿದೆ. ಕೆಲವು ರಸ್ತೆಗಳನ್ನು widening ಮಾಡುತ್ತೇವೆಂದು demolition ಮಾಡಿದರು. ಆರಸ್ತೆ ಕೆಲಸ ಆಗಬೇಕಾಗಿತ್ತು, ಅದು ಆಗಲಿಲ್ಲ. ಇವತ್ತು ಜನ ಪರಿತಪಿಸಿ ಶಾಪ ಹಾಕುತ್ತಿದ್ದಾರೆ. 8-10 ಸಲ ಬಂದಾಯಿತು, ಆದರೂ

ಯಾರು care ಮಾಡಲಿಲ್ಲ. ಬಾದಾಮಿಯಿಂದ cross ಮಾಡಿಕೊಂಡು ರಾಮದುರ್ಗಕ್ಕೆ ಹೋಗಬೇಕು. ನಂತರ ಸವದತ್ತಿ ಮಾರ್ಗವಾಗಿ ಧಾರವಾಡಕ್ಕೆ ಬರಬೇಕು. ಬಾದಾಮಿಯಿಂದ ರಾಮದುರ್ಗಕ್ಕೆ ಹೋಗುವ ರಸ್ತೆ ಪೂರ್ತಿ ಕೆಟ್ಟು ಹೋಗಿದೆ.

ಶ್ರೀ ಎಂ.ಬಿ. ಪಾಟೀಲ್:- ಬಾದಾಮಿಗೆ ನೀವು Madam ಅವರ ಮನೆಗೆ ಹೋಗುವುದಕ್ಕೆ ರಸ್ತೆ ಬೇಕು.

ಶ್ರೀ ಜಗದೀಶ್ ಶೆಟ್ಟರ್:- ನಾವು ಅಲ್ಲಿಗೆ ಹೋಗುವುದರಿಂದ ಅದರ ಬಗ್ಗೆ ನಾನು ಹೇಳುತ್ತಿದ್ದೇನೆ. ಅದನ್ನು ನೀವು ಹೇಳಲಿ ಎಂದು ಬಿಟ್ಟಿದ್ದೆ.

ಶ್ರೀ ಎಂ.ಬಿ. ಪಾಟೀಲ್:- ನೀವು ಆ ಊರಿನ ಅಳಿಯ ಎಂದು ಹೇಳಬೇಕು.

ಶ್ರೀ ಜಗದೀಶ್ ಶೆಟ್ಟರ್:- ಐಹೊಳೆ ಕತೆಯೂ ಹಾಗೆ ಇದೆ. ಐಹೊಳೆ ಪ್ರವಾಸಿಸ್ಥಾನ. ಐಹೊಳೆ, ಪಟ್ಟದಕಲ್ಲು ಇವುಗಳನ್ನು ಕೇಂದ್ರ ಸರ್ಕಾರದ ಪ್ರಾಚ್ಯವಸ್ತು ಇಲಾಖೆಯವರು 300 ಮೀಟರ್‌ವರೆಗೆ ಯಾವುದು development ಮಾಡಬಾರದೆಂದು ಹೇಳಿದ್ದಾರೆ. ಐಹೊಳೆಯಲ್ಲಿ ಗುಡಿ ಸುತ್ತಮುತ್ತಲು ಮನೆ ಇವೆ. ಅವರು ಮತ್ತೊಂದು ಅಂತಸ್ತು ಕಟ್ಟುವ ಹಾಗಿಲ್ಲ. ಸುಣ್ಣಬಣ್ಣ ಹಚ್ಚುವ ಹಾಗಿಲ್ಲ. ಕಟ್ಟೆ ಕಟ್ಟಬೇಕೆಂದರೆ ಕಟ್ಟೆ ಕಟ್ಟುವ ಹಾಗಿಲ್ಲ. This is the fate. ಹೀಗಾಗಿ ನಮ್ಮ ಸರ್ಕಾರ ಇದ್ದಾಗ ಒಂದು ಕ್ಯಾಬಿನೆಟ್ decision ಆಗಿ, ಡಿ.ಸಿ.ಗಳಿಂದ proposal ತೆಗೆದುಕೊಂಡು ಬಂದು, ಇಡೀ ಊರನ್ನು ಸ್ಥಳಾಂತರ ಮಾಡಬೇಕೆಂದು ನಿರ್ಧಾರ ಕೈಗೊಂಡೆವು. ಈಗ ಮಾನ್ಯ ಮೇಟಿಯವರನ್ನು ಕೇಳಿದರೆ ನಿವು ಹಣ ಕೊಡಲಿಲ್ಲವೆಂದು ಹೇಳುತ್ತಾರೆ. ಆಯಿತು, ನಾವು ಕೊಡಲಿಲ್ಲ. ನೀವಾದರೂ ಕೊಡಿ.

ಶ್ರೀ ಹೆಚ್.ವೈ. ಮೇಟಿ:- ಸಾರ್, ನೀವು ದುಡ್ಡು ಕೊಡದೇ ಇದ್ದುದರಿಂದ cancel ಆಯಿತು.

ಶ್ರೀ ಜಗದೀಶ್ ಶೆಟ್ಟರ್:- ಆಯಿತು. ನೀವು ಕೊಡಿ. ನೀವು ಆ ಭಾಗದಿಂದ ಆಯ್ಕೆಯಾಗಿ ಬಂದಿದ್ದೀರಿ. ನೀವು ಐಹೊಳೆಯವರು. ಆ

ಕಳಕಳಿವುಳ್ಳವರು. ನಾವು ರೊಕ್ಕ ಕೊಟ್ಟಿಲ್ಲವೆಂದರೆ ನೀವು ಬಿಟ್ಟುಬಿಡುತ್ತೀರಾ? ಅದೇ ಒಂದು reason ಆದರೆ ಹೇಗೆ? ಸ್ಥಳಾಂತರ ಮಾಡಿ. ಜನರು ಅಲ್ಲಿ ಒದ್ದಾಡುತ್ತಿದ್ದಾರೆ. ಒಂದು alternative ಜಮೀನು ಸಿಕ್ಕಿತ್ತು. ಜನರು ಅಲ್ಲಿ ಹೋಗಲೂ ತಯಾರಾಗಿದ್ದರು. ಆದರೆ ಹಣ ಕೊಟ್ಟಿಲ್ಲವೆಂದು ಹಾಗೆಯೇ ಉಳಿದಿದೆ. ಇವು ಉತ್ತರ ಕರ್ನಾಟಕದ ಪ್ರಮುಖ ಪ್ರವಾಸಿ ಸ್ಥಳಗಳು. ಆ ಸ್ಥಳಗಳನ್ನು ಅಭಿವೃದ್ಧಿಪಡಿಸಲು ನೀವು 30–40 ಕೋಟಿ, 100 ಕೋಟಿ ಹಣ ಏಕೆ ಕೊಟ್ಟಿಲ್ಲ? ನಮ್ಮ ಸರ್ಕಾರ ಹತ್ತು ತಿಂಗಳು ಇತ್ತು. ನಾವು ಭೂಮಿ ಪೂಜೆ ಮಾಡಿದ್ದೆವು. ನಾವು ಹಣ ಕೊಟ್ಟಿಲ್ಲವೆಂದು ತಾವು ಹೇಳುತ್ತೀರಿ. ಆಯಿತು. ನೀವು ಕೊಡಿ. ಮಾನ್ಯ ಸದಸ್ಯರಾದ ಮೇಟಿಯವರು ಮಾನ್ಯ ಸಿದ್ದರಾಮಯ್ಯರವರಿಗೆ ಬಹಳ ಆತ್ಮೀಯರು. ನಾವು ಬಾಗಲಕೋಟೆಗೆ ಹೋದಾಗ ಎಲ್ಲರೂ ಹೇಳುತ್ತಾರೆ. ಏನೆಂದರೆ, ಸಿದ್ದರಾಮಯ್ಯನವರ ಸರ್ಕಾರದಲ್ಲಿ ಮೇಟಿಯವರೆ District Minister ಇದ್ದಹಾಗೆ ಎಂದು ಹೇಳುತ್ತಾರೆ. ಅಲ್ಲಿ ಮಾನ್ಯ ಎಸ್.ಆರ್. ಪಾಟೀಲ್‌ರವರದ್ದು ಏನೂ ನಡೆಯುವುದಿಲ್ಲ. ಮೇಟಿಯವರದ್ದೆ ನಡೆಯುವುದು ಎಂದು ಹೇಳುತ್ತಾರೆ. ಅಂದರೆ ತಾವು ಆ ರೀತಿ powerful ಇದ್ದೀರಿ. ಇದಕ್ಕಾಗಿ 30–40 ಕೋಟಿ, 100 ಕೋಟಿ ರೂ.ಗಳನ್ನು ಮಾನ್ಯ ಸಿದ್ದರಾಮಯ್ಯನವರ ಕಡೆಯಿಂದ ನಿಮಗೆ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲವೇ?

ಶ್ರೀ ಹೆಚ್.ವೈ. ಮೇಟಿ:– ತಾವು ಆ ರೀತಿ ಹೇಳಬೇಡಿ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:– ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಮೇಟಿಯವರು ಮಾನ್ಯ ಸಿದ್ದರಾಮಯ್ಯನವರ ಬಹಳ ಸಮೀಪದಲ್ಲಿದ್ದಾರೆ, ಬಹಳ ಸಮೀಪದಲ್ಲಿದ್ದಾರೆ ಎಂದು ಹೇಳಿದರೆ ಹೇಗೆ? ಇಲ್ಲಿ ಇರತಕ್ಕಂಥವರೆಲ್ಲರಿಗಿಂತಲೂ ಹೆಚ್ಚು ಅನ್ಯಾಯವಾಗಿರುವುದು ಅವರಿಗೆ. ಅವರು ಜೀವನಪರ್ಯಂತ ಸಿದ್ದರಾಮಯ್ಯನವರನ್ನು follow ಮಾಡಿಕೊಂಡು ಬಂದಿದ್ದಾರೆ. ಆದರೆ ಏನು ಬಂತು? ಒಂದು ಮಂತ್ರಿ ಪದವಿಯನ್ನೂ ಕೊಡಲಿಲ್ಲ. Grant ಅನ್ನೂ ಕೊಡಲಿಲ್ಲ. ನೀವು ಮಾನ್ಯ ಮುಖ್ಯ ಮಂತ್ರಿಗಳ follower, follower ಎಂದು ಹೇಳುತ್ತೀರಿ.

ಶ್ರೀ ಹೆಚ್.ವೈ. ಮೇಟಿ:- ಜೀವನ ಪರ್ಯಂತ follow ಮಾಡಿಕೊಂಡು ಬಂದಿದ್ದಾರೆ ಎಂದು ಹೇಳಿದರು. ನಾನು ಅವರನ್ನು ನಮ್ಮ ಲೀಡರ್ ಎಂದು ಒಪ್ಪಿಕೊಂಡಿದ್ದೇನೆ. ನಾನು ಮಂತ್ರಿ ಪದವಿಯ ಆಸೆಗಾಗಿ ಅವರ ಹಿಂದೆ ಇಲ್ಲ. ಮಂತ್ರಿ ಪದವಿ ಆಸೆಗಾಗಿ ನಿಮ್ಮಲ್ಲಿ ಏನು ಗದ್ದಲವಾದವೋ ಆ ರೀತಿ ಗದ್ದಲ ಮಾಡುವ ಮನುಷ್ಯ ನಾನಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ನಾನು ನಿಮಗೆ ಸಹಾಯವಾಗಲಿ ಎಂದು ಹೇಳಿದೆ. ಒಲ್ಲೆ ಎಂದು ಬರೆದುಕೊಡಿ. ನಿಮಗೆ ಆತ್ಮೀಯ ಸ್ನೇಹಿತನಾಗಿ ಮಂತ್ರಿ ಪದವಿ ಸಿಗಲಿ ಎಂದು ಒಳ್ಳೆಯದಕ್ಕೆ ಹೇಳಿದರೆ, ಅದು ಬಯಸದೇ ಬಂದ ಭಾಗ್ಯ ಎಂದು ತಿಳಿದುಕೊಂಡು ಸುಮ್ಮನೆ ಕೂರುವುದು ಬಿಟ್ಟು ನನಗೆ ಬೇಡ ಬೇಡ ಎಂದರೆ, ಮನೆಗೆ ಬರುವ ಲಕ್ಷ್ಮಿಯನ್ನು ನೀವು ಹೊರಗೆ ಕಳುಹಿಸುತ್ತೇನೆ ಎಂದರೆ ಕಳುಹಿಸಿ, ನಾನೇನು ಮಾಡುವುದಕ್ಕೆ ಆಗುತ್ತದೆ?

ಶ್ರೀ ಜಗದೀಶ್ ಶೆಟ್ಟರ್:- ಆಯಿತು, ಮಾನ್ಯ ಮೇಟಿಯವರೆ, ಇನ್ನು ಮುಂದೆ ತಾವಾದರೂ ನಮ್ಮ ಐಹೊಳೆ ಬಗ್ಗೆ ಕಾಳಜಿ ತೆಗೆದುಕೊಳ್ಳಿ. ನಾವು ಕಾಳಜಿ ತೆಗೆದುಕೊಳ್ಳಲಿಲ್ಲವಲ್ಲ. ನೀವಾದರೂ ಕಾಳಜಿ ತೆಗೆದುಕೊಳ್ಳಿ. ನಿಮಗೇ ಕಾಳಜಿ ಕೊಡುತ್ತೇವೆ. ನಾವು ಅಲ್ಲಿ ಬಂದು ನಿಮಗೆ ಒಂದು ಮಾಲೆ ಹಾಕುತ್ತೇವೆ.

ಶ್ರೀ ಹೆಚ್.ವೈ. ಮೇಟಿ:- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ನಾನು ಮಾನ್ಯ ಮುಖ್ಯಮಂತ್ರಿಯವರಿಗೆ ಹೇಳುವುದಷ್ಟನ್ನೂ ಹೇಳಿದ್ದೇನೆ. ತಾವೂ ಕೂಡ ಒತ್ತಾಯ ಮಾಡಿ.

ಶ್ರೀ ಜಗದೀಶ್ ಶೇಟ್ಟರ್:- ನಾನು ಒತ್ತಾಯ ಮಾಡುತ್ತಿದ್ದೇನಲ್ಲ.

ಶ್ರೀ ಹೆಚ್.ವೈ. ಮೇಟಿ:- ನೀವೂ ಕಾಳಜಿ ಮಾಡಿ. ನಾವೂ ಕಾಳಜಿ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್:- ಸದನದಲ್ಲಿ ಪ್ರಸ್ತಾಪ ಮಾಡಿ ಕಾಳಜಿ ಮಾಡುವುದು. ಇದನ್ನೇ ಹೇಳುವುದು. ಇದಕ್ಕಿಂತ ಹೆಚ್ಚಿಗೆ ಮಾಡುವುದು ಏನಿದೆ? ಉಳಿದ ಕಾಳಜಿ ನೀವು ಮಾಡಬೇಕಾಗುತ್ತದೆ. ಅದಕ್ಕೆ ಸ್ವಲ್ಪ

ಮಾಡಿಕೊಡಿ ಎಂದು ನಿಮ್ಮನ್ನು ಕೇಳುತ್ತಿದ್ದೇವೆ. ಮಾನ್ಯ ಮುಖ್ಯಮಂತ್ರಿಯವರ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಗಾಗಿ 146 ಕೋಟಿ ರೂ.ಗಳನ್ನು ಮೀಸಲಾಗಿಡಲಾಗಿದ್ದು 26 ಕೋಟಿ ರೂ.ಗಳು ಮಾತ್ರ ಬಿಡುಗಡೆಯಾಗಿದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ:- ಸಾರ್ ಅತ್ತೆ ಮನೆಯಲ್ಲಿನ complaint ಹೇಳುತ್ತಿದ್ದಾರೆ. ಸರಿ ಮಾಡಿ ಕೊಡಿ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಮುಖ್ಯಮಂತ್ರಿಯವರ ಗ್ರಾಮೀಣ ರಸ್ತೆ ಅಭಿವೃದ್ಧಿ ಯೋಜನೆಗಾಗಿ 146 ಕೋಟಿ ರೂ. ಮೀಸಲಾಗಿಡಲಾಗಿದ್ದು 26 ಕೋಟಿ ರೂ.ಗಳು ಬಿಡುಗಡೆಯಾಗಿದ್ದು, 21 ಕೋಟಿ ರೂ.ಗಳು ಖರ್ಚಾಗಿದೆ. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ (KRDCL) ಗಾಗಿ ಒಟ್ಟು 175 ಕೋಟಿ ರೂ.ಗಳಲ್ಲಿ 56 ಕೋಟಿ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. 30 ಕೋಟಿ ರೂ.ಗಳು ಮಾತ್ರ ಖರ್ಚಾಗಿದೆ. ಇದು ಪರಿಸ್ಥಿತಿ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಬಗ್ಗೆ ಹೇಳುವುದಾದರೆ, ಮಾನ್ಯ ಸಚಿವರು ಇಲ್ಲಿದ್ದಿದ್ದರೆ ಚೆನ್ನಾಗಿರುತ್ತಿತ್ತು. ನಿನ್ನೆಯೂ ಮಾನ್ಯ ಅಧ್ಯಕ್ಷರು ಮಾನ್ಯ ಸಚಿವರಿಗೆ ಶೌಚಾಲಯ ನಿರ್ಮಾಣಕ್ಕೆ ಸಂಬಂಧಿಸಿದಂತೆ ಹಣವನ್ನು ಕೊಟ್ಟಿಲ್ಲವೆಂಬ ವಿಷಯವನ್ನು ಪ್ರಸ್ತಾಪಿಸಿದ್ದರು. ಅದಕ್ಕೆ ಕೇಂದ್ರ ಸರ್ಕಾರ ಹಣ ಕೊಟ್ಟಿಲ್ಲವೆಂದು ಹೇಳಿದ್ದರು. ಅದಕ್ಕೆ ಮಾನ್ಯ ಅಧ್ಯಕ್ಷರು ಕೇಂದ್ರ ಸರ್ಕಾರವು ಹಣ ಕೊಟ್ಟಿಲ್ಲವೆಂದರೆ ಮೊದಲು ನೀವು ಹಣ ಕೊಡಿ, ಎಲ್ಲ ವಿಷಯಕ್ಕೂ ಕೇಂದ್ರ ಸರ್ಕಾರದ ಕಡೆ ಕೈ ತೋರಿಸಬೇಡಿ ಎಂದು ಹೇಳಿದರು. ಹಣ ಬಂದೇ ಬರುತ್ತದೆ. ಅದು ಎಲ್ಲಿಯೂ ಹೋಗುವುದಿಲ್ಲ. ಇವರು ಏನೋ ಒಂದಿಷ್ಟು completion certificate ಕೊಡಬೇಕಾಗುತ್ತದೆ. ಅದು Procedure. ಹಣ ಬಂದೇ ಬರುತ್ತದೆ. ನಿಮ್ಮ ಬಜೆಟ್‌ನಿಂದ ಕೊಡಿ ಯಾರು ಬೇಡ ಎಂದು ಹೇಳುತ್ತಾರೆ? 2014-15ನೇ ಸಾಲಿನಲ್ಲಿ 10 ಲಕ್ಷ ಶೌಚಾಲಯಗಳನ್ನು ನಿರ್ಮಾಣ ಮಾಡುತ್ತೇವೆ ಎಂದು ಹೇಳಿದಿರಿ. ಈಗ ನಿಮ್ಮ ಲೆಕ್ಕದ ಪ್ರಕಾರ ಇಲ್ಲಿಯವರೆಗೂ 5,08,000 ಶೌಚಾಲಯಗಳನ್ನು ನಿರ್ಮಾಣ ಮಾಡಿದ್ದೀರಿ. ನಿನ್ನೆ ಮಾನ್ಯ ಅಧ್ಯಕ್ಷರು ಹಾಗೂ ಮಾನ್ಯ ಸದಸ್ಯರಾದ ರಮೇಶ್‌ಕುಮಾರ್‌ರವರು ಹೇಳಿದರು ಏನೆಂದರೆ, ಇದು ಅಧಿಕಾರಿಗಳು

ಕೊಟ್ಟಂತಹ ಲೆಕ್ಕ. ನಾನು ಹಿಂದಿನ ಬಾರಿ ಮಾನ್ಯ ಹೆಚ್.ಕೆ. ಪಾಟೀಲ್‌ರವರಿಗೆ ಹೇಳಿದ್ದೆ. ಇದು ಅಧಿಕಾರಿಗಳು ಕೊಟ್ಟಂತಹ ಲೆಕ್ಕ. ಯಾವುದಾದರೂ ಒಂದು village ಗೆ ಹೋಗಿ random ಆಗಿ ಚೆಕ್ ಮಾಡಿ. ಆ ಲೆಕ್ಕ ಕೊಟ್ಟಿರುವುದು ಸರಿಯಿರುವುದಿಲ್ಲ. ಏಕೆಂದರೆ ನಾನೂ ಗ್ರಾಮೀಣಾಭಿವೃದ್ಧಿ ಸಚಿವನಾಗಿ ಕೆಲಸ ಮಾಡಿದ್ದೇನೆ. ಅದು tally ಆಗುವುದಿಲ್ಲ. ಅದಕ್ಕಾಗಿ ಇವತ್ತು ಏನು 5 ಲಕ್ಷ ಶೌಚಾಲಯಗಳನ್ನು ಕಟ್ಟಿದ್ದೇವೆ ಎಂದು ಹೇಳುತ್ತಾರೆ, ಅದನ್ನು verify ಮಾಡಿ ಮತ್ತು 10 ಲಕ್ಷದ್ದು ನಿಮ್ಮದು ಗುರಿ ಏನಿತ್ತು, ಇನ್ನೆರಡು ತಿಂಗಳಿನಲ್ಲಿ reach ಆಗುವುದಕ್ಕೆ ಸಾಧ್ಯವೇ ಇಲ್ಲ. ಇದು Administration. RDPR ಚೆನ್ನಾಗಿ ಕೆಲಸ ಮಾಡುತ್ತಿದೆ ಎಂದರೆ ಪರಿಸ್ಥಿತಿ ಹಾಗೆಯೇ ಇದೆ. ನೀರು ಶುದ್ಧೀಕರಣ ಘಟಕದ ಬಗ್ಗೆ ಹೇಳುವುದಾದರೆ, ಮಾನ್ಯ ಹೆಚ್.ಕೆ. ಪಾಟೀಲ್‌ರವರು ಅವರ ಅಧಿಕಾರದಲ್ಲಿ ಇಲ್ಲದಿದ್ದಾಗ ನೀರು ಶುದ್ಧೀಕರಣ ಘಟಕವನ್ನು ಹಾಕುವುದರಲ್ಲಿಯೇ ಬಹಳಷ್ಟು ಜನಪ್ರಿಯವಾದರು. ಆದರೆ ಅವರು ಅಧಿಕಾರಕ್ಕೆ ಬಂದಿದ್ದಾರಲ್ಲಾ, ಅಧಿಕಾರ ನಿಮ್ಮ ಕಡೆಗೇ ಇದೆ. ನೀವು ಗುರಿ ಎಷ್ಟು ಇಟ್ಟುಕೊಂಡಿದ್ದೀರಿ? ಒಂದು ವರ್ಷದಲ್ಲಿ 2,000 ನೀರು ಶುದ್ಧೀಕರಣ ಘಟಕ ನಿರ್ಮಾಣ ಮಾಡುವಂತಹ ಗುರಿಯನ್ನು ಇಟ್ಟುಕೊಂಡಿದ್ದೀರಿ. 2014–15ರಲ್ಲಿ ನಿಮ್ಮ performance ಎಷ್ಟು? ಒಂದೂ ನೀರು ಶುದ್ಧೀಕರಣ ಘಟಕವನ್ನು ನಿರ್ಮಾಣ ಮಾಡಿಲ್ಲ. 2013–14 ನೇ ಸಾಲಿನಲ್ಲಿ 582 ಘಟಕಗಳನ್ನು ಹಾಕಿದ್ದೀರಿ. ಏನು ಸಮಸ್ಯೆ? 2,000 ಘಟಕಗಳನ್ನು ಏಕೆ ಹಾಕಲಿಲ್ಲ? ಹಣ ಸಿಗಲಿಲ್ಲವೋ ಹೇಗೆ? ಇದನ್ನು ಮಾನ್ಯ ಹೆಚ್.ಕೆ. ಪಾಟೀಲರು ಹೇಳಬೇಕಾಗುತ್ತದೆ. ಅಲ್ಲಿಯೂ performance ಇಲ್ಲ. ಪ್ರತಿಯೊಂದು ಹಳ್ಳಿಯ ಶೌಚಾಲಯಕ್ಕೂ shower ಕೊಡುತ್ತೇವೆ, ಹೈಟೆಕ್ ಬಾತ್‌ರೂಮ್ ಮಾಡುತ್ತೇವೆ ಎಂದು ಹೇಳಿದರು. ನಿಮಗೆ ಶೌಚಾಲಯವನ್ನೇ ಕೊಡುವುದಕ್ಕೆ ಆಗುವುದಿಲ್ಲ. ಇನ್ನು ಅವರಿಗೆ shower ಕೊಡುತ್ತೀರಾ? ಈ shower ಕೊಡುವ ಆಲೋಚನೆ ಎಲ್ಲಿಂದ ಬಂತು? shower ಗೆ ನೀರು ಬೇಕಲ್ಲವೇ? ಎಲ್ಲಿಂದ ನೀರನ್ನು ತೆಗೆದುಕೊಂಡು ಬರುತ್ತೀರಿ? ಎಷ್ಟು ಕಡೆ shower ಆಗಿದೆ? ಗುರುತಿಲ್ಲ. ಎಲ್ಲೋ ಒಂದು ಕಡೆ model ಮಾಡಿದ್ದಾರೆ.

ಫೋಟೋದಲ್ಲಿ ಚೆನ್ನಾಗಿ ಕಾಣುತ್ತದೆ. ಆದರೆ actually field ನಲ್ಲಿ ಎಷ್ಟು performance ಆಗಿದೆ? ಏನೂ ಆಗಿಲ್ಲ.

ಶ್ರೀ ಲಕ್ಷ್ಮಣ ಸಂಗಪ್ಪ ಸವದಿ:- ಮಾನ್ಯ ಜಗದೀಶ್ ಶೆಟ್ಟರ್‌ರವರೆ, ಅದರ ಜೊತೆಗೆ ಸ್ನಾನ ಮಾಡಿದ ಮೇಲೆ ಆ ಕೂದಲು ಒಣಗಬೇಕೆಂದು hair dryer ಅನ್ನು ಹಾಕಿಸುತ್ತೇವೆ ಎಂದೂ ಹೇಳಿದ್ದರು.

ಶ್ರೀ ಜಗದೀಶ್ ಶೆಟ್ಟರ್:- ಶೌಚಾಲಯ ಭಾಗ್ಯ ಆಯಿತು. ಆಮೇಲೆ ಈಗ ಬಚ್ಚಲು ಭಾಗ್ಯ ಎಂದು announce ಮಾಡಿದರು. ಯಾವ್ಯಾವ ಭಾಗ್ಯಗಳನ್ನು announce ಮಾಡುತ್ತಿದ್ದೀರಿ? ಆ ಭಾಗ್ಯಗಳು ಹಳ್ಳಿಯ ಬಡ ಜನರಿಗೆ ಯಾವಾಗ ಬರುತ್ತದೆ? ಸುಮ್ಮನೆ ಭಾಗ್ಯ. ಈ ರೀತಿ ಆಸೆ ತೋರಿಸಿ ಕೊನೆಗೆ ಅವರ ಜೀವನವನ್ನೆಲ್ಲಾ ದೌರ್ಭಾಗ್ಯ ಮಾಡುತ್ತೀರೋ ಗೊತ್ತಿಲ್ಲ. ಮಾನ್ಯ ಜಯಚಂದ್ರರವರು, ಸಿದ್ದರಾಮಯ್ಯನವರು ಏನೋ ಕೊಡುತ್ತಾರೆ ಎಂದು ಜನರು ನಂಬಿರುತ್ತಾರೆ. ಆಟದ ಮೈದಾನ, ಮತ್ತೊಂದು ಮಾಡುತ್ತೇವೆಂದು Eastman colour ನಲ್ಲಿ ಚಿತ್ರಗಳನ್ನು ಪ್ರಕಟಣೆ ಮಾಡಿದ್ದಾರೆ. ಅವು ಎಲ್ಲಿವೆ ಹೇಳಿ ನಾನೂ ಒಂದು ಬಾರಿ ನೋಡಬೇಕು. ನನ್ನನ್ನೂ ಕರೆದುಕೊಂಡು ಹೋಗಿ.

ಶ್ರೀ ಕೆ. ಶಿವಮೂರ್ತಿ:- ಪಂಚಾಯಿತಿ ಕಾಯ್ದೆ ತಿದ್ದುಪಡಿ ತರುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ಇನ್ನೂ ತಾವು ತಿದ್ದುಪಡಿಯೊಳಗೇ ಇದ್ದೀರಿ. ಆದರೆ ಆ ಯೋಜನೆ ಅನುಷ್ಠಾನ ಎಲ್ಲಿ ಆಗಿದೆ?

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:- ಕೇಂದ್ರ ಸರ್ಕಾರದವರು ಉದ್ಯೋಗ ಖಾತ್ರಿ ಯೋಜನೆದ್ದು ಕಡಿಮೆ ಮಾಡಿದ್ದಾರೆ. ಉದ್ಯೋಗ ಖಾತ್ರಿ ಯೋಜನೆಯನ್ನು ಕೈ ಬಿಟ್ಟಿದ್ದಾರೆ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಆರ್.ಡಿ.ಪಿ.ಆರ್ ಕಮಿಟಿಯಲ್ಲಿ ರಮೇಶ್‌ಕುಮಾರ್‌ರವರ ಅಧ್ಯಕ್ಷತೆಯಲ್ಲಿ ಒಂದು ತಿದ್ದುಪಡಿ ಮಾಡಿದ್ದಾರೆ. ಶಾಸನಸಭೆಯಲ್ಲಿಯೂ discussion ಆಯಿತು. ಇಲ್ಲಿಯವರೆಗೂ ಸದನದ

ಮಟ್ಟಕ್ಕೆ ಬರಲಿಲ್ಲ. ಏಕೆ ಬರಲಿಲ್ಲ? ಅದು ಕುಂಟುತ್ತಿದೆಯೇ? ಕುಂಟಿಕೊಂಡು ಬರುತ್ತಿದೆ. ಅದು ಸದನಕ್ಕೆ ಬರಲು ಎಷ್ಟು ದಿವಸ ಆಗುತ್ತದೆ? ಇನ್ನೂ ಏಕೆ ಬರಲಿಲ್ಲ? ನಂಜಯ್ಯನಮಠರವರ ಅಧ್ಯಕ್ಷತೆಯಲ್ಲಿ ಪಂಚಾಯತ್ ಪುನರ್‌ವಿಂಗಡಣೆ ಮಾಡಿದಿರಿ. ಇದುವರೆಗೂ ಅದು ಏಕೆ ಬರಲಿಲ್ಲ? ಅದರಲ್ಲಿ ಬಹಳಷ್ಟು ಅನ್ಯಾಯವಾಗಿದೆ. ನಂಜಯ್ಯನಮಠರವರ ಮೇಲೆ ನಮಗೆ ಬಹಳಷ್ಟು ಗೌರವವಿತ್ತು. ಒಂದಿಷ್ಟು ಕಡೆ ಅವರು ಸರಿಯಾಗಿ ಮಾಡಿಲ್ಲ. ತಾವು ಅದರ ಬಗ್ಗೆ details ತೆಗೆದುಕೊಂಡು ಬಂದರೆ ನಾವು ಚರ್ಚೆ ಮಾಡುತ್ತೇವೆ. ಕೆಲವು ಗ್ರಾಮ ಪಂಚಾಯಿತಿಗಳನ್ನು ಒಡೆಯುವುದು ಮಾಡುವುದರೊಳಗೆ ಮತ್ತೆ ಅಲ್ಲಿ ರಾಜಕಾರಣ ಬಂದಿದೆ. ಯಾವ ಒಂದು guidelines fix ಮಾಡಿದ್ದರು, ಆ guidelines ಪ್ರಕಾರ ಆಗಲಿಲ್ಲ. ಅದರಲ್ಲಿ ಮತ್ತೆ ರಾಜಕಾರಣ ಮಾಡಿದ್ದಾರೆ.

ಶ್ರೀ ಕೆ. ಶಿವಮೂರ್ತಿ:- ಗ್ರಾಮಸಭೆ, ಜನವಸತಿ ಕಾರ್ಯಕ್ರಮ, ಇವೆಲ್ಲಾ ಕ್ರಾಂತಿಕಾರಿ ಹೆಜ್ಜೆಗಳಲ್ಲವೇ?

ಶ್ರೀ ಜಗದೀಶ್ ಶೆಟ್ಟರ್:- ಇವೆಲ್ಲಾ ಮೊದಲಿನಿಂದಲೂ ಇವೆ, ಹೊಸದಲ್ಲ.

ಶ್ರೀ ಕೆ. ಶಿವಮೂರ್ತಿ:- ಇಲ್ಲ ಗ್ರಾಮಸಭೆ ಒಂದೇ ಇತ್ತು.

ಶ್ರೀ ಜಗದೀಶ್ ಶೆಟ್ಟರ್:- ರಾಜೀವ್‌ಗಾಂಧಿ ಸೇವಾ ಕೇಂದ್ರ ಕಟ್ಟಡದ ಬಗ್ಗೆ ಹೇಳುವುದಾದರೆ, 300 ಕಟ್ಟಡಗಳನ್ನು ನಿರ್ಮಾಣ ಮಾಡುವಂತಹ ಗುರಿಯನ್ನು ಇಟ್ಟುಕೊಂಡಿದ್ದೀರಿ. ಅದರಲ್ಲಿ 169 ಕಟ್ಟಡಗಳನ್ನು ನಿರ್ಮಾಣ ಮಾಡಲಾಗಿದೆ. ಅತ್ಯಂತ ಹಿಂದುಳಿದ ಪರಿಶಿಷ್ಟಜಾತಿ/ಪಂಗಡದವರು ವಾಸಿಸುವ ಕಾಲೋನಿಗಳಲ್ಲಿ ಗಣಕಯಂತ್ರ ಕೇಂದ್ರ ನಿರ್ಮಾಣ ಮಾಡಿ, ಗಣಕ ಯಂತ್ರ ಜ್ಞಾನ ನೀಡಲು ಕ್ರಮ ಕೈಗೊಳ್ಳಲು ನಿಮ್ಮ ಬಜೆಟ್‌ನಲ್ಲಿ ಹೇಳಿದ್ದಿರಿ. ಈಗ ಒಂದೂ ಸ್ಥಾಪನೆ ಆಗಿಲ್ಲ. What is your performance? ಬೀದರ್‌ನಲ್ಲಿ ನೂತನ ಜಿಲ್ಲಾ ಪಂಚಾಯತ್ ಕಟ್ಟಡ ನಿರ್ಮಾಣ ಮಾಡುವುದಾಗಿ ಹೇಳಿದಿರಿ, ಅದು ಆಗಲಿಲ್ಲ. ಎಲ್ಲಾ assurance ಆಗಿ ಉಳಿದಿವೆ. ಪೋಡಿ ಪ್ರಕರಣದ ಬಗ್ಗೆ ಹೇಳುವುದಾದರೆ, ಮಾನ್ಯ ಕಂದಾಯ ಸಚಿವರಿಗೆ ಹೇಳಿದ್ದೆ. ಪ್ರತಿ ಹಂತದಲ್ಲಿಯೂ ಇಲ್ಲಿ discussion ಆಗಿದೆ. ಒಂದು ಕಡೆ ROR ನಲ್ಲಿ ಏನು

correction ಆಗಬೇಕು, ಅದು ವರ್ಷಗಟ್ಟಲೆ ಇರುತ್ತದೆ. ಇವತ್ತು ಎಷ್ಟು ಪೋಡಿ ಪ್ರಕರಣಗಳು ಪೆಂಡಿಂಗ್ ಇವೆ ಎಂದರೆ, 2013–14 ನೇ ಸಾಲಿನಲ್ಲಿ 3,314 ಪೋಡಿ ಪ್ರಕರಣಗಳು ಪೆಂಡಿಂಗ್ ಇವೆ. 2014–15 ನೇ ಸಾಲಿನಲ್ಲಿ ನಿಮ್ಮ ಸರ್ಕಾರದ ಅವಧಿಯಲ್ಲಿ 10,336 ಪೋಡಿ ಪ್ರಕರಣಗಳು ಪೆಂಡಿಂಗ್ ಇದೆ. ಮೊದಲೆಲ್ಲಾ ಪ್ರತಿ ವರ್ಷ 1,000, 2,000 ಪೋಡಿ ಪ್ರಕರಣಗಳು ಪೆಂಡಿಂಗ್ ಇರುತ್ತಿತ್ತು. ಇದೇ ಒಂದು ವರ್ಷದಲ್ಲಿ 10,336 ಪೋಡಿ ಪ್ರಕರಣಗಳು ಪೆಂಡಿಂಗ್ ಇವೆ. ಒಟ್ಟು 41,000 ಪೋಡಿ ಪ್ರಕರಣಗಳು ಪೆಂಡಿಂಗ್ ಇವೆ. ಇಲ್ಲಿ ಇವರು ಮಾರ್ಚ ಮತ್ತು ಏಪ್ರಿಲ್ ತಿಂಗಳಲ್ಲಿ ಮುಗಿಸುತ್ತೇವೆಂದು ಹೇಳಿದ್ದರು. ಈ ಅಂಕಿಸಂಖ್ಯೆಯನ್ನು ನೋಡಿದಾಗ ಇನ್ನು 5 ವರ್ಷಗಳಾದರೂ ಆ ಪೋಡಿ ಪ್ರಕರಣಗಳು ಮುಗಿಯುವುದಿಲ್ಲ ಇದು ಬೆಳೆದುಕೊಂಡು ಹೋಗುತ್ತದೆ. ಅದು ಖಾಲಿ ಇಲ್ಲ, disposal ಇಲ್ಲ.

ಶ್ರೀ ಕೆ. ಶಿವಮೂರ್ತಿ:– ಕಂದಾಯ ಅದಾಲತ್ ಮಾಡಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:– ಕಂದಾಯ ಗ್ರಾಮ ಎಂದು ಹೇಳಿದ್ದೀರಿ. ಅದು ಇನ್ನು ಆಗಿರುವುದಿಲ್ಲ. ಬಂಜಾರ ಕಾಲೋನಿ ಇವೆಲ್ಲವೂ ಆಗಿರುವುದಿಲ್ಲ.

ಶ್ರೀ ಕೆ. ಶಿವಮೂರ್ತಿ:– ನಮ್ಮ ಸರ್ಕಾರವು ಅಧಿಕಾರಕ್ಕೆ ಬಂದ ಮೇಲೆ ನಮ್ಮ ಪ್ರಣಾಳಿಕೆಯಲ್ಲಿ ಇದೆ. ಕಂದಾಯ ಗ್ರಾಮವನ್ನು Revenue ಗ್ರಾಮವನ್ನಾಗಿ ಮಾಡುವುದಕ್ಕಾಗಿ ತಜ್ಞರ ಸಮಿತಿಯನ್ನು ರಚನೆ ಮಾಡಿದ್ದೇವೆ. ಈ ಬಗ್ಗೆ tour ಮಾಡಿ ಮಾಹಿತಿಯನ್ನು ಸಂಗ್ರಹಮಾಡಿ ಈ ಬಗ್ಗೆ ತಜ್ಞರ ಸಮಿತಿಯು ಸರ್ಕಾರಕ್ಕೆ ಒಂದು ವರದಿಯನ್ನು ಕೊಟ್ಟಿದೆ.

ಶ್ರೀ ಜಗದೀಶ್ ಶಟ್ಟರ್:– ಇದುವರವಿಗೂ ಕಂದಾಯ ಗ್ರಾಮ ಎಂದು declared ಮಾಡಿರುವುದಿಲ್ಲ. ನೀವು Order ಮಾಡಿರುವುದನ್ನು ಒಗೆಯಿರಿ.

ಶ್ರೀ ಕೆ. ಶಿವಮೂರ್ತಿ:– ಇದು order ಅಲ್ಲ. ತಾವು ಅಧಿಕಾರದಲ್ಲಿದ್ದಾಗ ಇದು ಆಗಲಿಲ್ಲ.

ಶ್ರೀ ಜಗದೀಶ್ ಶೆಟ್ಟರ್:– ಇನ್ನು ವಸತಿ ಇಲಾಖೆಯೊಳಗಡೆ ರಾಜೀವ್ ಗಾಂಧಿ ವಸತಿ ನಿಗಮದಿಂದ 3 ಲಕ್ಷ ಮನೆಗಳನ್ನು ನಿರ್ಮಾಣ

ಮಾಡುತ್ತೇವೆಂದು ಹೇಳಿದರು. ಆದರೆ ಇಲ್ಲಿಯವರೆಗೆ ಅಂದರೆ ಡಿಸೆಂಬರ್ ಒಳಗಡೆ 1,70,000 ಮನೆಗಳನ್ನು ನಿರ್ಮಾಣ ಮಾಡಿದ್ದಾರೆ. ನಗರಾಭಿವೃದ್ಧಿ ಇಲಾಖೆಯ ಬಗ್ಗೆ ಹೇಳುವುದಾದರೆ ಪ್ರತಿಯೊಂದು ಮಹಾನಗರಗಳಿಗೆ 100 ಕೋಟಿ ರೂಪಾಯಿಗಳನ್ನು ಮುಖ್ಯ ಮಂತ್ರಿಗಳ ವಿಶೇಷ ನಿಧಿಯಿಂದ ಕೊಡುತ್ತೇವೆಂದು ಹೇಳಿದರು, ಕೊಡಲಿಲ್ಲ. ಇದುವರೆಗೂ ಹಣ ಬಿಡುಗಡೆಯಾಗಿರುವುದಿಲ್ಲ. ಹಿಂದೆ 200 ಕೋಟಿ ರೂಪಾಯಿಗಳು ಬಿಡುಗಡೆಯಾಗಿರುವುದು ಅದು ಇನ್ನು ಬರಬೇಕಾಗಿರುತ್ತದೆ. ಇದಕ್ಕಾಗಿ ಖರ್ಚು ಮಾಡಿರುವ ಹಣ ಬಂದಿರುವುದಿಲ್ಲ. 3rd Hundred crores ಅದು ಸಹ ಇನ್ನು ಬಂದಿರುವುದಿಲ್ಲ. ಬೆಳಗಾಂ ಅಧಿವೇಶನದಲ್ಲಿ ಮಾನ್ಯ ಸಚಿವರಾದ ದಿನೇಶ್ ಗುಂಡೂರಾವ್ ಮತ್ತು ನಾವು ಅಲ್ಲಿಯ ಮೇಯರ್, ಉಪಮೇಯರ್ ಮತ್ತು ಶಾಸಕರುಗಳು ಕಾಂಗ್ರೆಸ್ ಮತ್ತು ಜೆಡಿಎಸ್ ಎಲ್ಲಾ ಶಾಸಕರುಗಳು ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಒಂದು delegation ಹೋಗಿ ಅವರಲ್ಲಿ request ಮಾಡಿದ್ದೆವು. ಮೊನ್ನೆ ಮಳೆ ಬಂದು ಹುಬ್ಬಳ್ಳಿ-ಧಾರವಾಡ ರಸ್ತೆಗಳು ಹದಗೆಟ್ಟಿದೆ, ಇದಕ್ಕಾಗಿ ಒಂದು ವಿಶೇಷವಾದ ಅನುದಾನವನ್ನು declare ಮಾಡಿ ಎಂದು ಹೇಳಿದ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಈಗ ಅಧಿವೇಶನವು ಮುಗಿಯಲಿ, ಈಗ ನಾನು declare ಮಾಡುವುದಿಲ್ಲ. ಅಧಿವೇಶನ ಮುಗಿದ ಮೇಲೆ declare ಮಾಡುತ್ತೇನೆಂದು ಹೇಳಿದರು. ಇದುವರೆಗೂ ಆ ಬಗ್ಗೆ ಏನೂ ಸುದ್ದಿ ಇರುವುದಿಲ್ಲ. ಮಾನ್ಯ ಸಚಿವರಾದ ದಿನೇಶ್ ಗುಂಡೂರಾವ್‌ರವರು ಏಕೋ ಸುಮ್ಮನೆ ಕುಳಿತುಬಿಟ್ಟಿದ್ದಾರೆ. ಅವರು ಆಹಾರ ಇಲಾಖೆಗೆ ಸಂಬಂಧಿಸಿದಂತೆ ಹೈರಾಣ ಆಗಿದ್ದಾರೆ. ಅವರು ಇದು ಸಾಕಾಗಿದೆ ಏನು ಪ್ರಯೋಜನವಿಲ್ಲ ಎಂದು ಬಿಟ್ಟುಬಿಟ್ಟಿದ್ದಾರೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಏನು response ಕೊಟ್ಟಿಲ್ಲವೆಂದು ಅವರು ಸಹ ಸುಮ್ಮನೆ ಕುಳಿತುಬಿಟ್ಟಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್ (ಮಾನ್ಯ ಆಹಾರ ಮತ್ತು ನಾಗರೀಕ ಪೂರೈಕೆ ಹಾಗೂ ಗ್ರಾಹಕ ವ್ಯವಹಾರಗಳು ಸಚಿವರು):- ಮಾನ್ಯ ವಿರೋಧಪಕ್ಷದ ನಾಯಕರೆ, ಈ ಸಂಬಂಧ ಎಲ್ಲಾ proposals ಗಳು ಹೋಗಿದೆ. ನೀವು ಏತಕ್ಕಾಗಿ ಇಷ್ಟು ಆತುರಪಡುತ್ತಿದ್ದೀರಲ್ಲಾ? ಅದಕ್ಕಾಗಿ ಇನ್ನು ಸಮಯ ಇದೆ.

ಶ್ರೀ ಜಗದೀಶ್ ಶೆಟ್ಟರ್:- ನೀವು ಕಳೆದ 6 ತಿಂಗಳುಗಳಿಂದ ಹೇಳುತ್ತಿದ್ದೀರಿ.

ಶ್ರೀ ದಿನೇಶ್ ಗುಂಡೂರಾವ್:- ಹಿಂದೆ ಹೋಗುವಂತಹ ಪ್ರಶ್ನೆಯೇ ಇಲ್ಲ. ಅದು ಇನ್ನು ಉನ್ನತಮಟ್ಟಕ್ಕೆ ಹೋಗುತ್ತದೆ. ನಿಮ್ಮ ಕಾಲದಲ್ಲಿ ಏನೂ ಮಾಡುವುದಕ್ಕೆ ಆಗಲಿಲ್ಲ. ಅದೆಲ್ಲವನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ನಮಗೆ ಕೆಲಸ ಆಗಿರುವುದು ಬೇಕಾಗಿದೆ performance ಬೇಕಾಗಿದೆ. ಇನ್ನು ಎರಡು ತಿಂಗಳು ಮಾತ್ರ ಉಳಿದಿದೆ.

ಶ್ರೀ ದಿನೇಶ್ ಗುಂಡೂರಾವ್:- ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 15 ಲಕ್ಷ ರೇಷನ್ ಕಾರ್ಡ್‌ನ್ನು ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ನಾನು ನಿಮ್ಮ ಇಲಾಖೆಯ ಬಗ್ಗೆ ಹೇಳುತ್ತಿಲ್ಲ. ತಾವು ನಮ್ಮ ಹುಬ್ಬಳ್ಳಿ-ಧಾರವಾಡದ In-Charge Minister ಆಗಿದ್ದೀರಿ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ದಿನೇಶ್ ಗುಂಡೂರಾವ್:- ತಾವು ಆ ಜಿಲ್ಲೆಯಿಂದ ಆಯ್ಕೆಯಾಗಿ ಮುಖ್ಯಮಂತ್ರಿಗಳಾಗಿದ್ದವರು.

ಶ್ರೀ ಜಗದೀಶ್ ಶೆಟ್ಟರ್:- ತಾವು ಹುಬ್ಬಳ್ಳಿ-ಧಾರವಾಡಕ್ಕೆ ನ್ಯಾಯವನ್ನು ಒದಗಿಸಿಕೊಡಿ. ಹುಬ್ಬಳ್ಳಿ-ಧಾರವಾಡಕ್ಕೆ ಏನು ಬರುತ್ತದೆಯೋ ಅದು ಬರಲಿ. ನೀವು District Minister ಆಗಿ ಏನೋ extra care ತೆಗೆದುಕೊಂಡಿದ್ದೀರಿ ಏನೂ ಕೆಲಸಗಳು ಆಗುತ್ತಿಲ್ಲ. ನಿಮ್ಮನ್ನು blame ಮಾಡುವುದರಿಂದ ಏನೂ ತಪ್ಪಿಲ್ಲ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ಪಂದನೆ ಮಾಡದೆ ಇದ್ದರೆ ನಾವು ಮತ್ತು ನೀವು ಏನು ಮಾಡುವುದಕ್ಕಾಗುತ್ತದೆ? This is the state of affairs. ಈ ರೀತಿಯಾಗಿ ಪರಿಸ್ಥಿತಿಯಾಗಿದೆ. ಇದರ ಜೊತೆಗೆ ಬೇರೆ ಬೇರೆ ಇಲಾಖೆಯ ಯೋಜನೆಗಳಿಗೆ ಎಷ್ಟೆಷ್ಟು ಹಣ ಬಿಡುಗಡೆಯಾಗಿದೆ ಎಂದು ಹೇಳುವುದಾದರೆ, ಗುಲ್ಬರ್ಗಾ, ಸಿಂಗಟಾಲೂರು ಏತನೀರಾವರಿ, ಮುಲ್ಲಾಮಾರಿ, ಇವೆಲ್ಲಾ ಯೋಜನೆಗಳು ಇವೆ. ಇದಕ್ಕಾಗಿ 2015-15ನೇ ಸಾಲಿಗೆ 239 ಕೋಟಿ ರೂಪಾಯಿಗಳೂ ಹಂಚಿಕೆಯಾಗಿದೆ. ಇದಕ್ಕಾಗಿ 96 ಕೋಟಿ ರೂಪಾಯಿಗಳು

ಬಿಡುಗಡೆಯಾಗಿದೆ. ಬೆಣ್ಣೆತೊರಾ, ಅಮರ್ಜಾ, ಸಿಂಗಟಾಲೂರು, ಮುಲ್ಲಾಮಾರಿ, ಗಂಡೂರಿನಾಲಾ, ಚುಲ್ಕಿನಾಲಾ, ಸೌದಾಗಾರ, ತುಂಗಭದ್ರಾ ನಾಲಾ, ಇವೆಲ್ಲಾ ಆಧುನೀಕರಣಕ್ಕೂ 2014-15ನೇ ಸಾಲಿನ ಬಜೆಟ್‌ನಲ್ಲಿ 239 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದರು. ಇದಕ್ಕಾಗಿ 96 ಕೋಟಿ ರೂಪಾಯಿಗಳು ಮಾತ್ರ ಬಿಡುಗಡೆಯಾಗಿದೆ. ಇನ್ನು ಎರಡು ತಿಂಗಳು ಮಾತ್ರ ಉಳಿದಿದೆ. ಏನೂ ಕೆಲಸ ಮಾಡಿರುವುದಿಲ್ಲ. ಇದುವರೆಗೂ ಏನೂ performance ಇರುವುದಿಲ್ಲ. ಧಾರವಾಡ ಜಿಲ್ಲೆಯೊಳಗಡೆ ಬೇಡ್ತಿನದಿಯಿಂದ ಕೆರೆಗಳನ್ನು ತುಂಬಿಸುವಂತಹ ಯೋಜನೆ ಇದು ಒಂದು ಹೊಸ ಯೋಜನೆಯಾಗಿದೆ. ಈ ಬಗ್ಗೆ ಘೋಷಣೆಯನ್ನು ಸಹ ಮಾಡಿದ್ದರು. ಅದರ ಬಗ್ಗೆ ಏನು ಚಕಾರ ಇಲ್ಲ, ಏನಾಯಿತೊ ಅದು ಸಹ ಗೊತ್ತಿಲ್ಲ. ಜಮಖಂಡಿ ತಾಲ್ಲೂಕಿನ ವೆಂಕಟೇಶ್ವರ, ಅಥಣಿ ತಾಲ್ಲೂಕಿನ ಹಿಪ್ಪರಗಿ, ಐನಾಪುರದಿಂದ ಕೆಂಪಾವಾಡ ಬಸವೇಶ್ವರ, ಸಾಸುವೆಹಳ್ಳಿಯ ಹತ್ತಿರ.. ಚೆನ್ನಗಿರಿ ಕಸಬಾ ಹೋಬಳಿ ಕೆರೆಗಳಿಗೆ ನೀರು ತುಂಬಿಸುವಂತಹ ಯೋಜನೆಯಾಗಿರುವುದು. ಬೆಳಗಾಂ ಜಿಲ್ಲೆಯಿಂದ ಘಟಪ್ರಭಾ ಯೋಜನೆಯಿಂದ ವೀರಭದ್ರೇಶ್ವರ ಏತ ನೀರಾವರಿ ಯೋಜನೆ ಇಲ್ಲಿಯವರೆಗೆ ಆ ಬಗ್ಗೆ ಚಕಾರವೇ ಇಲ್ಲ. ಅದು ಎಲ್ಲಿಗೆ ಬಂತು, DPR ಆಯಿತು, ಏನಾಯಿತು ಆ ಬಗ್ಗೆ ಸುದ್ದಿಯೇ ಇಲ್ಲ. ನಮ್ಮ ಉತ್ತರ ಕರ್ನಾಟಕದ ಮಾನ್ಯ ಸಚಿವರಾದ ಎಂ.ಬಿ. ಪಾಟೀಲ್‌ರವರು ಈ ಬಗ್ಗೆ ಹೇಳಬೇಕು. ಈ ಬಗ್ಗೆ ನೀವಾದರೂ ಸಹ ಹೇಳಿ. ಹೀಗಾಗಿ ಅಲ್ಲಿಯ ಪರಿಸ್ಥಿತಿ ಹೀಗೆ ಇದೆ. ಡಾ॥ ನಂಜುಂಡಪ್ಪ ವರದಿಯೂ ಹಾಗೆಯೇ ಬಿತ್ತು.

ಶ್ರೀ ಪಿ.ಎಂ. ಅಶೋಕ್:- ಮಾನ್ಯ ಜಗದೀಶ್ ಶೇಟ್ಟರ್‌ರವರೆ, ನಾನು ಒಂದು clarification ಕೊಡುತ್ತೇನೆ. ತಾವು ವೀರಭದ್ರೇಶ್ವರ ಏತ ನೀರಾವರಿ ಯೋಜನೆಯ ಬಗ್ಗೆ ಹೇಳಿದ್ದೀರಿ. ಅದು ಇನ್ನು 15 ದಿನದೊಳಗಾಗಿ tender ಕರೆಯುವ ಹಂತದಲ್ಲಿದೆ. Tender ಕರೆಯುವ ಸಂಬಂಧ ಎಲ್ಲವೂ ರೆಡಿಯಾಗಿದೆ. ಅದಕ್ಕಾಗಿ ನಾನು ತಮಗೆ ಹೇಳುವುದಕ್ಕೆ ಬಂದಿದ್ದೇನೆ. ಟೆಂಡರ್ ಕರೆಯುತ್ತಾರೆ ತಾವು ನೋಡಬಹುದು. ನೀವು allocation ಮಾಡಿದ ಮೇಲೆ ತಾನೆ allot ಮಾಡುವುದು.

ಶ್ರೀ ಜಗದೀಶ್ ಶೆಟ್ಟರ್:- ಇವೆಲ್ಲವೂ ಯೋಜನೆಗಳ ಬಗ್ಗೆ ಆಯಿತು. ಇನ್ನು ಬಹಳಷ್ಟು ಅಂಕಿಸಂಖ್ಯೆಗಳು ಇವೆ. ಅವೆಲ್ಲವನ್ನು ಪ್ರಸ್ತಾಪ ಮಾಡುವುದಕ್ಕೆ time ಇಲ್ಲ. ಈಗ ನಾನು ಇಷ್ಟು ಹೇಳಿ ಮುಗಿಸುತ್ತೇನೆ. ಮುಂದೆ Budget Session ನಲ್ಲಿ ಎಲ್ಲೆಲ್ಲಿ performance ಆಗಿಲ್ಲವೆಂದು ಹೇಳುತ್ತೇನೆ. ಪ್ರತಿಯೊಂದು department ಒಳಗಡೆ ಏನೇನು ಪರಿಸ್ಥಿತಿ ಇದೆ, ಎಲ್ಲಾ ಇಲಾಖೆಯ ಪರಿಸ್ಥಿತಿ ಹೇಗಿದೆ, ಇಲಾಖೆಯವರು ಎಷ್ಟು efficient ಆಗಿ ಕೆಲಸ ಮಾಡುತ್ತಿದ್ದಾರೆ. ಯಾವ IAS ಅಧಿಕಾರಿಗಳು, Principal Secretary ಯವರುಗಳು, ಯಾವ ಇಲಾಖೆಯ ಅಧಿಕಾರಿಗಳು ಇದು ನನ್ನ ಕೆಲಸ, ಇದು ಸರ್ಕಾರದ ಕೆಲಸ ಇದನ್ನು ನಾನು ಮಾಡಬೇಕೆಂದು ಆ zeal ನಿಂದ ಯಾರು ಕೆಲಸ ಮಾಡುತ್ತಿಲ್ಲ. ಇದು ಸಮಸ್ಯೆ ಬರುವಂತಹದ್ದು. ಆ ಜೀಲ್ ಬರುವಂತಹದ್ದು, ಒಂದೆರಡು commitment ಇದೆಯಲ್ಲಾ, ಆ commitment ಇಲ್ಲದೆ ಇರುವಂತಹ ಪರಿಸ್ಥಿತಿ ಅಧಿಕಾರಿಗಳಲ್ಲಿ ಇದೆ. ಇದು ಒಂದು ಜಿಡ್ಡುಗಟ್ಟಿರುವಂತಹ ವ್ಯವಸ್ಥೆಯಾಗಿದೆ. ಏಕೆ ಬಿಡಿ ಏನು ಕೆಲಸ ಮಾಡಬೇಕು, ನಮಗೇನಾಗಬೇಕು, ಆ ಒಂದು commitment ಇರಬೇಕಲ್ಲಾ ಅದು ಅಧಿಕಾರಿಗಳಲ್ಲಿ ಇಲ್ಲ. ಇಲ್ಲಿ ವ್ಯವಸ್ಥೆ ಕೆಟ್ಟುಹೋಗಿದೆ, ಈ ಸರ್ಕಾರವು ಜೀವಂತವಾಗಿಲ್ಲ, ಸರ್ಕಾರವು ಇದೆಯೋ ಇಲ್ಲವೋ ಎನ್ನುವಂತಹ ಪರಿಸ್ಥಿತಿಯಲ್ಲಿ ಪರಿಸ್ಥಿತಿ ನಿರ್ಮಾಣವಾಗಿದೆ ಎಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ. ಸರ್ಕಾರವು ICU ನಲ್ಲಿದೆ.

ಶ್ರೀ ಪ್ರಮೋದ್ ಮಧ್ವರಾಜ್:- ನಿಮ್ಮ ಕಾಲದಲ್ಲಿ ಸರ್ಕಾರ I.C.U. ನಲ್ಲಿತ್ತು.

ಶ್ರೀ ಪಿ.ಎಂ. ಅಶೋಕ್:- ರಾಮದುರ್ಗ-ಬಾದಾಮಿ ರಸ್ತೆ ಅದು K-SHIP ದು ಈ ಬಗ್ಗೆ ಟೆಂಡರ್ ಆಗಿದೆ. ಹಳೆಯ ಟೆಂಡರ್ ಆಗಿರುವುದು cancel ಆಗಿದೆ. ಈ ಬಗ್ಗೆ tender ಆಗಿ work order ಅನ್ನು ಕೊಟ್ಟಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ರಾಮದುರ್ಗ ರಸ್ತೆಯು ಹಾಳಾಗಿರುತ್ತದೆ.

ಶ್ರೀ ಪಿ.ಎಂ. ಅಶೋಕ್:- ಈ ಬಗ್ಗೆ ನನಗೆ ಗೊತ್ತಿದೆ, ನಾನು ಗಲಾಟೆ ಮಾಡಿ ನಾವು re-tender ಮಾಡಿಸಿ ಹಳೆಯ ಕಂಟ್ರಾಕ್ಟ್‌ದಾರರನ್ನು ವಜಾ ಮಾಡಿಸಿದ್ದೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಿಮ್ಮ ರಾಮದುರ್ಗ ರೋಡಿನ ಮೇಲೆ ಯಾರು ತಿರುಗಾಡುವ ಹಾಗಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ನಿಮ್ಮ ರಾಮದುರ್ಗವು ಸ್ಮಶಾನವಾಗಿದೆ.

ಶ್ರೀ ಪಿ.ಎಂ. ಅಶೋಕ್:- ನೀವೇ ಮೊದಲು ರಾಮದುರ್ಗವನ್ನು ಸ್ಮಶಾನ ಮಾಡಿರುವುದು. ಆಗ ನಿಮ್ಮ ಸರ್ಕಾರವೇ ಅಧಿಕಾರದಲ್ಲಿತ್ತು. ನೀವು ಆಗ ಏನು improve ಮಾಡಿದ್ದೀರಿ?

ಶ್ರೀ ಜಗದೀಶ್ ಶೆಟ್ಟರ್:- ಹೌದು ಅದನ್ನು ನಾವೇ ಮಾಡಿರುವುದು.

ಶ್ರೀ ಪಿ.ಎಂ. ಅಶೋಕ್:- ನಾವು ಕಾಂಗ್ರೆಸ್ ಶಾಸಕರೆಂದು ನೀವು ರಸ್ತೆಗೆ ಹಣ ಬಿಡುಗಡೆ ಮಾಡಲಿಲ್ಲ. ನೀವು ಸವದತ್ತಿ, ಬೈಲಹೊಂಗಲ ಎಂದು ಮಾಡಿಕೊಂಡಿರಿ, ಇನ್ನು 15 ದಿನದೊಳಗಾಗಿ ಕೆಲಸ ಪ್ರಾರಂಭವಾಗುತ್ತದೆ. ಅದರ ಬಗ್ಗೆ ಸುಮ್ಮನೆ ಏತಕ್ಕಾಗಿ ಮಾತನಾಡುತ್ತೀರಿ.?

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಅಧ್ಯಕ್ಷರು:- ಮಾನ್ಯ ವಿರೋಧಪಕ್ಷದ ನಾಯಕರೆ ತಮಗೆ ಮಾತನಾಡಲು ಇನ್ನು ಎಷ್ಟು ಸಮಯ ಬೇಕು? ಇನ್ನು ಬೇರೆ subject ಗಳು ಚರ್ಚೆಗೆ ಇದೆ.

ಶ್ರೀ ಜಗದೀಶ್ ಶೆಟ್ಟರ್:- ಇನ್ನು half an hour ನಲ್ಲಿ ನಾನು ಮಾತನಾಡಿ ಮುಗಿಸುತ್ತೇನೆ. ತಾವು ನಾಳೆ continue ಮಾಡಿ ಎಂದು ಹೇಳಿದರೆ ಮಾಡುತ್ತೇನೆ.

ಅಧ್ಯಕ್ಷರು:- ತಾವು 5 ಗಂಟೆಯೊಳಗಾಗಿ ತಮ್ಮ ಭಾಷಣವನ್ನು ಮುಗಿಸಿಬಿಡಿ.

ಶ್ರೀ ಜಗದೀಶ್ ಶೆಟ್ಟರ್:- 5 ಗಂಟೆಯೊಳಗಡೆ ಮುಗಿಯುವುದಿಲ್ಲ. ಇನ್ನು ಒಂದೆರಡು important subjects ಚರ್ಚೆ ಮಾಡುವುದು ಇದೆ.

ಅಧ್ಯಕ್ಷರು:- ಇನ್ನು ಬಹಳಷ್ಟು ವಿಷಯಗಳು ಇವೆ.

ಶ್ರೀ ಜಗದೀಶ್ ಶೆಟ್ಟರ್:- ಇನ್ನು important subjects ಗಳು ಇವೆ. ತಾವು ನಾಳೆ half an hour ಚರ್ಚೆಗೆ ಅವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು:- O.K. ಈಗ ನಿಯಮ 69ರ ಮೇರೆಗೆ ಚರ್ಚೆಯನ್ನು ತೆಗೆದುಕೊಳ್ಳೋಣ. ಬಾಕಿ ಉಳಿದಿರುವುದನ್ನು ಪೂರೈಸಿಬಿಡೋಣ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಸಭಾಧ್ಯಕ್ಷರೆ, ಬೆಳಿಗ್ಗೆ Zero Hour ನಲ್ಲಿ PWD Minister ರವರಿಂದ ಉತ್ತರ ಕೊಡಿಸುತ್ತೇನೆಂದು ತಾವು ಹೇಳಿದ್ದೀರಿ. ಉತ್ತರವನ್ನು ಕೊಡಿಸಿರುವುದಿಲ್ಲ. ಈ ಬಗ್ಗೆ ಮಾನ್ಯ ಕಾನೂನು ಸಚಿವರು ಹೇಳಬೇಕು.

ಅಧ್ಯಕ್ಷರು:- ಅವರು ಸದನಕ್ಕೆ ಬಂದ ಕೂಡಲೆ ಅವರಿಂದ ಉತ್ತರವನ್ನು ಕೊಡಿಸುತ್ತಾರೆ.

ಶ್ರೀ ಗೋವಿಂದ ಎಂ. ಕಾರಜೋಳ:- ನಾವು ಬೆಳಗಿನಿಂದ ಕಾಯುತ್ತಾ ಕುಳಿತಿದ್ದೇವೆ. ಅವರು ಬಂದ ಕೂಡಲೆ ಉತ್ತರವನ್ನು ಕೊಡಿಸಿ.

ಅಧ್ಯಕ್ಷರು:- ಈಗ ಅದನ್ನು ಪೂರೈಸಿಬಿಡೋಣ. ಮಾನ್ಯ ಅಪ್ಪಚ್ಚುರಂಜನ್‌ರವರೆ, ಒತ್ತುವರಿಗೆ ಸಂಬಂಧಿಸಿದಂತೆ ತಾವು ಮಾತನಾಡಿ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪಕಾಲಾವಧಿ ಚರ್ಚೆ

ವಿಷಯ: ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಸರ್ಕಾರಿ ಜಮೀನುಗಳನ್ನು ಒತ್ತುವರಿ ಮಾಡಿಕೊಂಡು ವ್ಯವಸಾಯ ಮಾಡುತ್ತಿರುವ ಸಣ್ಣ ರೈತರುಗಳನ್ನು ತೆರವುಗೊಳಿಸುತ್ತಿರುವುದರಿಂದ ಉಂಟಾಗಿರುವ ಆತಂಕದ ಪರಿಸ್ಥಿತಿಯ ಬಗ್ಗೆ.